ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಆಗಸ್ಟ್ 14 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 119 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4



ಬಾಲ್ಯವಿವಾಹ ತಡೆಗೆ ನಾಳೆಯಿಂದ ಮೈಸೂರಲ್ಲಿ ಫೀಲ್ಡ್‌ಗಿಳಿಯಲಿದೆ

ಅಕ್ಕ ಪಡೆ



ಬೆಂಗಳೂರು, ಆ.13(ಕೆಎಂಶಿ)–ಮೈಸೂರು ಸೇರಿ ಮೂರು ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಗೆ ಆ.15ರಿಂದ 'ಅಕ್ಕ ಪಡೆ' ಫೀಲ್ಡ್‌ಗಿಳಿಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಆರ್.ಹೆಬ್ಬಾಳ್ಕರ್ ವಿಧಾನ ಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸಿ.ಬಿ.ಸುರೇಶ್ ಬಾಬು ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಆಗಸ್ಟ್ 15ರಂದು ಮೈಸೂರು, ಬೆಳಗಾವಿ, ಮಂಗಳೂರಿನಲ್ಲಿ 'ಅಕ್ಕ ಪಡೆ' ಕಾರ್ಯ ಆರಂಭವಾಗಲಿದೆ. ಪಡೆಯಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿ, ಎನ್‌ಸಿಸಿ ಹಿರಿಯ ಕೇಡರ್ ಇರಲಿದ್ದು ಇಲಾಖೆ ವಾಹನ ನೀಡಲಾಗುವುದು. ತಂಡ ಮೊದಲ ಹಂತದಲ್ಲಿ ಕಾಲೇಜು ಬಿಟ್ಟವರ ಮಾಹಿತಿ ಪಡೆಯಲಿದೆ ಎಂದರು.



ಲಕ್ಷ್ಮಿ ಆರ್.ಹೆಬ್ಬಾಳ್ಕರ್

ಸಾಮಾಜಿಕ ಪಿಡುಗಾಗಿರುವ ಬಾಲ್ಯ ವಿವಾಹವನ್ನು ಪರಿಣಾಮಕಾರಿಯಾಗಿ ತಡೆಯಲು ಹತ್ತು ಇಲಾಖೆಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಇದನ್ನು ಬೇರು ಮಟ್ಟದಿಂದ ▶ 6ನೇ ಪುಟಕ್ಕೆ

ಮಕ್ಕಳ ರಕ್ಷಣೆಗೆ ಬದ್ಧ

"ಮಕ್ಕಳ ಸಹಾಯವಾಣಿ 1098, ವಾರದ 7 ದಿನ 24 ಗಂಟೆ ಕಾರ್ಯ ನಿರ್ವಹಿಸಲಿದೆ, ಸಂಕಷ್ಟದಲ್ಲಿರುವ ಮಕ್ಕಳು ಹಾಗೂ ಸಂತ್ರಸ್ತರು ಯಾವುದೇ ಸಮಯದಲ್ಲಿ ಕರೆ ಮಾಡಿದರೂ ಮಕ್ಕಳ ರಕ್ಷಣೆಗೆ ಇಲಾಖೆ ಮುಂದಾಗಲಿದೆ. ರಾಜ್ಯದಲ್ಲಿ 26 ಸಾವಿರ ಬಾಲ ಗರ್ಭಿಣಿಯರು ಇರುವ ಮಾಹಿತಿ ಇದೆ. 4 ತಿಂಗಳಲ್ಲಿ 900ಕ್ಕೂ ಹೆಚ್ಚು ಬಾಲಕಿಯರ ಮೇಲೆ ಅತ್ಯಾಚಾರವಾಗಿದೆ. ಆರೋಗ್ಯ, ಪೊಲೀಸ್, ಶಿಕ್ಷಣ, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಸಮನ್ವಯತೆಯಿಂದ ಈ ಪಿಡುಗನ್ನು ನಿಯಂತ್ರಿಸಬೇಕಿದೆ. **–ಲಕ್ಷ್ಮಿ ಹೆಬ್ಬಾಳ್ಕರ್, ಸಚಿವೆ**

ಸಿಇಟಿ, ನೀಟ್ ಆಯ್ಕೆ ದಾಖಲೆಗೆ ಪರಿಷ್ಕೃತ ವೇಳಾಪಟ್ಟಿ


ಬೆಂಗಳೂರು: ಯುಜಿ ಸಿಇಟಿ/ನೀಟ್ ಕೋರ್ಸ್‌ಗಳಿಗೆ ಮೊದಲ



ಸುತ್ತಿನಲ್ಲಿ ಸೀಟು ಹಂಚಿಕೆಯಾದವರಿಗೆ ಆಯ್ಕೆ ದಾಖಲಿಸಲು ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದ್ದು, ತಪ್ಪದೆ ನಿಗದಿತ ಅವಧಿಯಲ್ಲಿ ಶುಲ್ಕ ಪಾವತಿಸಿ ಕಾಲೇಜಿಗೆ ಪ್ರವೇಶ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸಲಹೆ ನೀಡಿದ್ದಾರೆ.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ, ಬಿ–ಫಾರ್ಮ್, ಫಾರ್ಮ್–ಡಿ, ಯೋಗ ಮತ್ತು ನ್ಯಾಚುರೋಪತಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್, ಆರ್ಕಿಟೆಕ್ಚರ್, ಬಿಎಸ್‌ಸಿ ನರ್ಸಿಂಗ್, ಹೋಮಿಯೋಪಥಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವವರು ಆಯ್ಕೆ ದಾಖಲಿಸಲು ಆ.14ರಂದು ಬೆಳಿಗ್ಗೆ 11 ಗಂಟೆವರೆಗೆ ಅವಕಾಶ ಕಲ್ಪಿಸಲಾಗಿದೆ. ▶ 6ನೇ ಪುಟಕ್ಕೆ

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ಶಾಸಕ ಸ್ಥಾನದ ಜೊತೆಗೆ ಕಾಂಗ್ರೆಸ್ ತೊರೆಯಲು ಮಾಜಿ ಸಚಿವ ಕೆ.ಎನ್.ರಾಜಣ್ಣ ಚಿಂತನೆ

ಆಪ್ತ ಸಚಿವರ ಮೂಲಕ ಸಿಎಂ ಸಿದ್ದರಾಮಯ್ಯ ಮನವೊಲಿಕೆ

ಬೆಂಗಳೂರು, ಆ.13(ಕೆಎಂಶಿ)– ಸಚಿವ ಸ್ಥಾನದಿಂದ ಪದಚ್ಯುತಗೊಂಡು ಅವಮಾನಿತರಾಗಿರುವ ಕೆ.ಎನ್.ರಾಜಣ್ಣ ವಿಧಾನಸಭಾ ಹಾಗೂ ಕಾಂಗ್ರೆಸ್ ಸದಸ್ಯತ್ವಕ್ಕೂ ರಾಜೀನಾಮೆ ನೀಡಲು ಮುಂದಾಗಿದ್ದಾರೆ. ಸತ್ಯ ಹೇಳುವವರಿಗೆ ಪಕ್ಷದಲ್ಲಿ ಬೆಲೆಯಿಲ್ಲ. ಇಂತಹ



ಕೆ.ಎನ್. ರಾಜಣ್ಣ

ಸತ್ಯವಂತರಿಗೆ ಕಾಲವಲ್ಲ ಎಂದು ಪಕ್ಷದ ವರಿಷ್ಠರ ನಿಲುವಿಗೆ ಬೇಸರ

ಕಡೆ ಮುಂದುವರೆಯಲು ಇಚ್ಛೆ ಇಲ್ಲ ಎಂದು ರಾಜಣ್ಣ ಹೇಳಿಕೊಂಡಿದ್ದಾರೆ. ಪಕ್ಷದಲ್ಲೇ ಉಳಿಯುವಂತೆ ರಾಜಣ್ಣ ಮನವೊಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತ ಸಚಿವರನ್ನು ನಿಯೋಜಿಸಿದ್ದಾರೆ. ತುಮಕೂರು ಜಿಲ್ಲಾ ಸಹಕಾರ ಬ್ಯಾಂಕ್ ▶ 6ನೇ ಪುಟಕ್ಕೆ

ರಾಜಣ್ಣ ನಿಲುವಿಗೆ 'ಕೈ' ಶಾಸಕ ಸಹಮತ

ಬೆಂಗಳೂರು, ಆ.13(ಕೆಎಂಶಿ)– ಮತಗಳ್ಳತನ ಕುರಿತ ಮಾಜಿ ಸಚಿವ ಕೆ.ಎನ್.ರಾಜಣ್ಣ ಪ್ರತಿಕ್ರಿಯೆಗೆ ಕಾಂಗ್ರೆಸ್‌ನ ಮತ್ತೊಬ್ಬ ಶಾಸಕ ಧ್ವನಿಗೂಡಿಸಿದ್ದಾರೆ.

ಕೋಲಾರ ವಿಧಾನಸಭಾ ಕ್ಷೇತ್ರದ ಕೊತ್ತೂರು ಮಂಜು ಸುದ್ದಿಗಾರರೊಂದಿಗೆ ಮಾತನಾಡಿ, ರಾಜಣ್ಣ ಸತ್ಯವಾದ ಮಾತನ್ನೇ ಆಡಿದ್ದಾರೆ. ಆದರೆ, ಅವರು ನಮ್ಮ ನಾಯಕರ ಹೇಳಿಕೆ ನಂತರ ಈ ರೀತಿ ಬಹಿರಂಗವಾಗಿ ಮಾತನಾಡಬಾರದಿತ್ತು. ನಾಯಕರ ಹೇಳಿಕೆಗೆ ಬೆಂಬಲ ತೋರಬೇಕು, ಅದರ ಬಗ್ಗೆ ಪ್ರತಿಕ್ರಿಯಿಸಬಾರದಿತ್ತು. ▶ 6ನೇ ಪುಟಕ್ಕೆ



ಮಂಜು

ದಯವಿಟ್ಟು, ನಾಯಿಗಳಿಂದ ವಿಧಾನಸೌಧ ರಕ್ಷಿಸಿ!



ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಹಾಗೂ ಶಾಸಕರ ಭವನದಲ್ಲಿ ದಂಡು ದಂಡಾಗಿ ಅಲೆಯುವ ನಾಯಿಗಳನ್ನು ತೆರವುಗೊಳಿಸಬೇಕು ಎಂದು ವಿಧಾನಸಭೆಯಲ್ಲಿ ಬಹುತೇಕ ಸದಸ್ಯರು ಸ್ಪೀಕರ್ ಯು.ಟಿ.ಖಾದರ್ ಅವರಲ್ಲಿ ಮನವಿ ಮಾಡಿದರು.

ಶಾಸಕರಿಂದ ಸ್ಪೀಕರ್‌ಗೆ ಮನವಿ

ಶೂನ್ಯ ವೇಳೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು ಈ ವಿಷಯವನ್ನು ಪ್ರಸ್ತಾಪಿಸಿದರು. ಸುಪ್ರೀಂಕೋರ್ಟ್ ತೀರ್ಪು ರಾಜ್ಯದಲ್ಲಿರುವ ಎಲ್ಲಾ ಪುರಸಭೆಗಳಿಗೂ ಅನ್ವಯವಾಗಬೇಕು. ನಮ್ಮ ಮಕ್ಕಳನ್ನು ಸುರಕ್ಷಿತವಾಗಿಡಲು ನಾಯಿಗಳನ್ನು ಸ್ಥಳಾಂತರಿಸಬೇಕು. ▶ 6ನೇ ಪುಟಕ್ಕೆ

ಇಂದು ದರ್ಶನ್ ಬೇಲ್ ಭವಿಷ್ಯ

ನವದೆಹಲಿ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಜಾಮೀನು ರದ್ದತಿಗೆ ಸಂಬಂಧಿಸಿದ ಅರ್ಜಿಯ ತೀರ್ಪು ಕುರಿತು ತೀವ್ರ ಕುತೂಹಲ ಮೂಡಿಸಿದೆ. ಈ ಪ್ರಕರಣವನ್ನು ನಾಳೆಗೆ (ಆ.14) ಸುಪ್ರೀಂಕೋರ್ಟ್ ಕಲಾಪದಲ್ಲಿ ಪಟ್ಟಿ ಮಾಡಲಾಗಿದ್ದು, ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ. ದರ್ಶನ್, ಪವಿತ್ರಾ ಸೇರಿದಂತೆ ಏಳು ಆರೋಪಿಗಳ ಜಾಮೀನು ರದ್ದಾಗುತ್ತಾ ಅಥವಾ ಮುಂದುವರಿಯುತ್ತಾ ಎಂಬುದರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಈ ಪ್ರಕರಣದಲ್ಲಿ ದರ್ಶನ್ ಸೇರಿದಂತೆ ಏಳು ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಆದರೆ, ಈ ಆದೇಶವನ್ನು ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ನಗರ ಪೊಲೀಸರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿ ▶ 6ನೇ ಪುಟಕ್ಕೆ





ಇಲವಾಲ ಬಳಿ 2 ಹುಲಿ ಪ್ರತ್ಯಕ್ಷ



ಮೈಸೂರು,ಆ.13(ಎಸ್‌ಪಿಎನ್)–ಹುಲಿಗಳು ಈಗ ಮೈಸೂರಿನ ಮಗ್ಗುಲಿಗೆ ಬಂದಿವೆ. ಇದುವರೆಗೆ ಅಭಯಾರಣ್ಯದ ಅಂಚಿನಲ್ಲಿ ಹುಲಿಗಳ ಆರ್ಭಟಕ್ಕೆ ನಲುಗಿದ್ದ ಜನ, ಈಗ ಜನವಸತಿ ಪ್ರದೇಶಗಳ ಸಾಮಾಜಿಕ ಅರಣ್ಯ ಪ್ರದೇಶದಲ್ಲೂ ಹುಲಿಗಳ ಹಾವಳಿಯಿಂದ ತತ್ತರಿಸುವಂತಾಗಿದೆ. ಮೈಸೂರು ಹೊರವಲಯದ ಇಲವಾಲ ಬಳಿಯ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಎರಡು ಹುಲಿಗಳು ಪ್ರತ್ಯಕ್ಷವಾಗಿ, ಸುತ್ತಮುತ್ತಲ ಗ್ರಾಮಗಳ ಜನ ಗಾಬರಿಯಿಂದ ನಡುಗುವಂತೆ ಮಾಡಿವೆ. ▶ 6ನೇ ಪುಟಕ್ಕೆ

ಗ್ರಾಮೀಣ ಭಾಗದ ಅಕ್ರಮ ಮನೆಗಳಿಗೆ 6 ವಾರದಲ್ಲಿ ಬಿ–ಖಾತಾ ನೀಡುವ ಕಾರ್ಯ ಆರಂಭ

ಬೆಂಗಳೂರು, ಆ.13(ಕೆಎಂಶಿ)– ಗ್ರಾಮೀಣ ಭಾಗದಲ್ಲಿ ಅಕ್ರಮ ನಿರ್ಮಾಣ ಮನೆ ಮತ್ತು ವಸತಿಗಳಿಗೆ ಆರು ವಾರಗಳಲ್ಲಿ ಬಿ–ಖಾತೆ ನೀಡುವ ಕಾರ್ಯ ಆರಂಭಿಸುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

ಪ್ರಶ್ನೋತ್ತರ ವೇಳೆಯಲ್ಲಿ ಬಸನಗೌಡ ಆರ್.ಪಾಟೀಲ್ ಯತ್ನಾಳ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಿಸಿದಂತೆ 29 ಆಕ್ಷೇಪಣೆಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ, ಇನ್ನು 15 ದಿನಗಳಲ್ಲಿ ನಿಯಮಗಳನ್ನು ರೂಪಿಸಲಾಗುವುದು, ಸದ್ಯಕ್ಕೆ ನಮೂನೆ 11, ಬಿ ಖಾತೆ ನೀಡುತ್ತಿಲ್ಲ ಎಂದರು. ಕಳೆದ ಎರಡು ವರ್ಷದಲ್ಲಿ 1,237 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ. ▶ 6ನೇ ಪುಟಕ್ಕೆ

ಕೆರೆ ಅಂಗಳ ಖಾತೆ ಮಾಡಿಕೊಡಲಾಗದು

ಬೆಂಗಳೂರು, ಆ.13(ಕೆಎಂಶಿ)– ಕೆರೆ ಅಂಗಳಗಳನ್ನು ಯಾವುದೇ ಕಾರಣಕ್ಕೂ ಖಾತೆ ಮಾಡಿಕೊಡುವುದಿಲ್ಲ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನ ಸಭೆಯಲ್ಲಿಂದು ಸ್ಪಷ್ಟಪಡಿಸಿದರು.



ಕೃಷ್ಣ ಭೈರೇಗೌಡ

ಶಾಸನ ರಚನ ಕಲಾಪದಲ್ಲಿ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ ಮೇಲಿನ ಚರ್ಚೆ ವೇಳೆ ಮುನಿರತ್ನ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಕೆರೆ ಸಂರಕ್ಷಣೆಗೆ ಆದ್ಯತೆ ನೀಡಲಾಗುವುದು, ನಕಲಿ ವ್ಯಕ್ತಿ, ನಕಲಿ ದಾಖಲೆ ಸೃಷ್ಟಿ ಮಾಡಿ ನೋಂದಣಿ ಮಾಡಿಸಿದ್ದರೆ, ಅದನ್ನು ರದ್ದುಪಡಿಸಲು ಜಿಲ್ಲಾ ನೋಂದಣಾಧಿಕಾರಿಗೆ ▶ 6ನೇ ಪುಟಕ್ಕೆ



ಉದ್ದೇಶಿತ 2,663 ಕೋಟಿಯ 'ಅಮ್ಯೂಸ್‌ಮೆಂಟ್ ಪಾರ್ಕ್' ಯೋಜನೆ

ಕೆಆರ್‌ಎಸ್ 'ಕಸದ ತೊಟ್ಟಿ' ಮಾಡಬೇಡಿ


ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್‌ಗೆ ಮಾಜಿ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ಬೇಸರದ ಪತ್ರ



- ನಾಲ್ವಡಿ, ವಿಶ್ವೇಶ್ವರಯ್ಯ ಅವರ ಪರಿಕಲ್ಪನೆಗೆ ತದ್ವಿರುದ್ಧ
- ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ರೈತರ ವಿರೋಧವಿದೆ
- ರಸ್ತೆಬದಿ ಅಂಗಡಿಗಳು ವ್ಯಾಪಕವಾಗಿ ತಲೆ ಎತ್ತಲಿವೆ
- ಭಾರೀ ಪ್ರಮಾಣದ ತ್ಯಾಜ್ಯ ಸಂಗ್ರಹವಾಗಲಿದೆ
- ಪರಿಸರದ ಮೇಲೆ ಅಧಿಕ ದುಷ್ಪರಿಣಾಮ ಬೀರುತ್ತದೆ

ಮೈಸೂರು,ಆ.13(ಬಿಎಲ್‌ಯು)– ಪ್ರಸಿದ್ಧ ಪ್ರವಾಸಿ ತಾಣವೂ ಆಗಿರುವ ಕೃಷ್ಣರಾಜ ಸಾಗರ (ಕೆಆರ್‌ಎಸ್)ದಲ್ಲಿ 2,663 ಕೋಟಿಯ ಉದ್ದೇಶಿತ 'ಅಮ್ಯೂಸ್‌ಮೆಂಟ್ ಪಾರ್ಕ್' (ಮನೋರಂಜನಾ ಉದ್ಯಾನವನ) ನಿರ್ಮಿಸಲು ಮಾಜಿ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಯೋಜನೆ ಮೂಲಕ ಕೆಆರ್‌ಎಸ್ ಅನ್ನು 'ಕಸದ ತೊಟ್ಟಿ'ಯಾಗಿ ಮಾರ್ಪಡಿಸಬೇಡಿ ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಈ ಸಂಬಂಧ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಪತ್ರ ಬರೆದಿರುವ ಅವರು, ಜಲ ಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್



ಪ್ರೊ.ಚಂದ್ರಶೇಖರ್



ಹೆಚ್.ಕೆ.ಪಾಟೀಲ್

ಉದ್ದೇಶಿಸಿರುವ ಈ ಯೋಜನೆಗೆ ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಮಾಡುವುದರಿಂದ ಪರಿಸರದ ಮೇಲೆ ತೀವ್ರ ರೀತಿಯ ಪರಿಣಾಮ ಬೀರಬಹುದೆಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಹವಾಮಾನ ಬದಲಾವಣೆ ತೀವ್ರಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ ಕೆಆರ್‌ಎಸ್ ಜಲಾಶಯದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ನಂತಹ ಯೋಜನೆ ಕೈಗೊಂಡರೆ ಪರಿಸರದ ಮೇಲೆ ಮತ್ತಷ್ಟು ದುಷ್ಪರಿಣಾಮ ಉಂಟಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಯೋಜನೆಯೇ ಸರಿ ಇಲ್ಲ: ಮೊದಲಿಗೆ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಯೇ ಸರಿ ಇಲ್ಲ. ಇದಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇದು ಗಣನೀಯವಾಗಿ ಹೆಚ್ಚಾಗಲಿದೆ ಎಂದು ಎಚ್ಚರಿಕೆ ನೀಡಿರುವ ಪ್ರೊ.ಚಂದ್ರಶೇಖರ್ ಅವರು, ಈ ಪ್ರದೇಶದೊಂದಿಗಿನ ತಮ್ಮ ವೈಯಕ್ತಿಕ ಸಂಬಂಧಗಳನ್ನು ಮೆಲುಕು ಹಾಕಿದ್ದಾರೆ. ಕೆಆರ್‌ಎಸ್ ಹಾಗೂ ಶ್ರೀರಂಗಪಟ್ಟಣ ಎರಡಕ್ಕೂ ನಮ್ಮೂರು ಸನಿಹದಲ್ಲಿದೆ. ▶ 6ನೇ ಪುಟಕ್ಕೆ



ಮೈಸೂರು ಮಿತ್ರ ಗುರುವಾರ 14 ಆಗಸ್ಟ್ 2025

ಸ್ವಾತಂತ್ರ್ಯ ದಿನಾಚರಣೆ: ಮೈಸೂರಲ್ಲಿ ಬಿಜೆಪಿ ಮಹಿಳಾ ತಿರಂಗಾ ಬೈಕ್ ರ್‍ಯಾಲಿ



ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ತಿರಂಗಾ ಬೈಕ್ ರ್‍ಯಾಲಿ ನಡೆಸಿದರು.

ಮೈಸೂರು, ಆ.13(ಬಿಎಲ್‌ಯು)– 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಇಂದು ಬಿಜೆಪಿ ಮಹಿಳಾ ತಿರಂಗಾ ಬೈಕ್ ರ್‍ಯಾಲಿ ನಡೆಯಿತು.

ಕೇಸರಿ ಪೇಟ ಧರಿಸಿದ ನೂರಾರು ಬಿಜೆಪಿ ಮಹಿಳಾ ಕಾರ್ಯಕರ್ತರು ವಿಜಯನಗರ 3 ನೇ ಹಂತದ ಸಂಗಮ್ ಸರ್ಕಲ್ ನಿಂದ ನಿವೇದಿತ ಪಾರ್ಕ್‌ವರೆಗೆ ಬೈಕ್ ರ್‍ಯಾಲಿ ನಡೆಸಿದರು. ಇದರಲ್ಲಿ ಮಹಿಳೆಯರೂ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಭಾರತ್ ಮಾತಾಕಿ ಜೈ ಘೋಷಣೆಗಳನ್ನು ಮೊಳಗಿಸುವ ಮೂಲಕ ದೇಶಾಭಿಮಾನ ಪ್ರದರ್ಶಿಸಿದರು.

ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ, ಈ ಬಾರಿ ಬಿಜೆಪಿ ಹಮ್ಮಿಕೊಂಡಿರುವ ಹರ್ ಘರ್ ತಿರಂಗಾವನ್ನು ಆಪರೇಷನ್ ಸಿಂಧೂರದಲ್ಲಿ ಶೌರ್ಯ ಪರಾಕ್ರಮ ಮೆರೆದ ನಮ್ಮ ಸೈನಿಕರಿಗೆ ಅರ್ಪಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಪ್ರತಿ ಮನೆಯಲ್ಲೂ ತಿರಂಗಾ ಬಾವುಟ ಹಾರಿಸಬೇಕು ಎಂದು ಸಲಹೆ ನೀಡಿದರು.

ಅಮೇರಿಕಾ, ಭಾರತದ ವಸ್ತುಗಳ ಮೇಲೆ ದುಬಾರಿ ಸುಂಕ ವಿಧಿಸಿರುವ ಹಿನ್ನೆಲೆಯಲ್ಲಿ ದೇಶಿ ವಸ್ತುಗಳ ಬಳಕೆ ಹೆಚ್ಚಿಸಿ ಉತ್ತೇಜನ ನೀಡಬೇಕು ಎಂದು ಮಂಜುಳಾ ಮನವಿ ಮಾಡಿದರು.

ಬಿಜೆಪಿ ಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾ ರಾಜು ಮಾತನಾಡಿ, ಮಹಾತ್ಮ ಗಾಂಧಿ ಸೇರಿದಂತೆ ಸಾವಿರಾರು ಮಹನೀಯರ ಹೋರಾಟದಿಂದ ಭಾರತ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಜನರು ತ್ಯಾಗ–ಬಲಿದಾನ ಮಾಡಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಸಮಯದಲ್ಲಿ ಇಂತಹ ಮಹನೀಯರನ್ನು ಎಲ್ಲರೂ ನೆನಪು ಮಾಡಿಕೊಳ್ಳಬೇಕು ಎಂದರು. ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯರಾದ ಶಾಂತಮ್ಮ, ಲಕ್ಷ್ಮಿ, ಮಾಲಿನಿ, ಸರ್ವಮಂಗಳ, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮಾಜಿ ಕಾರ್ಪೊರೇಟರ್‌ಗಳಾದ ಪ್ರಮೀಳಾ ಭರತ್, ಲಕ್ಷ್ಮಿ ಕಿರಣ್ ಸೇರಿದಂತೆ ಹಲವರು ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಸಿಎಂ ಸಿದ್ದರಾಮಯ್ಯರಿಂದ ಬಾಲಾಜಿ ಕನ್ವೆನ್ಷನ್ ಹಾಲ್ ಉದ್ಘಾಟನೆ...



ಮೈಸೂರಿನ ಬಾಲಾಜಿ ಕನ್ವೆನ್ಷನ್ ಹಾಲ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಉದ್ಘಾಟಿಸಿದರು. ಸಂಸದ ಸುನಿಲ್ ಬೋಸ್, ಎಂಎಲ್‌ಸಿ ಡಾ.ಯತೀಂದ್ರ, ರಾಜ್ಯದ ಪ್ರಥಮ ದರ್ಜೆ ಗುತ್ತಿಗೆದಾರ ಬಾಪೂಜಿ ಇನ್ನಿತರರು ಉಪಸ್ಥಿತರಿದ್ದರು.

ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪರೇಡ್ ತಾಲೀಮು

●ಪೊಲೀಸ್ ಸೇರಿದಂತೆ 24 ತುಕಡಿ ಪಥಸಂಚಲನದಲ್ಲಿ ಭಾಗಿ ●1700ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ





ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನದ ತಾಲೀಮಿನಲ್ಲಿ ಡಿಸಿಪಿ ಕೆ.ಎನ್.ಬಿಂದುಮಣಿ ಧ್ವಜಾರೋಹಣ ನೆರವೇರಿಸಿ ಗೌರವ ಸಲ್ಲಿಸಿದರು. ಆಕರ್ಷಕ ಪಥಸಂಚಲನದಲ್ಲಿ ಗೌರವ ವಂದನೆ ಸಲ್ಲಿಸುತ್ತಿರುವ ಮಹಿಳಾ ಪೊಲೀಸರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಆ.13(ಎಂಟಿವೈ)– ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಬುಧವಾರ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಪೊಲೀಸ್ ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ತಾಲೀಮು ನಡೆಸಲಾಯಿತು.

ಮೈಸೂರು ಜಿಲ್ಲಾಡಳಿತದ ವತಿಯಿಂದ ಆ.15ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾಡಳಿತದ ವತಿಯಿಂದ 79ನೇ ಸ್ವಾತಂತ್ರ್ಯ ದಿನಾಚರಣೆ ವಿಜೃಂಭಣೆಯಿಂದ ನೆರವೇರಲಿದೆ. ಆ ಪ್ರಮುಖ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ವೇಳೆ ಪಥ ಸಂಚಲನ ನಡೆಸಲು ಪೊಲೀಸರು, ಎನ್‌ಸಿಸಿ ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳ 24 ತುಕಡಿಗೆ ಅವಕಾಶ ನೀಡಲಾಗಿದ್ದು, ಕಳೆದ ಎರಡು ದಿನದಿಂದ ಪಥಸಂಚಲನದ ತಾಲೀಮು ನಡೆಸಲಾಗಿದೆ.

ಡಿಸಿಪಿ ಕೆ.ಎನ್.ಬಿಂದುಮಣಿ ನೇತೃತ್ವದಲ್ಲಿ ಇಂದು ಬೆಳಗ್ಗೆ ಅಂತಿಮ ಹಂತದ ತಾಲೀಮು ನಡೆಯಿತು. ಆ.15ರಂದು ನಡೆಯುವ ಕಾರ್ಯಕ್ರಮದಲ್ಲಿ ಅನುಸರಿಸುವ ಶಿಷ್ಟಾಚಾರದಂತೆ ಇಂದು ಅಂತಿಮ ಹಂತದ ತಾಲೀಮು ನಡೆಸಲಾಯಿತು. ಮೂರು ಸುತ್ತಿನಲ್ಲಿ ನಡೆದ ತಾಲೀಮು ಶಿಸ್ತುಬದ್ಧವಾಗಿ ನೆರವೇರಿತು. ಡಿಸಿಪಿ ಕೆ.ಎನ್. ಬಿಂದುಮಣಿ ಅವರು ತೆರೆದ ವಾಹನದಲ್ಲಿ ಪಥ ಸಂಚಲನಕ್ಕಾಗಿ ಸಜ್ಜಾಗಿದ್ದ ಪೊಲೀಸ್ ಹಾಗೂ ವಿದ್ಯಾರ್ಥಿಗಳ ತುಕಡಿಯನ್ನು ಪರಿವೀಕ್ಷಿಸಿದರು. ಬಳಿಕ ಧ್ವಜಾರೋಹಣ ಮಾಡಿ, ಧ್ವಜ ವಂದನೆ ಸ್ವೀಕರಿಸಿದರು. ಈ ವೇಳೆ ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಕೆ.ಆರ್., ದೇವರಾಜ, ಎನ್.ಆರ್., ವಿಜಯನಗರ ಉಪ ವಿಭಾಗದ ತುಕಡಿ, ಮಹಿಳಾ ಪೊಲೀಸ್, ಸಂಚಾರ ಪೊಲೀಸ್, ಮೌಂಟೆಡ್ ಪೊಲೀಸ್, ಹೋಮ್‌ಗಾರ್ಡ್, ಕೆಎಸ್‌ಆರ್‌ಪಿ(ಸಶಸ್ತ್ರ), ಅಬಕಾರಿ, ಗೃಹರಕ್ಷಕ ದಳ, ಮಹಿಳಾ ಹೋಮ್‌ಗಾರ್ಡ್, ಎನ್‌ಸಿಸಿ ಭೂದಳ, ಎನ್‌ಸಿಸಿ ವಾಯುದಳ, ಎನ್‌ಸಿಸಿ ನೌಕಾದಳ, ಸ್ಕೌಟ್ಸ್ ಮತ್ತು ಗೈಡ್ಸ್, ಭಾರತೀಯ ಸೇವಾದಳ ಬಾಲಕರು, ಭಾರತೀಯ ಸೇವಾದಳ ಬಾಲಕಿಯರು, ಪೊಲೀಸ್ ಪಬ್ಲಿಕ್ ಸ್ಕೂಲ್, ಕೇಂದ್ರೀಯ ವಿದ್ಯಾಲಯ ಹಾಗೂ ಪೊಲೀಸ್ ಬ್ಯಾಂಡ್ ತಂಡ ಸೇರಿದಂತೆ 24 ತುಕಡಿಗಳು ಆಕರ್ಷಕ ಪಥಸಂಚಲನ ನಡೆಸಿ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದವು.

ಬಳಿಕ ಪೊಲೀಸ್ ತುಕಡಿ ಮೈದಾನದಿಂದ ನಿರ್ಗಮಿಸುತ್ತಿದ್ದಂತೆ ಸಾಂಸ್ಕೃತಿಕ ಕಾರ್ಯಕ್ರಮದ ತಾಲೀಮು ಜರುಗಿತು. ಬಿಇಓ ಉತ್ತರ ಕಚೇರಿ ವ್ಯಾಪ್ತಿಯ 13 ಸರ್ಕಾರಿ ಶಾಲೆಗಳ 1 ಸಾವಿರ ವಿದ್ಯಾರ್ಥಿಗಳು ಸಾಮೂಹಿಕವಾಗಿ ಏರೋಬಿಕ್ಸ್ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. ಲಿಟಲ್ ಜಂಪ್ಸ್ ಶಾಲೆಯ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಧರ ನಮನ ಗೀತೆಗೆ ನೃತ್ಯ ಪ್ರದರ್ಶಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ 4 ಬಾರಿ ತಾಲೀಮು ನಡೆಸಿ, ಆ.15ರಂದು ನಡೆಯುವ ಪ್ರದರ್ಶನಕ್ಕೆ ಸಜ್ಜುಗೊಳಿಸಲಾಯಿತು.



ಮೈಸೂರಿನ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ನಾನಾ ಬಗೆಯ ಸಾಮೂಹಿಕ ನೃತ್ಯ ಪ್ರದರ್ಶನ.

ಸಚಿವರಿಂದ ಧ್ವಜಾರೋಹಣ: ಆ.15ರಂದು ಬೆಳಗ್ಗೆ 9 ಗಂಟೆಗೆ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಧ್ವಜಾರೋಹಣ ನೆರವೇರಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ ಸಿಇಓ ಎಸ್.ಯುಕೇಶ್‌ಕುಮಾರ್, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಅಂದು ಸಂಜೆ 5 ಗಂಟೆಗೆ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಈ ವೇಳೆ ಮೈಸೂರಿನ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ರಾಜ್ಯ ಸರ್ಕಾರಿ ನೌಕರರಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಲಿದೆ.

ಆ.16 ಯೋಗಾನರಸಿಂಹಸ್ವಾಮಿ ದೇವಸ್ಥಾನ ಮುಂಭಾಗ ಪೌರಾಣಿಕ ನಾಟಕ ಪ್ರದರ್ಶನ

ಮೈಸೂರು,ಆ.13(ಜಿಎ)–ಯೋಗಾನರಸಿಂಹಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಚಾಮುಂಡೇಶ್ವರಿ ಟ್ರಸ್ಟ್ ಹಾಗೂ ಪುಣ್ಯಕೋಟಿ ಸೇವಾ ಟ್ರಸ್ಟ್ ವತಿಯಿಂದ ಆ.16ರಂದು ಸಂಜೆ 6ಗಂಟೆಗೆ ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದ ಮುಂಭಾಗ 'ಧರ್ಮರಾಜ ರಾಜಸೂಯಯಾಗ' ಅಥವಾ 'ಶಿಶುಪಾಲ ದಂತವಕ್ರರ ವಧೆ' ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಹೆಚ್.ಪಿ.ನಾಗೇಂದ್ರ ಪ್ರಸಾದ್ ಈ ವಿಷಯ ತಿಳಿಸಿ, ವಿಜಯನಗರ ಒಂದನೇ ಹಂತದಲ್ಲಿ ಈವರೆಗೂ ಯಾವುದೇ ಪೌರಾಣಿಕ ನಾಟಕ ಪ್ರದರ್ಶನ ಮಾಡಿಲ್ಲ. ಈ ಹಿನ್ನೆಲೆಯಲ್ಲಿ ಅಲ್ಲಿನ ಜನತೆಗೆ ವಿಶೇಷವಾಗಿ ಏರ್ಪಡಿಸಲಾಗಿದೆ. ನಾಟಕವನ್ನು ಆಸ್ಥಾನ ವಿದ್ವಾನ್ ನಂಜನಗೂಡು ಶ್ರೀಕಂಠ ಶಾಸ್ತ್ರಿ ರಚಿಸಿದ್ದಾರೆ. ಸುಮಾರು 20 ಮಂದಿ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ. ಇವರಲ್ಲಿ ಈಗಷ್ಟೇ ಅಭಿನಯಿಸುತ್ತಿರುವವರಾಗಿದ್ದಾರೆ ಎಂದರು. ಗೋಷ್ಠಿಯಲ್ಲಿ ಲೋಕೇಶ್, ಮಲ್ಲೇಶ್, ಅರ್ಕೇಶ್, ಶಿವೇಗೌಡ, ಹನುಮಂತೇಶ್ ಇದ್ದರು.

ಇಂದು ಅಖಂಡ ಭಾರತ ಸಂಕಲ್ಪ ದಿನ: ಬೃಹತ್ ಪಂಜಿನ ಮೆರವಣಿಗೆ

ಮೈಸೂರು,ಆ.13(ಎಂಟಿವೈ)–ಭಾರತ ತ್ರಿಭಜನಗೊಂಡ ಕರಾಳ ದಿನದ ಅಂಗವಾಗಿ ಆ.14ರಂದು ಸಂಜೆ 6.30ಕ್ಕೆ ಎನ್.ಆರ್.ಮೊಹಲ್ಲಾದ ಮಾರುತಿ ವೃತ್ತದ ಬಳಿ ಅಖಂಡ ಭಾರತ ಸಂಕಲ್ಪ ದಿನ ಅಂಗವಾಗಿ ಬೃಹತ್ ಪಂಜಿನ ಮೆರವಣಿಗೆ ಆಯೋಜಿಸಲಾಗಿದೆ ಎಂದು ಹಿಂದು ಜಾಗರಣ ವೇದಿಕೆ ಸಂಯೋಜಕ ರಂಗಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದು ಜಾಗರಣ ವೇದಿಕೆ ವತಿಯಿಂದ ಅಖಂಡ ಭಾರತ ಸಂಕಲ್ಪ ದಿನ ಬೃಹತ್ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿದ್ದು, ಎನ್.ಆರ್. ಮೊಹಲ್ಲಾದಲ್ಲಿರುವ ಮಾರುತಿ ದೇವಸ್ಥಾನದ ಮುಂಭಾಗದಿಂದ ಸಂಜೆ 6.30ಕ್ಕೆ ಮೆರವಣಿಗೆ ಹೊರಡಲಿದೆ. ವಿವಿಧ ರಸ್ತೆಗಳಲ್ಲಿ ಸಂಚರಿಸಿದ ಬಳಿಕ ರಾಜೇಂದ್ರನಗರದಲ್ಲಿರುವ ಶನೇಶ್ವರ ಸ್ವಾಮಿ ದೇವಾಲಯದ ದ್ವಾರದ ಬಳಿ ಸಮಾಪ್ತಿಗೊಳ್ಳಲಿದೆ. ಅಲ್ಲಿ ರಾತ್ರಿ 8.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು. 1947ರ ಆ.14ರ ಮಧ್ಯರಾತ್ರಿ ಭಾರತ ವನ್ನು ತ್ರಿಖಂಡವಾಗಿ ಕತ್ತರಿಸಲ್ಪಟ್ಟ ಆ ಕರಾಳ ರಾತ್ರಿಯ ದುರಂತವನ್ನು ನೆನಪಿಸುತ್ತ ವೀರ ಮರಣ ಹೊಂದಿದ ಹುತಾತ್ಮರನ್ನು ನೆನೆಯುತ್ತ ಈ ಪಂಜಿನ ಮೆರವಣಿಗೆ ನಡೆಸಲಾಗುತ್ತಿದೆ ಎಂದರು.

ಸಂಪುಟದಿಂದ ಕೆ.ಎನ್.ರಾಜಣ್ಣ ವಜಾ ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಮೈಸೂರು, ಆ.13(ಜಿಎ)– ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವುದನ್ನು ಖಂಡಿಸಿ ರಾಜ್ಯದ ಎಲ್ಲಾ ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ನಾಯಕ ಜನಾಂಗದಿಂದ ಹೋರಾಟ ಮಾಡುವಂತೆ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಕರೆ ನೀಡಿದ್ದರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿ ಸಹಕಾರಿ ಧುರೀಣರಾಗಿರುವ ಶೋಷಿತ ಸಮುದಾಯದ ನಾಯಕ ರಾಜಣ್ಣ ಅವರಿಗೆ ಯಾವುದೇ ನೋಟಿಸ್ ನೀಡದೆ ಏಕಾಏಕಿ ಸಂಪುಟದಿಂದ ವಜಾಗೊಳಿಸಿರುವುದು ಖಂಡನಾರ್ಹ. ಇದು ಕೇವಲ ರಾಜಣ್ಣ ಅವರಿಗೆ ಮಾಡಿರುವ ಅಪಮಾನವಲ್ಲ. ಇಡೀ ನಾಯಕ ಸಮುದಾಯಕ್ಕೆ ಮಾಡಿರುವ ಅವಮಾನವಾಗಿದೆ ಎಂದರು.

ಈ ಹಿಂದೆ ಪಕ್ಷದ ವಿರುದ್ಧ ಬಹಳ ಕೆಟ್ಟದಾಗಿ ಹೇಳಿಕೆ ನೀಡಿರುವ ಬೇರೆ ಸಮುದಾಯದ ನಾಯಕರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಸಮುದಾಯ ಹಾಗೂ ರಾಜಣ್ಣರನ್ನು ಟಾರ್ಗೆಟ್ ಮಾಡಿ ವಜಾ ಮಾಡಿದ್ದಾರೆ. ಈ ಹಿಂದೆ ಶ್ರೀರಾಮುಲು, ನಾಗೇಂದ್ರ ಸೇರಿದಂತೆ ಕೇವಲ ನಾಯಕ ಸಮುದಾಯದವರನ್ನು ಎಲ್ಲಾ ಪಕ್ಷದವರು ರಾಜಕೀಯವಾಗಿ ಮುಗಿಸಲು ಮುಂದಾಗಿದ್ದಾರೆ. ರಾಜ್ಯದಲ್ಲಿ ಗೆದ್ದಿರುವ ನಾಯಕ ಸಮುದಾಯದ ನಾಯಕರು ರಾಜಣ್ಣ ಅವರ ಪರ ಪಕ್ಷಾತೀತವಾಗಿ ನಿಲ್ಲಬೇಕಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ನಿಮಗೂ ಇದೆ ಸ್ಥಿತಿ ಬರಲಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸಾಗೋಣ. ಈಗಾಗಲೇ ರಾಜ್ಯದ ವಿವಿಧೆಡೆ ಹೋರಾಟಗಳು ನಡೆಯುತ್ತಿವೆ. ನಾಯಕರ ವಿರುದ್ಧ ಈ ರೀತಿ ಷಡ್ಯಂತರಗಳು ನಡೆದರೆ ಇಡೀ ಸಮುದಾಯ ನಿಮ್ಮ ವಿರುದ್ಧ ನಿಲ್ಲಲಿದೆ ಎಂದರು.


ಹಿರಿಯ ಚಿತ್ರಕಲಾವಿದ ಎಲ್‌ಎಸ್‌ಎನ್ ಆಚಾರ್ ನಿಧನ



ಮೈಸೂರು: ನಗರದ ಹಿರಿಯ ಚಿತ್ರಕಲಾವಿದರಾಗಿದ್ದ ಎಲ್.ಎಸ್.ಎನ್. ಆಚಾರ್ (86) ಬುಧವಾರ ಬೆಳಗಿನ ಜಾವ ಅನಾರೋಗ್ಯದಿಂದ ನಿಧನರಾದರು.


ಅವರಿಗೆ ಪತ್ನಿ, ಓರ್ವಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ವಿಜಯನಗರ 4ನೇ ಹಂತದ ನಿವಾಸಿಯಾಗಿದ್ದ ಅವರು, ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿದ್ದರು. ಅಲ್ಲದೆ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರಾಗಿದ್ದರು. ಜೊತೆಗೆ ಅನೇಕ ಸಂಘ–ಸಂಸ್ಥೆಗಳಿಂದ ಸನ್ಮಾನಿತರಾಗಿದ್ದರು. ತಮ್ಮ ಕಲಾಬದುಕಿನ ಕುರಿತು 'ರೇಖಾವರ್ಣ' ಕೃತಿ ರಚಿಸಿದ್ದರು. ತಮ್ಮ ತಂದೆ ಲಕ್ಷ್ಮಿನಾರಾಯಣ ಆಚಾರ್ ಬಳಿ ಚಿನ್ನಾಭರಣ ಕೆಲಸ ಕಲಿತಿದ್ದರೂ ವೃತ್ತಿಯಲ್ಲಿ ಮುಂದುವರೆಯದೆ ಶಿಲ್ಪಕಲೆ ಕಲಿತರು. ನಂತರ ಚಿತ್ರಕಲಾವಿದರಾದರು. ಅನೇಕ ಕಡೆ ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. ಕಾನೂನು ಪದವಿ ಪಡೆದಿದ್ದ ಅವರು, ವಕೀಲರಾಗದೆ ಭೂದಾಖಲೆ ಇಲಾಖೆಗೆ ಸೇರಿ ಉಪನಿರ್ದೇಶಕರಾಗಿ ನಿವೃತ್ತರಾಗಿದ್ದರು. ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನಡೆಯಿತು.

ಎಸ್.ಎಂ. ರಾಜೀವ್



ಮೈಸೂರಿನ ಸರಸ್ವತಿಪುರಂ 12ನೇ ಮುಖ್ಯರಸ್ತೆ, 3ನೇ ಕ್ರಾಸ್‌ನ ನಿವಾಸಿ ಎಸ್.ಎಂ.ರಾಜೀವ್ (39) ಮಂಗಳವಾರ ತಡರಾತ್ರಿ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ತಂದೆ ಎಸ್.ಟಿ ಮಾರುತಿ, ತಾಯಿ ಶೀಲಾ ಮಾರುತಿ, ಪತ್ನಿ ಭವಾನಿ, ಪುತ್ರ ಮನೀಶ್, ಸಹೋದರ ಸಂಜೀವ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 12 ಗಂಟೆಗೆ ಮೈಸೂರಿನ ಜಯನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೃತರ ಕುಟುಂಬಸ್ಥರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.08.2025 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025ರಿಂದ 16.08.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ. ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ. ಆರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಅರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ದೀಕ್ಷಾರಂಭ ಪುನಶ್ಚೇತನ ಕಾರ್ಯಕ್ರಮ. ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ. ಬೆಳಗ್ಗೆ 9ಕ್ಕೆ

■ **ನಾ ಕಸ್ತೂರಿ ಹಾಸ್ಯ ರಸಿಕ ವೃಂದ, ಮೈಸೂರು ಆಕಾಶವಾಣಿ :** ಆಕಾಶವಾಣಿಯ 90ರ ಸಂಭ್ರಮದ ಒಂದು ಕಾರ್ಯಕ್ರಮವಾದ ನಾ ಕಸ್ತೂರಿ ಸ್ಮರಣೋತ್ಸವ, ಸುತ್ತೂರು ಶ್ರೀಗಳಿಂದ 'ನಾ ಕಸ್ತೂರಿ ಬದುಕು–ಬರಹ' ಮತ್ತು 'ಕೊರವಂಜಿ ಕಸ್ತೂರಿ ಸಮಗ್ರ, ಸಂಪು–1' ಪುಸ್ತಕಗಳ ಬಿಡುಗಡೆ, ಉಪಸ್ಥಿತರು : ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ವೈ.ವಿ. ಗುಂಡೂರಾವ್, ಬೇಲೂರು ರಾಮಮೂರ್ತಿ, ಕೆ.ಸಿ. ಶಿವಪ್ಪ, ಎಸ್.ಎಸ್. ಉಮೇಶ್, ಎನ್. ರಾಮಾನುಜ, ಎಂ. ಶಿವಕುಮಾರ್, ಸ್ಥಳ:ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ, ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಠಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಭ್ರಮರ ಟ್ರಸ್ಟ್ :** ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರಾದ ಡಾ. ಎಸ್.ಸಿ. ನೇಮಿಚಂದ್ರ ಅವರಿಗೆ ಸುಶ್ರುತ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಭಾರತ ಸರ್ಕಾರದ ಮಾಜಿ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಕೆ. ವಿಜಯರಾಘವನ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ. ಮಧು, ದತ್ತಿ ದಾನಿಗಳಾದ ಶ್ರೀಮತಿ ಮಾಧುರಿ ತಾತಾಚಾರಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11.30ಕ್ಕೆ.

■ **ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಟೋ ಚಾಲಕ ಮಾಲೀಕರ ಸಂಘ :** 78ನೇ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ಮಾಜಿ ಸೈನಿಕ ಶ್ರೀನಿವಾಸ್, ಉದ್ಘಾಟನೆ : ಮಾಜಿ ಸೈನಿಕ ಉದಯ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಹೇಶ್, ಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್, ಸೌಮ್ಯ ಉಮೇಶ್, ಕೆ.ಆರ್. ಬ್ಯಾಂಕ್ ಮಾಜಿ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಅಧ್ಯಕ್ಷ ಬಸಪ್ಪ, ಕನ್ನಡ ಕ್ರಾಂತಿ ದಳದ ಅಧ್ಯಕ್ಷ ತೇಜಸ್ವಿ ಕುಮಾರ್, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಹಳೇ ಗೇಟ್ ಮುಂಭಾಗ, ರಾಮಾನುಜ ರಸ್ತೆ, ಮಧ್ಯರಾತ್ರಿ 12ಕ್ಕೆ.

■ **ಕನ್ನಡ ಕ್ರಿಯಾ ಸಮಿತಿ :** ಪೊಲೀಸ್ ಇಲಾಖೆ ನಾಮಫಲಕಗಳಲ್ಲಿ ಕನ್ನಡಕ್ಕೆ ಕುತ್ತು, ಸಹಕಾರ ಸಂಘಗಳಲ್ಲಿ ಕನ್ನಡ ಬಳಕೆ ಮತ್ತು ಇತರ ವಿಷಯಗಳ ಬಗ್ಗೆ ಚರ್ಚಿಸಲು ಕನ್ನಡ ಅಭಿಮಾನಿಗಳ ಸಭೆ, ಸ್ಥಳ: ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ (ಸುಬ್ಬರಾಯನಕೆರೆ)–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಶಾಖೆ:** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಸಂಜೆ 5.30ರಿಂದ ಕು. ದಿಷಾ ಡಿ.ರಾವ್ ಮತ್ತು ಕು. ಸಾನ್ವಿ ಆರ್. ಅವರಿಂದ ದಾಸವಾಣಿ, ರಾತ್ರಿ 8ರಿಂದ ಚಂದನ್‌ಕುಮಾರ್ ಅವರಿಂದ ಕೊಳಲು ವಾದನ, ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರಿ ರಸ್ತೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ವಚನ ಗಾಯನ ಮತ್ತು ಯುವ ಸಂಗೀತೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಜೆ 5.30 ರಿಂದ ವಿದ್ವಾನ್ ರಕ್ಷಿತ್ ಪ್ರಸಾದ್ ಅವರಿಂದ ಮ್ಯಾಂಡೋಲಿನ್, ವಿದ್ವಾನ್ ರೂಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ಸುನಾದ ಕೃಷ್ಣ ಅಮ್ಮಾಯಿ–ಮೃದಂಗ, ವಿದ್ವಾನ್ ಟಿ.ಎನ್.ಅಜಯ್–ಘಟಂ; ರಾತ್ರಿ 7 ರಿಂದ ವಿದ್ವಾನ್ ಸಿ.ಎಸ್.ಕೇಶವಚಂದ್ರ ಅವರಿಂದ ಕೊಳಲು, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಸುನಾದ ಕೃಷ್ಣ ಅಮ್ಮಾಯಿ–ಮೃದಂಗ, ವಿದ್ವಾನ್ ಎಂ.ಆರ್. ಮೋಹನ್–ಮೋರ್ಚಿಂಗ್, ಸ್ಥಳ: ಮಂತ್ರಮಹರ್ಷಿ ಸಭಾ ಭವನ, ಜೆಎಸ್‌ಎಸ್ ಪ್ರೌಢಶಾಲೆ ಆವರಣ, ಸರಸ್ವತಿಪುರಂ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ. ಬಿ.ವಿ.ವಸಂತ ಕುಮಾರ್ ಅವರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ


■ **ಕುಮಾರವ್ಯಾಸ ಗುರುಕುಲ:** ಕೃಷ್ಣಗಿರಿ ಕೃಷ್ಣರಾಯರು ಮತ್ತು ಬಿ.ಕೆ.ಶಾಮಣ್ಣ ಅವರ ಸಂಸ್ಮರಣಾ ಕಾರ್ಯಕ್ರಮ, ಕುಮಾರವ್ಯಾಸ ಭಾರತ–ವಾಚನ ವ್ಯಾಖ್ಯಾನ, ಆದಿಪರ್ವ–ಅರ್ಜುನ–ಸುಭದ್ರೆಯರ ವಿವಾಹ, ವಾಚನ: ಶ್ರೀಮತಿ ಎ.ರಮಾರಾಜಗೋಪಾಲ್, ವ್ಯಾಖ್ಯಾನ: ಬಿ.ಎಸ್.ರಾಜಗೋಪಾಲ್, ಮುಖ್ಯ ಅತಿಥಿಗಳು: ಮೈಸೂರು ವಿವಿ ನಿವೃತ್ತ ಉಪಕುಲಸಚಿವ ಡಾ.ಎ.ನಿರಂಜನ್, ಡಾ.ಕೃ.ಪಾ. ಮಂಜುನಾಥ್, ಶ್ರೀಮತಿ ಕುಸುಮಾ ರಮೇಶ್, ಸ್ಥಳ: 1315/2, ಹರಿಪ್ರಿಯ, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ :** ವಿವಿಧ ಶಾಲಾ ಮಕ್ಕಳಿಂದ ದೇಶಭಕ್ತಿ ಗೀತೆಗಳ ಗಾಯನ ಮತ್ತು ನಿವೃತ್ತ ವೀರ ಯೋಧರಿಗೆ ಗೌರವ ಸಮರ್ಪಣೆ, ಮುಖ್ಯ ಅತಿಥಿಗಳು : ಸಿ. ರಾಜೇಂದ್ರ, ಅಭಿನವ್ ಚತುರ್ವೇದಿ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಟಿ.ಆರ್. ಹರೀಶ್, ಉಪಸ್ಥಿತರು : ಸುಗಮ ಸಂಗೀತ ಅಕಾಡೆಮಿ ಸಂಸ್ಥಾಪಕರಾದ ಶ್ರೀಮತಿ ಎಚ್.ಆರ್. ಲೀಲಾವತಿ, ಸ್ಥಳ: ಸಂಗೀತ ಕಲಾನಿಧಿ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಸಂಚಲನ, ಮೈಸೂರು, ರಂಗ ರಥ, ಬೆಂಗಳೂರು:** ನಟನಾಭ್ಯಾಸ ಶಿಬಿರ. ಶಿಬಿರದ ನಿರ್ದೇಶಕರು: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 6.30ರಿಂದ.

■ **ಹಿಂದೂ ಜಾಗರಣ ವೇದಿಕೆ, ಮೈಸೂರು ಮಹಾನಗರ :** ಸಂಜೆ 6.30ಕ್ಕೆ ಅಖಂಡ ಭಾರತ ಸಂಕಲ್ಪ ದಿನ ಬೃಹತ್ ಪಂಜಿನ ಮೆರವಣಿಗೆ, ಸ್ಥಳ: ಮಾರುತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ; ರಾತ್ರಿ 8.30ಕ್ಕೆ ಸಭಾ ಕಾರ್ಯಕ್ರಮ, ಸ್ಥಳ: ಶನೇಶ್ವರ ಆರ್ಚ್ ಸರ್ಕಲ್, ರಾಜೇಂದ್ರನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ. ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸದಾಶಿವ ಪಾಟೀಲ್ ಹಾಗೂ ಪಿ. ಎಸ್. ರಂಜನಿ, ವ್ಯಾಖ್ಯಾನ : ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ–ಟಿ. ನರಸೀಪುರ ತಾಲೂಕು, ಬನ್ನೂರಿನ ಕಾಂತನಹಳ್ಳಿಯ ಶಿವಮ್ಮ ಮತ್ತು ಸಂಗಡಿಗರಿಂದ ಮಾರಮ್ಮನ ಹಾಡು ಮತ್ತು ಮಾದೇಶ್ವರನ ಹಾಡು, 4.30 ರಸಮಂಜರಿ–ಸಂಸ್ಕೃತ ಪಾಣಿನಿಯ ವ್ಯಾಕರಣ ಶಾಸ್ತ್ರದ ಒಂದು ಪರಿಚಯ ಈ ಕುರಿತು ವಿದ್ವಾನ್ ಎ.ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಸುರಭಿ ತಾತಾಚಾರ್, 6.50 ಕೃಷಿರಂಗ–ದೇಶಭಕ್ತಿಗೀತೆಗಳು, 7.00 ಸ್ವಾತಂತ್ರೋತ್ಸವದ ಮುನ್ನ ದಿನದಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪತಿ ಮುರ್ಮು ಅವರು ದೇಶವನ್ನು ಉದ್ದೇಶಿಸಿ ಮಾಡುವ ಪ್ರಸಾರ ಭಾಷಣದ ನೇರ ಪ್ರಸಾರ, 7.45 ವಿಧಾನ ಮಂಡಲದಲ್ಲಿ ಇಂದು, 8.15 ಯುವವಾಣಿ–ಮೈಸೂರಿನ ವಿದ್ಯಾಭಾರತಿ ಟ್ರಸ್ಟ್‌ನ ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ವಿಶೇಷ ಕಾರ್ಯಕ್ರಮ ವೈವಿಧ್ಯ ನಮೋ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ದಸರಾ ಗಜಪಡೆ ಬಲಾಢ್ಯತೆಗೆ ಬೇಕಿದೆ ಟನ್‌ಗಟ್ಟಲೆ ಆಹಾರ

• 340 ಟನ್ ಆಲದ ಸೊಪ್ಪು, 170 ಟನ್ ಹಸಿರು ಹುಲ್ಲು, 52 ಟನ್ ಭತ್ತದ ಹುಲ್ಲು, 25 ಟನ್ ಕಬ್ಬು, 225 ಕ್ವಿಂಟಾಲ್ ಭತ್ತ, 75 ಕ್ವಿಂಟಾಲ್ ಅಕ್ಕಿ • ದಿನಕ್ಕೆ 100 ಕೆಜಿ ತರಕಾರಿ ಪೂರೈಕೆ


ಅರಮನೆ ಆವರಣದಲ್ಲಿ ದಸರಾ ಗಜಪಡೆಗೆ ಪೌಷ್ಟಿಕ ಆಹಾರ ತಯಾರಿಸಲು ಸಂಗ್ರಹಿಸಿರುವ ದವಸ–ಧಾನ್ಯ.

ಗುಣಮಟ್ಟದ ಪದಾರ್ಥ ಬಳಸಲಾಗುತ್ತದೆ

ದಸರಾ ಗಜಪಡೆಗೆ ನೀಡುವ ಪೌಷ್ಟಿಕ ಆಹಾರ ತಯಾರಿಕೆಗೆ ಗುಣಮಟ್ಟದ ಪದಾರ್ಥಗಳನ್ನೇ ಬಳಸಲಾಗುತ್ತದೆ. ಗುಣಮಟ್ಟದಲ್ಲಿ ನಂಬರ್ ಒನ್ ಸಾಮಾಗ್ರಿಗಳನ್ನು ಸರಬರಾಜು ಮಾಡಲಾಗುತ್ತದೆ. ಆನೆಗಳ ಆರೋಗ್ಯ ಕಾಪಾಡುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಕೆಜಿ ಆಧಾರದಲ್ಲಿ ದರ ನಿಗದಿ ಮಾಡಿ ಟೆಂಡರ್ ನೀಡಲಾಗಿದೆ. ಗಜಪಡೆ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಒಂದೆರಡು ದಿನದಲ್ಲಿ ವಿಶೇಷ ಆಹಾರ ನೀಡಲಾಗುತ್ತದೆ. ಹಂತ ಹಂತವಾಗಿ ಆನೆಗಳ ಆರೋಗ್ಯ ಸ್ಥಿತಿ ಗಮನಿಸಿ, ಪೌಷ್ಟಿಕ ಆಹಾರದ ಪ್ರಮಾಣ ಹೆಚ್ಚಿಸಲಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಎಲ್ಲಾ ಆನೆಗಳು ಆರೋಗ್ಯದಿಂದ ಕೂಡಿದ್ದು, ತಾಲೀಮಿನಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುತ್ತಿವೆ.

-ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

• ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಆ.13–ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಗಜಪಡೆಯ ಆರೋಗ್ಯ ಮತ್ತು ಅವುಗಳ ಬಲಾಢ್ಯತೆ ಕಾಪಾಡಿಕೊಳ್ಳುವುದು ಅರಣ್ಯ ಇಲಾಖೆಗೆ ಸವಾಲಿನ ಕೆಲಸವಾಗಿದ್ದು, ಅದಕ್ಕಾಗಿ ಟನ್‌ಗಟ್ಟಲೆ ಪೌಷ್ಟಿಕ ಮತ್ತು ಗುಣಮಟ್ಟದ ಆಹಾರ ಪದಾರ್ಥಗಳನ್ನು ನೀಡುವುದರೊಂದಿಗೆ ನಿಗಾ ವಹಿಸಲು ಸಜ್ಜಾಗಿದೆ.

ಈಗಾಗಲೇ ಅರಣ್ಯ ಇಲಾಖೆಯ ವಿವಿಧ ಆನೆ ಕ್ಯಾಂಪುಗಳಿಂದ ಮೈಸೂರು ತಲುಪಿರುವ ಗಜಪಡೆಯ ತೂಕ ಮತ್ತು ಆರೋಗ್ಯವನ್ನು ಪರೀಕ್ಷಿಸಲಾಗಿದ್ದು, ಉಳಿದಿರುವ ದಿನಗಳಲ್ಲಿ ಆನೆಗಳಿಗೆ ಪೌಷ್ಟಿಕ, ಗುಣಮಟ್ಟದ ಆಹಾರ ನೀಡುವುದರೊಂದಿಗೆ ಆಗಾಗ ಆರೋಗ್ಯ ತಪಾಸಣೆ ನಡೆಸಿ ಸದೃಢತೆ ಕಾಪಾಡಲು ಅರಣ್ಯ ಇಲಾಖೆ ತಯಾರಿ ನಡೆಸಿದೆ.

ಈ ಸಾಲಿನ ದಸರಾದಲ್ಲಿ ಗಜಪಡೆಯಲ್ಲಿ 10 ಗಂಡಾನೆ ಹಾಗೂ ನಾಲ್ಕು ಹೆಣ್ಣಾನೆ ಪಾಲ್ಗೊಳ್ಳುತ್ತಿದ್ದು, ಒಟ್ಟು 14 ಆನೆಗಳ ತೂಕ, ಗಾತ್ರ ಪರೀಕ್ಷಿಸಿ ಪ್ರತಿ ದಿನ ಎಷ್ಟು ಪ್ರಮಾಣದ ಪೌಷ್ಟಿಕ ಆಹಾರ ನೀಡಬೇಕೆಂದು ಅಂದಾಜಿಸಲಾಗಿದೆ. ಪಶುವೈದ್ಯರ ಸಲಹೆಯಂತೆ ನಿಗಧಿತ ಪ್ರಮಾಣದ ಆಹಾರ ಪದಾರ್ಥಗಳ ಪೂರೈಕೆಗೆ ಟೆಂಡರ್ ನೀಡಿದೆ. ಬನ್ನೂರಿನ ಅತ್ತಹಳ್ಳಿ ಗ್ರಾಮದ ಕೆ.ಎಸ್.ಬಾಬು ಎಂಬುವರು ದಸರಾ ಗಜಪಡೆಗೆ ಪೌಷ್ಟಿಕ ಆಹಾರ ಒದಗಿಸಲು ಬೇಕಾಗುವ ದಿನಸಿ ಹಾಗೂ ಒಣ ಮತ್ತು ಹಸಿ ಹುಲ್ಲು ಸರಬರಾಜು ಮಾಡುತ್ತಿದ್ದಾರೆ.

ಬರೋಬ್ಬರಿ 56 ದಿನಕ್ಕೆ ಆಹಾರ ಪೂರೈಕೆ: ಅರಮನೆ ಆವರಣದಲ್ಲಿ ಈ ಬಾರಿ ದಸರಾ ಗಜಪಡೆ 56 ದಿನ ಬೀಡು ಬಿಡಲಿದೆ. ಮೊದಲ ತಂಡದ 9 ಹಾಗೂ ಎರಡನೇ ತಂಡದ 5 ಆನೆಗಳಿಗೆ ಬೇಕಾದ ಆಹಾರ ಪದಾರ್ಥ ದಾಸ್ತಾನಿಗೆ ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ಆನೆಗಳಿಂದ ಈ ಬಾರಿ 340 ಟನ್ ಆಲದ ಸೊಪ್ಪು, 170 ಟನ್ ಹಸಿರು ಹುಲ್ಲು, 52 ಟನ್ ಭತ್ತದ ಹುಲ್ಲು, 25 ಟನ್ ಕಬ್ಬು ನೀಡಲು ಉದ್ದೇಶಿಸಲಾಗಿದೆ.

ಅಲ್ಲದೆ, 225 ಕ್ವಿಂಟಾಲ್ ಭತ್ತ, 75 ಕ್ವಿಂಟಾಲ್ ಅಕ್ಕಿ, 525 ಕೆಜಿ ಬೆಲ್ಲ, 28 ಕ್ವಿಂಟಾಲ್ ಕುಸುಬಲಕ್ಕಿ, 28 ಕ್ವಿಂಟಾಲ್ ಗೋಧಿ, 28 ಕ್ವಿಂಟಾಲ್ ಹೆಸರುಕಾಳು, 28 ಕ್ವಿಂಟಾಲ್ ಉದ್ದಿನಕಾಳು, 35 ಕ್ವಿಂಟಾಲ್ ಕಡಲೆಕಾಯಿ ಹಿಂಡಿ, 3 ಕ್ವಿಂಟಾಲ್ ಅವಲಕ್ಕಿ, 1 ಸಾವಿರ ಕೆಜಿ ಈರುಳ್ಳಿ, 175 ಕೆಜಿ ಬೆಣ್ಣೆ, 375 ಕೆಜಿ ಉಪ್ಪು, 3250 ತೆಂಗಿನಕಾಯಿ ನೀಡಲಾಗುತ್ತದೆ.

ದಿನಕ್ಕೆ 100 ಕೆಜಿ ತರಕಾರಿ: ಅಲ್ಲದೆ, ದಿನಕ್ಕೆ 100 ಕೆಜಿ ತರಕಾರಿ ನೀಡಲಾಗುತ್ತದೆ. ಅರಣ್ಯ ಇಲಾಖೆಯೇ ಹಾಪ್‌ಕಾಮ್ಸ್‌ನಲ್ಲಿ ತರಕಾರಿಯನ್ನು ಖರೀದಿಸುತ್ತದೆ. ವಿಶೇಷ ಆಹಾರ ತಯಾರಿಕೆ ನಂತರ ಗೆಡ್ಡೆಕೋಸ್, ಬೀಟರೂಟ್, ಕ್ಯಾರೆಟ್, ಸೌತೆಕಾಯಿ, ಸೀಮೆಬದನೆಕಾಯಿ ತುಂಡನ್ನು ಬೆರೆಸಿ ಆನೆಗಳಿಗೆ ನೀಡಲಾಗುತ್ತದೆ.

ಆನೆ ತಂಪಾಗಿಸಲು ಎಣ್ಣೆ ಬಳಕೆ: ಪ್ರತಿದಿನ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮಿಗೆ ಹೋಗುವ ಆನೆಗಳನ್ನು ತಂಪಾಗಿಸಲು ತಲೆ, ಹಣೆ, ಕಾಲಿಗೆ ಎಣ್ಣೆ ಹಚ್ಚಲಾಗುತ್ತದೆ. ಅದಕ್ಕಾಗಿ 200 ಲೀಟರ್ ಹರಳೆಣ್ಣೆ, 200 ಲೀಟರ್ ಹೊಂಗೆ ಎಣ್ಣೆ, 200 ಲೀಟರ್ ಬೇವಿನ ಎಣ್ಣೆ ಬಳಸಲಾಗುತ್ತದೆ. ತಾಲೀಮಿನ ವೇಳೆ ಆನೆಗಳ ಮೇಲೆ ಗಾದಿ, ನಮ್ದಾ ಕಟ್ಟುವುದರಿಂದ ಹಗ್ಗ ಬಿಗಿದ ಸ್ಥಳದಲ್ಲಿ ಗಾಯವಾಗದಂತೆ ತಡೆಗಟ್ಟಲು ಹರಳೆಣ್ಣೆ ಹಾಗೂ ಹೊಂಗೆ ಎಣ್ಣೆ ಹಚ್ಚಲಾಗುತ್ತದೆ. ಕಾಲಿನ ಪಾದಕ್ಕೆ, ಸರಪಳಿ ಬಿಗಿರುವ ಜಾಗಕ್ಕೆ ಹಾಗೂ ಬೆರಳಿನ ಸಂದಿಗೆ ಬೇವಿನ ಎಣ್ಣೆ ಹಚ್ಚಲಾಗುತ್ತದೆ. ಹಾಗಾಗಿ ಆನೆಗಳನ್ನು ತಂಪಾಗಿಸಲು ಎಣ್ಣೆ ಪ್ರಮುಖ ಪಾತ್ರವಹಿಸುತ್ತದೆ.

ಮೈಸೂರಲ್ಲಿ ಮಹಾರಾಜ ಟ್ರೋಫಿ–2025

ಕ್ರಾಂತಿಗೆ ಐದು ವಿಕೆಟ್; ಡ್ರ್ಯಾಗನ್ಸ್‌ಗೆ 29 ರನ್ ಜಯ



ಮೈಸೂರು, ಆ.13(ವಿವಿಹೆಚ್)– ಸಂಘಟಿತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದ ನೆರವಿನಿಂದ ಮಂಗಳೂರು ಡ್ರ್ಯಾಗನ್ಸ್, ಶಿವಮೊಗ್ಗ ಲಯನ್ಸ್ ತಂಡವನ್ನು 29 ರನ್‌ಗಳಿಂದ ಪರಾಭವಗೊಳಿಸುವಲ್ಲಿ ಯಶಸ್ವಿಯಾಗಿದೆ.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಡ್ರ್ಯಾಗನ್ಸ್ ಬಿ.ಆರ್.ಶರತ್ ಅವರ ಅರ್ಧ ಶತಕದಾಟದ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 179 ರನ್ ಗಳಿಸಿ ಎದುರಾಳಿ ತಂಡಕ್ಕೆ 180 ರನ್ ಟಾರ್ಗೆಟ್ ನೀಡಿತು. ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಶಿವಮೊಗ್ಗ ಲಯನ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 150 ರನ್ ಗಳಿಸಿ 29 ರನ್‌ಗಳ ಅಂತರದಿಂದ ಸೋಲು ಕಂಡಿತು.

ಮಂಗಳೂರು ಇನ್ನಿಂಗ್ಸ್: ಮೊದಲು ಬ್ಯಾಟಿಂಗ್ ಇಳಿದ ಡ್ರ್ಯಾಗನ್ಸ್‌ಗೆ ಆರಂಭಿಕ ಆಟಗಾರ ಬಿ.ಆರ್.ಶರತ್ ಆಸರೆಯಾದರು. 31 ಎಸೆತಗಳಲ್ಲಿ 7 ಬೌಂಡರಿ, 5 ಸಿಕ್ಸರ್ ಸಹಿತ 70 ರನ್ ಬಾರಿಸಿದರು. ಕೆ.ವಿ. ಅನೀಶ್ 32, ಆದರ್ಶ್ ಪ್ರಜ್ವಲ್ 20, ಶಿವರಾಜ್ 19 ರನ್ ಗಳಿಸಿದರು. ಮ್ಯಾಕ್ನೀಲ್ ನೊರೊನ್ಹಾ 3, ನಾಯಕ ಶ್ರೇಯಸ್ ಗೋಪಾಲ್ 3, ಕ್ರಾಂತಿ ಕುಮಾರ್ 8 ರನ್ ಗಳಿಸಿ ಔಟಾದರು. ಅಭಿಲಾಷ್ ಶೆಟ್ಟಿ 1 ಹಾಗೂ ಶ್ರೀವಸ್ತ ಆಚಾರ್ಯ 2 ರನ್ ಗಳಿಸಿ ಔಟಾಗದೇ ಉಳಿದರು. ಲಯನ್ಸ್ ಪರ ವಿ.ಕೌಶಿಕ್ 3, ಹಾರ್ದಿಕ್ ರಾಜ್ 2, ವಿದ್ವತ್ ಕಾವೇರಪ್ಪ, ಅನಂದ್ ದೊಡ್ಡಮನಿ ಹಾಗೂ ಅವಿನಾಶ್ ತಲಾ ಒಂದೊಂದು ವಿಕೆಟ್ ಪಡೆದರು.

ಶಿವಮೊಗ್ಗ ಇನ್ನಿಂಗ್ಸ್: ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಲಯನ್ಸ್‌ಗೆ ಆರಂಭಿಕ ಆಘಾತ ಉಂಟಾಯಿತು. ಕ್ರಾಂತಿ ಕುಮಾರ್ ಕರಾರುವಕ್ಕಾದ ದಾಳಿಗೆ ಲಯನ್ಸ್ ತತ್ತರಿಸಿ ಹೋದರು. ಧ್ರುವ್ ಪ್ರಭಾಕರ್ 1 ರನ್‌ಗೆ ನಿರ್ಗಮಿಸಿದರೆ, ನಾಯಕ ನಿಹಾಲ್ ಉಲ್ಲಾಳ್ 11 ರನ್ ಗಳಿಸಿ ಪೆವಿಲಿಯನ್ ಸೇರಿದರು. ಅನೀಶ್ವರ್ ಗೌತಮ್ 7, ಅನಿರುದ್ಧ ಜೋಶಿ ಡಕ್ ಔಟ್ ಆಗುವ ಮೂಲಕ ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿದರು.

ಕೆ.ರೋಹಿತ್ ಕುಮಾರ್ (62) ಅರ್ಧ ಶತಕದಾಟ ತಂಡವನ್ನು ಸೋಲಿನಿಂದ ಪಾರು ಮಾಡಲು ಆಗಲಿಲ್ಲ. ಇವರ ವಿಕೆಟ್ ಪತನದ ನಂತರ ಬಂದ ಬೇರಾರಿಂದಲೂ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಸಾಧ್ಯವಾಗಲಿಲ್ಲ. ಉಳಿದಂತೆ ಹಾರ್ದಿಕ್ ರಾಜ್ ಡಕ್ ಔಟ್, ಡಿ.ಅವಿನಾಶ್ 25, ತುಷಾರ್ ಸಿಂಗ್ 23 ರನ್ ಗಳಿಸಿದರು. ಅಭಿಲಾಷ್ ಶೆಟ್ಟಿ 1 ಹಾಗೂ ಶ್ರೀವಸ್ತ ಆಚಾರ್ಯ 2 ರನ್ ಗಳಿಸಿ ಅಜೇಯರಾಗಿ ಉಳಿದರು. ಉತ್ತಮವಾಗಿ ಬೌಲ್ ಮಾಡಿದ ಕ್ರಾಂತಿ ಕುಮಾರ್ 5 ವಿಕೆಟ್ ಪಡೆಯುವ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸಂತೋಕ್ ಸಿಂಗ್ 2, ಅಭಿಲಾಷ್ ಶೆಟ್ಟಿ 1 ವಿಕೆಟ್ ಪಡೆದು ಮಿಂಚಿದರು.

ತಹಾ ಶತಕ: ಟೈಗರ್ಸ್‌ಗೆ ಸತತ ಎರಡನೇ ಗೆಲುವು



ಮೈಸೂರು, ಆ.13(ವಿವಿಹೆಚ್)– ಮೊಹಮ್ಮದ್ ತಹಾ ಅವರ ಆಕರ್ಷಕ ಶತಕದಾಟದ ಬಲದಿಂದಾಗಿ ಹುಬ್ಬಳ್ಳಿ ಟೈಗರ್ಸ್ ತಂಡ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು 2 ವಿಕೆಟ್‌ಗಳ ಅಂತರದಿಂದ ಮಣಿಸುವ ಮೂಲಕ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್, ರೋಹನ್ ಪಾಟೀಲ್ ಅವರ ಅರ್ಧ ಶತಕದಾಟದ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿ ಎದುರಾಳಿ ತಂಡಕ್ಕೆ 226 ರನ್ ಗಳ ಟಾರ್ಗೆಟ್ ನೀಡಿತು. ಈ ಬೃಹತ್ ಮೊತ್ತ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 228 ರನ್ ಗಳಿಸಿ 2 ವಿಕೆಟ್‌ಗಳ ಅಂತರದ ರೋಚಕ ಗೆಲುವು ದಾಖಲಿಸಿತು.

ಬ್ಲಾಸ್ಟರ್ಸ್ ಇನ್ನಿಂಗ್ಸ್: ಟಾಸ್ ಸೋತು ಬ್ಯಾಟಿಂಗ್ ಇಳಿದ ಬ್ಲಾಸ್ಟರ್ಸ್‌ಗೆ ಉತ್ತಮ ಆರಂಭ ದೊರೆಯಿತು. ಎಲ್.ಆರ್.ಚೇತನ್ 23 ರನ್ ಗಳಿಸಿ ಔಟಾದರೇ, ರೋಹನ್ ಪಾಟೀಲ್ 43 ಎಸೆತದಲ್ಲಿ 8ಬೌಂಡರಿ, 5 ಸಿಕ್ಸರ್ ಸಹಿತ 80 ರನ್ ಕಲೆಹಾಕಿ ಹೊರನಡೆದರು. ಉಳಿದಂತೆ ಮಯಾಂಕ್ ಅಗರ್ವಾಲ್ 9, ಭುವನ್ ರಾಜು 15, ಸೂರಜ್ 27, ನಾಯಕ ಶುಭಾಂಗ್ ಹೆಗ್ಡೆ 9 ರನ್ ಗಳಿಸಿ ಔಟಾದರು. ಕೊನೆಯಲ್ಲಿ ಒಂದಾದ ರೋಹನ್ 24 ಹಾಗೂ ನವೀನ್ 27 ರನ್ ಗಳಿಸಿ ತಂಡದ ಮೊತ್ತ ಇನ್ನೂರರ ಗಡಿ ದಾಟಲು ನೆರವಾದರು.

ಟೈಗರ್ಸ್ ಪರ ಯಶ್‌ರಾಜ್ ಪುಂಜಾ ಪ್ರಮುಖ ಮೂರು ವಿಕೆಟ್ ಪಡೆದರು. ಕರಿಯಪ್ಪ 2 ಹಾಗೂ ರಿತೇಶ್ ಒಂದು ವಿಕೆಟ್ ಪಡೆದು ಗಮನ ಸೆಳೆದರು.

ಟೈಗರ್ಸ್ ಇನ್ನಿಂಗ್ಸ್: ಈ ಬೃಹತ್ ಮೊತ್ತ ಬೆನ್ನತ್ತಿದ ಹುಬ್ಬಳ್ಳಿಗೆ ನಿರೀಕ್ಷಿತ ಆರಂಭ ದೊರೆಯಲಿಲ್ಲ. ಆರಂಭಿಕ ಬ್ಯಾಟರ್ ಚುತುರ್ವೇದಿ 18 ರನ್ ಗಳಿಸಿ ಔಟಾದರೇ, ನಾಯಕ ದೇವ್‌ದತ್ ಪಡಿಕ್ಕಲ್ ಕೇವಲ 4 ರನ್ ಗಳಿಸಿ ಪೆವಿಲಿಯನ್ ಸೇರಿದರು. ಬಳಿಕ ಬಂದ ಕಾರ್ತಿಕೇಯ 7 ರನ್ ಗಳಿಸಿ ನಿರ್ಗಮಿಸಿದರು.

ಮತ್ತೊಂದೆಡೆ ಭದ್ರವಾಗಿ ನೆಲೆಯೂರಿದ ತಹಾ 54 ಎಸೆತ ಎದುರಿಸಿ 9 ಬೌಂಡರಿ, 7 ಸಿಕ್ಸರ್ ಸಹಿತ 101 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರವಹಿಸಿದರು. ಇವರಿಗೆ ಉತ್ತಮವಾಗಿ ಸಾಥ್ ನೀಡಿದ ಅಭಿನವ್ ಮನೋಹರ್ 33, ಸಮರ್ಥ ನಾಗರಾಜ್ 12, ಮನ್ವಂತ್ ಕುಮಾರ್ 18, ರನ್ ಗಳಿಸಿದರು. ಕೊನೆಯಲ್ಲಿ ಭರ್ಜರಿಯಾಗಿ ಬ್ಯಾಟ್ ಬೀಸಿದ ಶಿವಕುಮಾರ್ ರಕ್ಷಿತ್ ಕೇವಲ 6 ಎಸೆತಗಳಲ್ಲಿ ಅಜೇಯ 18 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ರಿತೇಶ್ ಡಕ್‌ಔಟ್ ಆದರೇ, ಕಾರ್ಯಪ್ಪ ಶೂನ್ಯ ಸಂಪಾದಿಸಿ ಕ್ರೀಸ್‌ನಲ್ಲಿದ್ದರು.

ಬ್ಲಾಸ್ಟರ್ಸ್ ಪರ ಮೋಸಿನ್ ಖಾನ್ 2, ವಿದ್ಯಾಧರ್ ಪಾಟೀಲ್, ನವೀನ್ ಹಾಗೂ ಪ್ರತೀಕ್ ಜೈನ್ ತಲಾ ಒಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಹುಬ್ಬಳ್ಳಿ ಟೈಗರ್ಸ್ ತಂಡದ ಆಟಗಾರ ಮೊಹಮ್ಮದ್ ತಹಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕೆ.ಟಿ.ತಿಮ್ಮೇಗೌಡ ನಿಧನ



ಕೆ.ಆರ್.ಪೇಟೆ, ಆ.13– ತಾಲೂಕಿನ ಕಟ್ಟೆಕ್ಯಾತನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಹಾಗೂ ತಾಲೂಕು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೆ.ಟಿ.ತಿಮ್ಮೇಗೌಡ (75) ಬುಧವಾರ ನಿಧನರಾದರು.

ಮೃತರು ಪತ್ನಿ ನಾಗಮ್ಮ, ಪುತ್ರ ಡಿಸಿಸಿ ಬ್ಯಾಂಕ್ ಮ್ಯಾನೇಜರ್ ಮಹೇಶ್, ಓರ್ವ ಪುತ್ರಿ, ಸಹೋದರ ಅರಣ್ಯ ಇಲಾಖೆ ನಿವೃತ್ತ ಗೆಜೆಟೆಡ್ ಮ್ಯಾನೇಜರ್ ಕೆ.ಟಿ.ಚಂದ್ರೇಗೌಡ ಸೇರಿದಂತೆ ಇಬ್ಬರು ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಸ್ಕಾಂ ಸ್ಮಾರ್ಟ್ ಮೀಟರ್ ಕಡ್ಡಾಯ ಪ್ರಶ್ನಿಸಿದ್ದ ರಿಟ್ ಅರ್ಜಿ ಹೈಕೋರ್ಟ್‌ನಲ್ಲಿ ವಜಾ

ಬೆಂಗಳೂರು, ಆ.13– ಬೆಸ್ಕಾಂನ ಸ್ಮಾರ್ಟ್ ಮೀಟರ್ ಕಡ್ಡಾಯ ಪ್ರಶ್ನಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಹಳೆಯ ಮೀಟರ್ ಬದಲಿಸುವುದಿಲ್ಲವೆಂದು ಎಜಿ ಹೇಳಿಕೆ ನೀಡಿದ್ದಾರೆ. ಅಲ್ಲದೇ ವಿಭಾಗೀಯ ಪೀಠದಲ್ಲಿ ಈ ವಿಚಾರಕ್ಕೆ ಪಿಐಎಲ್ ದಾಖಲಾಗಿದೆ ಎಂದು ಹೇಳಿ ಜಯಲಕ್ಷ್ಮಿ, ಪಿ.ಎಂ. ಹರೀಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.

ದೊಡ್ಡಬಳ್ಳಾಪುರದ ಟಿಬಿ ನಾರಾಯಣಪ್ಪ ಲೇಔಟ್ ನಿವಾಸಿ ಎಂ ಜಯಲಕ್ಷ್ಮೀ ಅವರು ಹೊಸದಾಗಿ ನಿರ್ಮಿಸಿರುವ ತಮ್ಮ ಮನೆಗೆ ಸಿಂಗಲ್ ಫೇಸ್‌ನಿಂದ ತ್ರೀ ಫೇಸ್‌ಗೆ ಮೀಟರ್ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಮನವಿ ಸಲ್ಲಿಸಿದ್ದರು. ಇದಕ್ಕೆ ಪ್ರತಿಯಾಗಿ ಬೆಸ್ಕಾಂ ಅಧಿಕಾರಿಗಳು, ಸ್ಮಾರ್ಟ್ ಮೀಟರ್ ಅವಳವಡಿಸಿಕೊಳ್ಳಬೇಕು ಎಂದು ತಾಕೀತು ಮಾಡಿ ಪತ್ರವೊಂದನ್ನು ನೀಡಿದ್ದರು. ಈ ಸಂಬಂಧ ದೊಡ್ಡಬಳ್ಳಾಪುರ ನಗರ ಉಪವಿಭಾಗ ಸಹಾಯ ಕಾರ್ಯನಿರ್ವಾಹಕ ಇಂಜಿನಿಯರ್ ನೀಡಿದ್ದ ಪತ್ರವನ್ನು ಪ್ರಶ್ನಿಸಿ ಜಯಲಕ್ಷ್ಮೀ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಇದನ್ನು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಸ್ಮಾರ್ಟ್ ಮೀಟರ್ ಬಗ್ಗೆ ಸರ್ಕಾರಕ್ಕೆ ಚಾಟಿ ಬೀಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರ ಪೀಠವು ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮಧ್ಯಂತರ ತಡೆ ನೀಡಿ, ಆಕ್ಷೇಪಣೆ ಸಲ್ಲಿಸಲು ಬೆಸ್ಕಾಂ ವಕೀಲರಿಗೆ ನೋಟಿಸ್ ಜಾರಿ ಮಾಡಿತ್ತು. ಸ್ಮಾರ್ಟ್ ಮೀಟರ್ ಕಡ್ಡಾಯ ಉಚಿತ ಭಾಗ್ಯಗಳನ್ನು ಕೊಟ್ಟಿರುವ ಪರಿಣಾಮಾನಾ? ನಿಮಗೆ ಉಚಿತ ವಿದ್ಯುತ್ ಕೇಳಿದವರು ಯಾರು? ಬಡವರು ಎಲ್ಲಿಗೆ ಹೋಗಬೇಕು? ಎಂದು ಸರ್ಕಾರಿ ಪರ ವಕೀಲರನ್ನು ಜಡ್ಜ್ ತರಾಟೆಗೆ ತೆಗೆದುಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

15ನೇ ವರ್ಷದ ಸವಿನೆನಪು



ಹೆಚ್.ಜಿ. ಕುಮಾರಸ್ವಾಮಿ (ಕೆ.ಇ.ಬಿ)
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ
ಸದಾ ನಿಮ್ಮನ್ನು ಸ್ಮರಿಸುತ್ತಿರುವ
ತಂದೆ ತಾಯಿ ಮತ್ತು ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಶ್ರೀಮತಿ ಮರಿಯಮ್ಮ ಜಾರ್ಜ್ ಬಿನ್ ಲೇಟ್ ವಿ.ವಿ. ಜಾರ್ಜ್ ರವರ ಹಾಲೀ ಸ್ವಾಧೀನಾನುಭವದಲ್ಲಿರುವ ಮೈಸೂರು ನಗರ, ವಿಜಯನಗರ 4ನೇ ಹಂತ, 2ನೇ ಫೇಸ್, ನಿವೇಶನ ಸಂಖ್ಯೆ 6446 ರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀಡಿರುವ ಹಕ್ಕುಪತ್ರ/ಟೈಟಲ್ ಡೀಡ್ ದಿನಾಂಕ 25–07–2025 ರಂದು ಕಳೆದು ಹೋಗಿರುತ್ತದೆ. ಸದರಿ ಮೇಲಿನ ದಾಖಲಾತಿಗಳು ಯಾರಿಗಾದರೂ ಸಿಕ್ಕಿದಲ್ಲಿ ಈ ದೂರವಾಣಿ ಸಂಖ್ಯೆ 9900008685ಗೆ ಸಂಪರ್ಕಿಸಬೇಕಾಗಿ ಕೋರಿಕೊಳ್ಳುತ್ತೇನೆ. ದಿ:14–08–2025, ಸ್ಥಳ: ಮೈಸೂರು.

PUBLIC NOTICE

Notice is hereby issued to the General Public that Kum. POORVIKA CHANDANAM, C/o. Chandrakala, Residing at # MH-26, Eshwar Krupa Apartment, GF-2, Kaivalya Marga, Behind Prithvi Lifestyle Apartment, Siddarthanagar, Mysuru - 570 011 has agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF VACANT SITE PROPERTY BEARING NO. 152, CARVED OUT OF SY. NO. 90/1 (WITHIN THE LIMITS OF VARUNA GRAMA PANCHAYAT), MEASURING EAST TO WEST 09 METERS AND NORTH TO SOUTH 12 METERS, TOTALLY MEASURING 108 SQUARE METERS, IN LAYOUT KNOWN AS "PREMIO" PHASE-II FORMED IN RESIDENTIALLY CONVERTED LAND BEARING SY. NO. 8, 84, 87/1, 88, 90/1, 90/4, 91/8 TOTALLY MEASURING 21 ACRES 34 GUNTAS, SITUATED AT CHORANAHALLI VILLAGE, VARUNA HOBLI, MYSURU TALUK, MYSURU DISTRICT & THE RURAL DEVELOPMENT AND PANCHAYATI RAJ DEPARTMENT HAS ISSUED FORM NO. 9 & 11A VIDE UNIQUE NO. 152200415059021054 & BOUNDED ON-EAST BY : SITE No. 151, WEST BY: SITE No. 153, NORTH BY: ROAD, SOUTH BY: SITE No. 167.

Sd/- M. SANJAY JAIN
B.B.M, LL.B., CCL, CMJFS, ADVOCATE
#L- 50/2A, 1 Floor, Ashoka Road,
MYSORE-570001
email: msj186@yahoo.co.in
Mobile: 93414-64636
Place: Mysuru, Date: 14/08/2025

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

5ನೇ ವರ್ಷದ ಸವಿನೆನಪು



ಜನನ: 11.7.1977
ಶ್ರೀ ಪ್ರಸನ್ನಕುಮಾರ್
ನಿಧನ: 14.8.2020

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು

ದುಃಖತಪ್ತರು: ತಂದೆ–ನಾಗರಾಜು, ತಾಯಿ–ಲಕ್ಷ್ಮಮ್ಮ, ಪತ್ನಿ– ರತ್ನಕುಮಾರಿ ಮಕ್ಕಳಾದ ಅಭಿಷೇಕ್ ಮತ್ತು ಅಮೂಲ್ಯ ಹಾಗೂ ತಮ್ಮ, ಶ್ರೀಮತಿ ರಶ್ಮಿ ಮತ್ತು ಆದರ್ಶ್ ಮತ್ತು ಅಕ್ಕ ರಮಾಮಣಿ ಹಾಗೂ ಕುಟುಂಬವರ್ಗದವರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ,
ಮೈಸೂರು–570009 ದೂರವಾಣಿ : 0821– 2411463
ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ, ಮುಖ್ಯ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಮೈಸೂರು ವಲಯ, ಮೈಸೂರು ವ್ಯಾಪ್ತಿಯಲ್ಲಿರುವ ಕಛೇರಿಗೆ ಅಗತ್ಯವಿರುವ 2 ಸಂಖ್ಯೆ ಸಿವಿಲ್ ಇಂಜಿನಿಯರ್ ಪದವೀಧರ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಸರ್ವಿಸ್ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ರಲ್ಲಿ ಕರೆಯಲಾಗಿದ್ದು,.ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),ಮೈಸೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಆಲನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ತಾಲ್ಲೂಕು ಪಂಚಾಯತ್ ಹೆಚ್.ಡಿ. ಕೋಟೆ ಜಿಲ್ಲಾ ಪಂಚಾಯತ್ ಮೈಸೂರು
ದಿನಾಂಕ: 12/08/2025

ಟೆಂಡರ್ ಪ್ರಕಟಣೆ ಇ–ಪ್ರಕ್ಯೂರ್‌ಮೆಂಟ್ ಮೂಲಕ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಆಲನಹಳ್ಳಿ ಹೆಚ್ ಡಿ ಕೋಟೆ ತಾಲ್ಲೂಕು ಇವರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಎಂ ಜಿ ಎನ್ ಆರ್ ಇ ಜಿ ಎ ಯೋಜನೆ 2025–26 ನೇ ಸಾಲಿನ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಸಾಮಾಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Documents for E-procurement For Goods ನಮೂನೆಯಲ್ಲಿ ಆಹ್ವಾನಿಸಲಾಗಿದೆ.

ವಿವರ	ಟೆಂಡರ್ ವೇಳಾ ಪಟ್ಟಿ
ಕೊತ್ತೆಗಾಲ ಗ್ರಾಮದ ಸರ್ವೆ ನಂ 8 ಊರಕೆರೆ ಸಮಗ್ರ ಅಭಿವೃದ್ಧಿ 2025-26 ನೇ ಸಾಲಿನ) RDPR/2025-26/ IND10497/CAII-2	1) ಟೆಂಡರ್ ಹಾಕಲು ಕೊನೆಯ ದಿನಾಂಕ: 19–08–2025 ರ ಸಂಜೆ 5:00 ಗಂಟೆಗೆ 2) ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ 20/08/2025 ರ ಸಂಜೆ 5:00 ಗಂಟೆಗೆ. 3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21/08/2025 ರ ಬೆಳಿಗ್ಗೆ 11:00 ಗಂಟೆಗೆ.

ಈ ಟೆಂಡರ್ ಪ್ರಕ್ರಿಯೆಯು ತಾಂತ್ರಿಕ ತೊಂದರೆ ಮತ್ತು ಇತರೆ ವಿಷಯಗಳಿಂದ ರದ್ದತಿಯಾದರೆ ಮತ್ತೊಮ್ಮೆ ಪತ್ರಿಕ ಪ್ರಕಟಣೆ ಮಾಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/– ಅಧ್ಯಕ್ಷರು, ಗ್ರಾ.ಪಂ. ಪಂಚಾಯಿತಿ, ಆಲನಹಳ್ಳಿ ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ., ಆಲನಹಳ್ಳಿ

ನಕ್ಕರೆ ಅದೇ ಸ್ವರ್ಗ

ಗುಂಡಣ್ಣ ಕೆಲಸದ ಸಂದರ್ಶನಕ್ಕೆ ಹೋಗಿದ್ದ

ಮ್ಯಾನೇಜರ್ : ನೀವು ಪಡೆದಿರುವ ಉನ್ನತ ಶಿಕ್ಷಣದ ಬಗ್ಗೆ ಹೇಳಿ?

ಗುಂಡಣ್ಣ : PHD

ಮ್ಯಾನೇಜರ್ : ಗ್ರೇಟ್! ನೀವು ಡಾಕ್ಟರ್ ಡಿಗ್ರಿ ಪಡೆದಿದ್ದೀರಾ. ಬಹಳ ಸಂತೋಷ. ನಮ್ಮ ಕಂಪನಿಗೆ ನಿಮ್ಮಂತಹ ವಿದ್ಯಾವಂತರೇ ಬೇಕಾಗಿದ್ದು.

ಗುಂಡಣ್ಣ : ಅದು ಹಾಗಲ್ಲ ಸಾರ್ ಪಿಎಚ್‌ಡಿ ಎಂದರೆ **Passed Highschool with Difficulties**

ಮೈಸೂರು ಮಿತ್ರ

ಗುರುವಾರ, 14 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


ಅಮೃತ ವಾಹಿನಿ..........

ಮನಸ್ಸು ಸಿರಿವಂತವಾದರೆ ನಮ್ಮಲ್ಲಿ ಸಂಪತ್ತು ಇಲ್ಲದಿದ್ದರೂ ನಾವು ಸಿರಿವಂತರೇ. ಮನಸ್ಸೇ ಬಡವಾಗಿದ್ದರೆ ನಮ್ಮಲ್ಲಿ ಸಂಪತ್ತು ಇದ್ದರೂ ನಾವು ಬಡವರೇ! ಸಂತೃಪ್ತಿಗಿಂತ ಮಿಗಿಲಾದ ಸಂಪತ್ತಿಲ್ಲ. –ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಪುರಾಣ ಹೇಳೋಕೆ / ಬದನೆಕಾಯಿ ತಿನ್ನೋಕೆ

ನಿಮ್ಮ ಪತ್ರಗಳು

ದೇವರಾಜ ಅರಸು ಮಾಸ್ ಲೀಡರ್ ಆಗಿರಲಿಲ್ಲ; ದಿನೇಶ್ ಅಮಿನ್ ಮಟ್ಟು ಹೇಳಿಕೆ ಖಂಡನೀಯ



ಮಾನ್ಯರೆ,


ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ದೊಡ್ಡ ಮಾಸ್ ಲೀಡರ್ ಯಾರಾದರೂ ಇದ್ದರೆ ಅದು ದೇವರಾಜ ಅರಸು ಅವರು ಮಾತ್ರವಾಗಿದ್ದಾರೆ. ದೇವರಾಜ ಅರಸು ಅವರ ಸ್ಥಾನವನ್ನು ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಪಡೆಯಲು ಸಾಧ್ಯವೇ ಇಲ್ಲ. ದೇವರಾಜ ಅರಸು ಅವರು ಮಾಸ್ ಲೀಡರ್ ಅದ ಕಾರಣಕ್ಕೆ ಹುಣಸೂರು ಕ್ಷೇತ್ರದಲ್ಲಿ ಅವಿರೋಧವಾಗಿ ಶಾಸಕರಾಗಿದ್ದು. ಆ ರೀತಿಯಲ್ಲಿ ಅವಿರೋಧವಾಗಿ ಸಿದ್ದರಾಮಯ್ಯ ಯಾವತ್ತಾದರೂ ಶಾಸಕರಾಗಿದ್ದರಾ... ದೇವರಾಜ ಅರಸು ಮಾಸ್ ಲೀಡರ್ ಆಗಿದ್ದ ಕಾರಣ ನಿರಂತರವಾಗಿ ಚುನಾವಣೆಯಲ್ಲಿ ಗೆದ್ದರು. ಅವರು ಸ್ಪರ್ಧಿಸಿದ ಪ್ರತಿ ಚುನಾವಣೆಯಲ್ಲೂ ಗೆದ್ದಿದ್ದಾರೆ. ಅದರೆ ಸಿದ್ದರಾಮಯ್ಯನವರು ಹಲವಾರು ಚುನಾವಣೆಗಳಲ್ಲಿ ಹೀನಾಯವಾಗಿ ಸೋತಿದ್ದಾರೆ. ಪ್ರತಿಯೊಂದು ಚುನಾವಣೆಯಲ್ಲೂ ಕಷ್ಟಪಟ್ಟು ಒಳ ಒಪ್ಪಂದ ಮಾಡಿಕೊಂಡು ಗೆದ್ದಿದ್ದಾರೆ.

ಇಂತಹ ಸ್ಥಿತಿ ದೇವರಾಜ ಅರಸು ಅವರೆಂದು ತಂದುಕೊಂಡಿರಲಿಲ್ಲ. ರಾಜಕೀಯ ಅಧಿಕಾರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಪ್ಪಟ ಬಕೆಟ್ ಗಿರಾಕಿ ಆಗಿ ಬದಲಾಗಿರುವ ದಿನೇಶ್ ಅಮಿನ್ ಮಟ್ಟು ಅವರು ದೇವರಾಜ ಅರಸು ಅವರನ್ನು ಅವಮಾನಿಸಿರುವುದು ನಾಚಿಕೆಗೇಡಿನ ವಿಚಾರವಾಗಿದೆ.

–ಸೂರ್ಯಪ್ರಕಾಶ ಕೋಲಿ, ಅಹಿಂದ ಒಕ್ಕೂಟ, ಬೆಂಗಳೂರು. ಮೊ. 9945138515

■ ಹಾರ್ಡ್ವಿಕ್ ಶಾಲೆಗೆ ದೀಪಾಲಂಕಾರ ಮಾಡಿ

ಮಾನ್ಯರೆ,



ಮೈಸೂರಿನ ಹಲವಾರು ಪಾರಂಪರಿಕ ಕಟ್ಟಡಗಳಲ್ಲಿ ಜೆಎಲ್‌ಬಿ ಮುಖ್ಯರಸ್ತೆಯಲ್ಲಿರುವ ಸುಪ್ರಸಿದ್ಧ ಒಂದೂವರೆ ಶತಮಾನ (170 ವರ್ಷ) ಕಂಡಿರುವ ಹಾರ್ಡ್ವಿಕ್ ಪ್ರೌಢಶಾಲೆಯ ಭವ್ಯ ಕಟ್ಟಡವೂ ಒಂದು. ಚೌಕಾಕಾರದ ಆವರಣದ ಈ ಕಟ್ಟಡ ನಿರಾಭರಣ ಸುಂದರ ಪಾರಂಪರಿಕ ಪ್ರತೀಕ. ಮದ್ರಾಸ್ ತಾರಸಿಯ ಮೂರು ಅಂತಸ್ತುಗಳ ಈ ಕಟ್ಟಡಕ್ಕೆ ಕಮಾನಿನ ದ್ವಾರ ಸ್ವಾಗತಿಸುತ್ತದೆ. ಈ ಬಾರಿಯ ದಸರಾ ದೀಪಾಲಂಕಾರದಲ್ಲಿ ಈ ಶಾಲೆಗೆ ದೀಪಾಲಂಕಾರ ವ್ಯವಸ್ಥೆ ಮಾಡುವುದರ ಮೂಲಕ ಈ ಶಾಲೆಯ ಅಂದವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಈ ಶಾಲೆಯ ಲಕ್ಷಾಂತರ ಹಳೆಯ ವಿದ್ಯಾರ್ಥಿಗಳ ಮನವಿ.

–ಅಹಲ್ಯ ಸಿ. ನಾ.ಚಂದ್ರೇಗೌಡ, ಜನತಾ ನಗರ, ಮೈಸೂರು


■ ಪ್ಲಾಸ್ಟಿಕ್ ಧ್ವಜ ನಿಷೇಧ ನಿಯಮ ಕಟ್ಟುನಿಟ್ಟಾಗಿರಲಿ

ಮಾನ್ಯರೆ,

ಆಗಸ್ಟ್ 15 ರಂದು ದೇಶಾದ್ಯಂತ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ದೆಹಲಿಯ ಕೆಂಪುಕೋಟೆಯು ಸೇರಿದಂತೆ ದೇಶಾದ್ಯಂತ ಶಾಲಾ–ಕಾಲೇಜುಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಹಾಗೂ ಮನೆ, ಮನಗಳಲ್ಲಿ ರಾಷ್ಟ್ರಧ್ವಜವನ್ನು ದೇಶದ ಹೆಮ್ಮೆಯ ಪ್ರತೀಕವಾಗಿ ಬಳಕೆ ಮಾಡಲಾಗುತ್ತದೆ. ಆದರೆ ಧ್ವಜವನ್ನು ಬಟ್ಟೆಗಳ ಹೊರತು, ಪ್ಲಾಸ್ಟಿಕ್ ಧ್ವಜವನ್ನು ಬಳಕೆ ಮಾಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಎಂಬುದಾಗಿ ರಾಜ್ಯಸರ್ಕಾರ ಪ್ರತಿವರ್ಷ ಎಚ್ಚರಿಸುತ್ತಾ ಬಂದರೂ, ಪ್ಲಾಸ್ಟಿಕ್ ಧ್ವಜದ ಬಳಕೆಯು ನಿಯಂತ್ರಣಕ್ಕೆ ಬಂದಿರುವುದಿಲ್ಲ.

ರಾಷ್ಟ್ರಧ್ವಜವು ದೇಶದ ಜನರ ಭರವಸೆ ಮತ್ತು ಆಶಯ ಪ್ರತಿನಿಧಿಸುವಂಥದ್ದು. ಹಾಗಾಗಿ ಅದನ್ನು ಗೌರವಿಸಬೇಕಾದ್ದು ಮುಖ್ಯ. ಅನೇಕ ಸಂದರ್ಭಗಳಲ್ಲಿ ಬಟ್ಟೆಗಳಿಂದ ತಯಾರಾದ ಧ್ವಜಗಳನ್ನು ಬಳಸುವ ಬದಲು, ಪ್ಲಾಸ್ಟಿಕ್ ಧ್ವಜಗಳು ಇಂದಿಗೂ ಬಳಕೆಯಾಗುತ್ತಿರುವುದು ವಿಪರ್ಯಾಸ. ಈ ಪ್ಲಾಸ್ಟಿಕ್ ಧ್ವಜಗಳು ಸ್ಥಳೀಯ ಅಂಗಡಿಗಳಲ್ಲಿ ದೊರೆಯುವುದರಿಂದ ಕೆಲ ಮಕ್ಕಳು ಹಾಗೂ ಪೋಷಕರು ಸೇರಿದಂತೆ ಹಲವರು ಅವುಗಳನ್ನು ಕೊಂಡು, ಧ್ವಜ ಬಳಕೆ ನಂತರ ಅವುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಧ್ವಜದ ಪಾವಿತ್ರ್ಯತೆ ಹಾಳಾಗುತ್ತದೆ. ಇದು ತಪ್ಪು. ಈ ರೀತಿ ಮಾಡುವುದರಿಂದ ಧ್ವಜದ ಘನತೆಯನ್ನು ಅಗೌರವಿಸಿದಂತಾಗುತ್ತದೆ. ಹೀಗಾಗಿ ಪ್ರಮುಖ ರಾಷ್ಟ್ರೀಯ, ಸಂಘ–ಸಂಸ್ಥೆ ಹಾಗೂ ಸ್ಥಳೀಯ ಕಾರ್ಯಕ್ರಮಗಳಲ್ಲಿ ಬಟ್ಟೆಯ ಧ್ವಜವನ್ನೇ ಬಳಸಬೇಕೇ ವಿನಃ ಪ್ಲಾಸ್ಟಿಕ್ ಧ್ವಜ ಬಳಸಬಾರದು ಎಂಬ ತಿಳುವಳಿಕೆಯನ್ನು ಪುಟ್ಟ ಪುಟ್ಟ ಮಕ್ಕಳೂ ಸೇರಿದಂತೆ ಎಲ್ಲರಿಗೂ ಮನದಟ್ಟು ಮಾಡಿಸುವುದರ ಜೊತೆಗೆ ಈಗಾಗಲೇ ಪ್ಲಾಸ್ಟಿಕ್ ಧ್ವಜ ಮಾರಾಟ ನಿಷೇಧವಾಗಿ ರುವ ಹಿನ್ನೆಲೆಯಲ್ಲಿ ಅವುಗಳನ್ನು ಮಾರಾಟ ಮಾಡುವ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಅವಶ್ಯಕ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



■ ಸ್ವಾತಂತ್ರ್ಯರು ನಾವುಗಳು

ನಾವು ಭಾರತೀಯರು ಸ್ವಾತಂತ್ರ್ಯರು, ಸರ್ವಸ್ವಾತಂತ್ರ್ಯರು,
ಕೆಲವರಿಗಿಲ್ಲ ಯಾವುದೇ ಲಂಗು ಲಗಾಮು, ಇರಬಹುದು
ಹೆಂಗೆಬೇಕಾದರೂ ಯಾರ ಹಂಗಿಲ್ಲದೆ ನಮ್ಮ ನಾಡಲ್ಲಿ,
ಹರಿಯ ಬಿಡುವರು ಉದ್ದುದ್ದ ನಿಯತ್ತಿಲ್ಲದ ನಾಲಿಗೆಯನ್ನು
ಬಿಡಲು ಅವರಿಗಿರುವ ವಾಕ್‌ಸ್ವಾತಂತ್ರ್ಯದ ಹಕ್ಕಲ್ಲವೇ ಅದು?,
ಮೃಷ್ಟಾನ್ನದಂತೆ ತಿನ್ನುತ್ತಾರೆ ಭ್ರಷ್ಟಾಚಾರದ ಹಳಸಿದ ಅನ್ನವನ್ನು.
ಸ್ವಾತಂತ್ರ್ಯ ಭಾರತದಲ್ಲಿ ಪ್ರಜೆಗಳೇ ಪ್ರಜಾಪ್ರಭುತ್ವದ ದೊರೆಗಳು,
ಎಲ್ಲವೂ ಇದೆ, ಹೇಗೆ ಬೇಕಾದರೂ ಆಡುವ ಅಧಿಕಾರ ಇವರಿಗಿದೆ
ಆಚಾರವಿಚಾರಗಳಿಲ್ಲದೆ ಮಾಡುತ್ತಾರೆ ಅನಾಚಾರ, ಭ್ರಷ್ಟಾಚಾರ,
ವ್ಯಭಿಚಾರಗಳನ್ನು, ಇವರಿಗೆ ಇದೆಲ್ಲವೂ ಸ್ವಾತಂತ್ರ್ಯ ಕೊಟ್ಟ ಹಕ್ಕು,
ಸ್ವಾತಂತ್ರ್ಯದ ದುರುಪಯೋಗ ಎನ್ನುವುದಕ್ಕೆ ಸಾಕಲ್ಲವೇ ಇಷ್ಟು?!.
ಇದರಾಚೆ ನಿಂತು ಸ್ವಾತಂತ್ರ್ಯಕ್ಕಾಗಿ ಜೀವತೆತ್ತವರನ್ನು ಸ್ಮರಿಸಿ ಪ್ರತಿಜ್ಞೆ
ಮಾಡಿರಯ್ಯ, ಸತ್ಪ್ರಜೆಯಾಗಿ ಶಾಂತಿ ಸ್ಥಾಪಿಸಿ ಸುಭದ್ರ ದೇಶ ಕಟ್ಟಲು,!.


–ಮಿರ್ಲೆ ಚಂದ್ರಶೇಖರ, ಮೈಸೂರು.

ಮಂಥನ





ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಭಾರತದ ಸ್ವಾತಂತ್ರ್ಯ ಸಂಭ್ರಮಕ್ಕೆ ಚಿತ್ರ–ಸಾಹಿತ್ಯ–ಗೀತೆಗಳ ತೋರಣ



ಡಾ.ಸೂರ್ಯನಾಥ ಕಾಮತ್







ನಾಳೆಯೇ ಆಗಸ್ಟ್ 15! 79ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು ನಿಮ್ಮೆಲ್ಲರಿಗೂ. ಎಲ್ಲೆಡೆ ತ್ರಿವರ್ಣ ಧ್ವಜದ ಹಾರಾಟ, ದೇಶಭಕ್ತಿ ಗೀತೆಗಳ ಕಲರವ ಪ್ರಾರಂಭವಾಗಿಬಿಟ್ಟಿದೆ. ಸಂಭ್ರಮದ ವಾತಾವರಣ ಅದಾಗಲೇ ಗರಿಗೆದರಿದೆ. ಶಾಲೆಗಳಲ್ಲಿ ಧ್ವಜಾರೋಹಣದ ಧ್ವಜವಂದನೆಗಳ ತಾಲೀಮು ಕೊನೆಯ ಹಂತದಲ್ಲಿರುತ್ತದೆ. ಶಾಲೆಗಳ ಆವರಣಗಳ ಅಲಂಕಾರವೂ ಭರದಿಂದ ಸಾಗುತ್ತಿರುತ್ತದೆ. ಮಕ್ಕಳು ನೃತ್ಯಗಳು, ದೇಶಭಕ್ತಿ ಗೀತೆಗಳ ಅಭ್ಯಾಸದ ಅಂತಿಮ ಘಟ್ಟದಲ್ಲಿರುತ್ತಾರೆ.

ನಾವು ಶಾಲೆಗೆ ಹೋಗುವಾಗ ಧ್ವಜಾರೋಹಣದ ನಂತರ ಪ್ರಭಾತ್ ಪೇರಿ ಮಾಡುತ್ತಿದ್ದೆವು. 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಮಕ್ಕಳು ಸಾಲು ಸಾಲಾಗಿ ಇಡೀ ಗ್ರಾಮದ ಪ್ರದಕ್ಷಿಣೆ ಮಾಡುತ್ತಿದ್ದೆವು.

ಉಘೇ ಉಘೇ
ಉಘೇ ವೀರಭೂಮಿಗೆ
ಎತ್ತರೆತ್ತರೆತ್ತರಕ್ಕೆ ಹಾರಲೆಮ್ಮ ಬಾವುಟ
ಉತ್ತರುತ್ತರುತ್ತರಕ್ಕೆ ಮೆರೆಯಲೆಮ್ಮ ಭೂಪಟ

ಹಾಡಿನಿಂದ ಪ್ರಾರಂಭವಾದರೆ, ಸುಮಾರು 10–15 ದೇಶಭಕ್ತಿಗೀತೆಗಳನ್ನು ಗುಂಪಿನಲ್ಲಿ ಅತ್ಯುಚ್ಚ ಕಂಠದಲ್ಲಿ ಅತ್ಯುತ್ಸಾಹದಿಂದ ಹಾಡಿಕೊಂಡು ನಮ್ಮ ಮೆರವಣಿಗೆ ಸಾಗುತ್ತಿತ್ತು. ನಮ್ಮ ಅಭ್ಯಾಸ ವಾರಕ್ಕೆ ಮೊದಲೇ ಪ್ರಾರಂಭವಾಗುತ್ತಿತ್ತು. ಆದರೆ ಈಗ ಪ್ರಭಾತ್ ಪೇರಿ ಹೋಗುವ ಅಭ್ಯಾಸ ಇಲ್ಲವಾಗಿದೆಯೆನೋ...

ಧ್ವಜಾರೋಹಣ ಮುಗಿಸಿಕೊಂಡು ಮನೆಗೆ ಬಂದು, ಉಳಿದ ಅರ್ಧ ದಿನದ ರಜೆಯನ್ನು ಕಳೆಯುವುದು ನಮಗೆ ಸ್ವರ್ಗಸಮಾನ ಆನಂದವನ್ನೀಯುತ್ತಿದ್ದಂತಹ ಸಮಯ. 10.30ರ ವೇಳೆಗೆಲ್ಲಾ ಮನೆಯಲ್ಲಿರುತ್ತಿದ್ದ ನಾವು ಸ್ವಲ್ಪ ಆಟವಾಡಿ ನಂತರ ಟಿವಿ ನೋಡಲು ಓಡುತ್ತಿದ್ದೆವು. ದೂರದರ್ಶನವೇ ಹೆಚ್ಚು ಪ್ರಚಲಿತವಿದ್ದ ಆ ಕಾಲದಲ್ಲಿ, 11ರ ಸುಮಾರಿಗೆ ಯಾವುದಾದರೂ ದೇಶಭಕ್ತಿಯನ್ನು ಬಿಂಬಿಸುವ ಚಲನಚಿತ್ರವನ್ನು ಪ್ರಸಾರ ಮಾಡುತ್ತಿದ್ದರು. ಚಲನಚಿತ್ರದ ನಂತರ ಆ ಇಡೀ ದಿನ ದೇಶಭಕ್ತಿ ಗೀತೆಗಳ ಸುರಿಮಳೆಯೇ ಆಗುತ್ತಿತ್ತು. ಮಕ್ಕಳಮೇಳದ ಸ್ಪರ್ಧೆಗಳಲ್ಲಿ ಮತ್ತೆ ಅಂತರಶಾಲಾ ಸ್ಪರ್ಧೆಗಳಲ್ಲಿ ಹೀಗೆ ವರ್ಷದುದ್ದಕ್ಕೂ ನಡೆಯುವ ಇತರ ಸ್ಪರ್ಧೆಗಳಲ್ಲಿ ಹಾಡಲು ಬೇಕಾಗುತ್ತದೆಂದು ಆ ಎಲ್ಲಾ ಹಾಡುಗಳನ್ನು ರೆಕಾರ್ಡ್ ಮಾಡಿ ಇಟ್ಟುಕೊಳ್ಳುತ್ತಿದ್ದೆವು.

ಇಂಟರ್ನೆಟ್ ಇರದ ಆ ಸಮಯದಲ್ಲಿ ಹಾಡುಗಳ ಸಂಗ್ರಹಕ್ಕೆ ನಾವು ಪಡುತ್ತಿದ್ದ ಪಾಡು ಹೇಳತೀರದು!

ಮತ್ತೆ ವಿಷಯಕ್ಕೆ ಬರೋಣ!

ಸ್ವಾತಂತ್ರ್ಯೋತ್ಸವ ಬಂದರೆ ಎಲ್ಲೆಡೆ ದೇಶಭಕ್ತಿಗೀತೆಗಳು ಮೊಳಗುತ್ತವೆ, ರೇಡಿಯೋದಿಂದ ಹಿಡಿದು ವಿವಿಧ ಅಸಂಖ್ಯ ವಾಹಿನಿಗಳು ಸ್ವಾತಂತ್ರ್ಯ ಸಂಗ್ರಾಮದ ಕತೆಯುಳ್ಳ ದೇಶಭಕ್ತಿಯ ವಿಷಯಾಧಾರಿತ ಸಿನಿಮಾಗಳನ್ನೇ ಪ್ರಸಾರ ಮಾಡುತ್ತವೆ.

ಅತ್ಯಂತ ಪ್ರಬಲ ಮಾಧ್ಯಮಗಳೆನಿಸಿಕೊಂಡ ಸಾಹಿತ್ಯ, ಸಿನಿಮಾ ಮತ್ತು ಧಾರಾವಾಹಿಗಳು ಸ್ವಾತಂತ್ರ್ಯ ಸಂಗ್ರಾಮದ ಅವಿಸ್ಮರಣೀಯಗಾಥೆಯ ಹಲವು ಉತ್ತಮ ಕೃತಿಗಳನ್ನು ನೀಡಿವೆ. ತನ್ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ನಮ್ಮ ಅಪ್ರತಿಮ ದೇಶಭಕ್ತರು ನಡೆಸಿದ ಹೋರಾಟವನ್ನು ಜನಸಾಮಾನ್ಯರಿಗೂ ತಿಳಿಸಿಕೊಟ್ಟು ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ನಮ್ಮ ಹಿರಿಯರು ಅದೆಷ್ಟು ತ್ಯಾಗ ಮಾಡಿದ್ದಾರೆ, ಪ್ರಾಣಭಯ ತೊರೆದು ಸ್ವಾತಂತ್ರ್ಯ ಲಕ್ಷ್ಮಿಯನ್ನು ನಮ್ಮ ಭಾರತದಲ್ಲಿ ಸ್ಥಾಪಿಸಿದ್ದಾರೆ ಎಂಬ ವಾಸ್ತವದ ಅರಿವನ್ನು ಮೂಡಿಸಲು ಯತ್ನಿಸಿದ್ದಾವೆ ಎಂಬುದು ಪ್ರಶಂಸನೀಯ.

ನಾಳೆ ನಾವು ಆಚರಿಸಲಿರುವುದು 79ನೇ ಸ್ವಾತಂತ್ರ್ಯೋತ್ಸವ. ಅಂದಿನ ಆ ಸಂಗ್ರಾಮದಲ್ಲಿ ಪಾಲ್ಗೊಂಡ ಹಲವರು ಇಂದು ನಮ್ಮೊಡನಿಲ್ಲ. ಅವರ ಬಲಿದಾನಗಳನ್ನು ನಾವು ತಿಳಿದುಕೊಳ್ಳಬೇಕೆಂದರೆ ಇವೇ ಮಾಧ್ಯಮಗಳ ಮೊರೆ ಹೋಗಬೇಕು.

ಅನೇಕ ಸಾಹಿತಿಗಳು ಸ್ವಾತಂತ್ರ್ಯ ಸಂಗ್ರಾಮವನ್ನೇ ತೆಗೆದುಕೊಂಡು ಹಲವು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕಾಲ್ಪನಿಕ ಕಾದಂಬರಿಗಳೂ ಇದ್ದಾವೆ, ನೈಜ ಪಾತ್ರಗಳ ಕುರಿತ ಸತ್ಯಕಥೆಯಾಧಾರಿತ ಕೃತಿಗಳಿವೆ. ಸಂಗ್ರಾಮದ ಹಲವು ಮಜಲುಗಳನ್ನು ದಾಖಲಿಸಿರುವ ಸಂಶೋಧನಾತ್ಮಕ ಗ್ರಂಥಗಳಿದ್ದಾವೆ.

ನಮ್ಮ ಕನ್ನಡದಲ್ಲಿಯೇ ತೆಗೆದುಕೊಂಡರೆ, ಮೊದಲಿಗೆ ನಮಗೆ ನೆನಪಾಗಲೇಬೇಕಾದ ಕೃತಿ, ಡಾ.ಸೂರ್ಯನಾಥ ಕಾಮತ್‌ರ ಬೃಹತ್ ಕೃತಿ, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು'. 'ವಿಧುರಾಶ್ವತ್ಥ', 'ಈಸೂರು', 'ಶಿವಪುರ', 'ಹಲಗಲಿ', 'ಸುರಪುರ', 'ಮುಂಡರಗಿ', 'ಬಾದಾಮಿ'ಗಳಲ್ಲಿ ಮಾತ್ರವಲ್ಲದೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿತ್ತು ಅತೀ ಸಾಮಾನ್ಯ ಮನುಷ್ಯರಿಂದ ಹಿಡಿದು ಹೆಂಗಸರು–ಮಕ್ಕಳು ಕೆಚ್ಚೆದೆಯಿಂದ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಇವರ ಹೆಸರುಗಳನ್ನು ದಾಖಲಿಸುವ ಮೂಲಕ ಇವರನ್ನು ಅಮರರಾಗಿಸುವುದೇ, ಅವರ ನಿಸ್ವಾರ್ಥ ತ್ಯಾಗ ಬಲಿದಾನಗಳಿಗೆ ನಾವು ಸಲ್ಲಿಸುವ ಗೌರವ. ಇದನ್ನು ಮನಗೊಂಡ ಕಾಮತರು, 12 ನವೆಂಬರ್ 1972ರಲ್ಲಿ ಸ್ವಾತಂತ್ರ್ಯ ವೀರರ ಹೆಸರುಗಳ ಸಂಗ್ರಹಕ್ಕೆ ತೊಡಗುತ್ತಾರೆ. ಒಂದೇ ವರ್ಷದಲ್ಲಿ ಮೊದಲನೆಯ ಸಂಪುಟ ಹೊರಬರುತ್ತದೆ. ನಂತರದ ವರ್ಷಗಳಲ್ಲಿ ಉಳಿದೆರಡು ಸಂಪುಟಗಳೂ ಪೂರ್ಣವಾಗಿ ಕರ್ನಾಟಕದ ಜನತೆಗೆ ಅರ್ಪಿತವಾಗುತ್ತದೆ. 3 ಸಂಪುಟಗಳಲ್ಲಿ, ಒಟ್ಟು 3200 ಪುಟಗಳಲ್ಲಿ, 800 ಸ್ವಾತಂತ್ರ್ಯ ಹೋರಾಟಗಾರರ ಪರಿಚಯವನ್ನು ಡಾ.ಸೂರ್ಯ ನಾಥ ಕಾಮತರು ಮಾಡಿಕೊಡುತ್ತಾರೆ. ಕರ್ನಾಟಕದ ಹೋರಾಟಗಾರರ ಕುರಿತ ಅಧಿಕೃತ ದಾಖಲೆಯಾಗಿರುವ ಈ ಸಂಪುಟಗಳನ್ನು ನೀಡಿದ ಕಾಮತರು ಪ್ರಾತಃಸ್ಮರಣೀಯರೇ ಸರಿ.

> 66 ಅತ್ಯಂತ ಪ್ರಬಲ ಮಾಧ್ಯಮಗಳೆನಿಸಿಕೊಂಡ ಸಾಹಿತ್ಯ, ಸಿನಿಮಾ ಮತ್ತು ಧಾರಾವಾಹಿಗಳು ಸ್ವಾತಂತ್ರ್ಯ ಸಂಗ್ರಾಮದ ಅವಿಸ್ಮರಣೀಯಗಾಥೆಯ ಹಲವು ಉತ್ತಮ ಕೃತಿಗಳನ್ನು ನೀಡಿವೆ. ತನ್ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ನಮ್ಮ ಅಪ್ರತಿಮ ದೇಶಭಕ್ತರು ನಡೆಸಿದ ಹೋರಾಟವನ್ನು ಜನಸಾಮಾನ್ಯರಿಗೂ ತಿಳಿಸಿಕೊಟ್ಟು ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ನಮ್ಮ ಹಿರಿಯರು ಅದೆಷ್ಟು ತ್ಯಾಗ ಮಾಡಿದ್ದಾರೆ. ಪ್ರಾಣ ಭಯ ತೊರೆದು ಸ್ವಾತಂತ್ರ್ಯ ಲಕ್ಷ್ಮಿಯನ್ನು ನಮ್ಮ ಭಾರತದಲ್ಲಿ ಸ್ಥಾಪಿಸಿದ್ದಾರೆ ಎಂಬ ವಾಸ್ತವದ ಅರಿವನ್ನು ಮೂಡಿಸಲು ಯತ್ನಿಸಿದ್ದಾವೆ ಎಂಬುದು ಪ್ರಶಂಸನೀಯ.

ನಿರಂಜನರ ಚಿರಸ್ಮರಣೆ ಕೇರಳದ ಕಯ್ಯೂರಿನಲ್ಲಿ ರೈತರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟದ ಆಮೂಲಾಗ್ರ ಪರಿಚಯ ಮಾಡಿಕೊಡುತ್ತದೆ. ಚಂದ್ರಶೇಖರ ಆಜ಼ಾದರ ಕುರಿತ ಬಾಬು ಕೃಷ್ಣಮೂರ್ತಿ ಅವರ ಅಜೇಯ ಅಮೂಲ್ಯ ಕೃತಿ. ಗಜಾನನ ಶರ್ಮರ ಚನ್ನಭೈರಾದೇವಿ ಕಾಳುಮೆಣಸಿನರಾಣಿ ಎಂದೇ ಪ್ರಖ್ಯಾತಳಾಗಿದ್ದ ಗೇರುಸೊಪ್ಪೆಯ ರಾಣಿಯ ಜೀವನ ಚರಿತ್ರೆ ಉಲ್ಲಾಳದ ಅಬ್ಬಕ್ಕ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣರ ಬಗೆಗೂ ಹಲವು ಕತೆ ಕಾದಂಬರಿಗಳು ಬರೆಯಲ್ಪಟ್ಟಿದ್ದಾವೆ. ದುರ್ಗದ ಇತಿಹಾಸದ ಬಗ್ಗೆ ಹಲವು ಕಾದಂಬರಿಗಳನ್ನು ರಚಿಸಿರುವ ಐತಿಹಾಸಿಕ ಕಾದಂಬರಿಕಾರರಾದ ಬಿ.ಎಲ್.ವೇಣು ಅವರು, 1857ರ ಪ್ರಥಮ ಹೋರಾಟದ ಮುಂಚೆಯೇ ಚಿತ್ರದುರ್ಗದಲ್ಲಿ ಬೇಡರು ಬ್ರಿಟಿಷರ ವಿರುದ್ಧ 1848ರಲ್ಲಿಯೇ ನಡೆಸಿದ್ದ ಹೋರಾಟದ ಬಗ್ಗೆ ದುರ್ಗದ ಬೇಡರ ದಂಗೆ ಎಂಬ ವಿಶಿಷ್ಟ ಪುಸ್ತಕ ರಚಿಸಿದ್ದಾರೆ.

ಇದಲ್ಲದೆ, ಕನ್ನಡದ ಹಲವು ಸಾಹಿತಿಗಳು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನಿಟ್ಟುಕೊಂಡು ಕತೆಗಳನ್ನು ರಚಿಸಿದ್ದಾರೆ, ದೇಶಪ್ರೇಮ ಸ್ಫುರಿಸುವ ಗೀತೆಗಳನ್ನು ರಚಿಸಿದ್ದಾರೆ. ಎಚ್.ವಿ.ಸಾವಿತ್ರಮ್ಮ ತಮ್ಮ ಹಲವು ಕತೆಗಳಲ್ಲಿ ಈ ಪ್ರಯೋಗ ನಡೆಸಿದ್ದಾರೆ.

ಬೇಂದ್ರೆ, ಕೆಎಸ್‌ನ, ಕುವೆಂಪು, ಜಿಎಸ್‌ಎಸ್, ಎಚ್‌ಎಸ್‌ವಿ, ಅಡಿಗರು, ಎನ್‌ಎಸ್‌ಎಲ್, ಕಣವಿ ಇವರುಗಳೆಲ್ಲ ರಚಿಸಿರುವ ದೇಶಭಕ್ತಿ ಗೀತೆಗಳನ್ನು ಒಮ್ಮೆ ನೆನಪಿಸಿಕೊಳ್ಳಿ...

ಇನ್ನು ಚಲನಚಿತ್ರಗಳ ವಿಷಯಕ್ಕೆ ಬಂದರೆ, ಕನ್ನಡದಲ್ಲಿ ಪಕ್ಕದ ತಮಿಳು, ತೆಲುಗು ಮಲಯಾಳೀ ಭಾಷೆಗಳಿಗೆ ಹೋಲಿಸಿದರೆ ಸ್ವಾತಂತ್ರ್ಯ ಸಂಗ್ರಾಮದ ಮೇಲೆ ಅತೀ ಕಡಿಮೆ ಅಥವಾ ಬೆರಳೆಣಿಕೆಯಷ್ಟು ಚಿತ್ರಗಳು ಮಾತ್ರ ಬಂದಿವೆ.

ನಮಗೆ ಥಟ್ಟನೆ ನೆನಪಾಗುವುದು, 1961ರಲ್ಲಿ ಬಿ.ಆರ್.ಪಂತುಲು ಅವರು ನಿರ್ಮಿಸಿದ ಕಿತ್ತೂರು ರಾಣಿ ಚೆನ್ನಮ್ಮ ಚಿತ್ರ. ಇಂದಿಗೂ ಕನ್ನಡಿಗರಿಗೆ ಕಿತ್ತೂರು ರಾಣಿ ಎಂದರೆ, ಬಿ ಸರೋಜಾದೇವಿ ಅವರೇ ನೆನಪಾಗುವುದು. ಅಷ್ಟು ಜೀವತುಂಬಿ ನಟಿಸಿದ್ದರಾಕೆ. ಕಳೆದ ದಶಕದಲ್ಲಿ ಕಿತ್ತೂರು ರಾಣಿಯ ಬಂಟ ಸಂಗೊಳ್ಳಿ ರಾಯಣ್ಣನ ಕುರಿತ ಚಿತ್ರ ಬಂದಿತ್ತು. ಅದರಲ್ಲಿ ಕಿತ್ತೂರು ರಾಣಿಯ ಪಾತ್ರವನ್ನು ಜಯಪ್ರದಾ ಅವರು ನಿರ್ವಹಿಸಿದ್ದು ಕನ್ನಡಿಗರಿಗೆ ನುಂಗಲಾರದ ತುತ್ತೆನಿಸಿತ್ತು.

ಕೆಎಸ್‌ನ ಅವರ ಕವನಗಳನ್ನು ಇಟ್ಟುಕೊಂಡು, ಅದರ ಸುತ್ತ ಸ್ವಾತಂತ್ರ್ಯ ಹೋರಾಟದ ಕತೆ ಹೆಣೆದು ಒಂದು ಸುಂದರ ಉತ್ತಮ ಚಿತ್ರ ನಿರ್ದೇಶಿಸಿದ ಕೀರ್ತಿ ನಾಗಾಭರಣರಿಗೆ ಸಲ್ಲಬೇಕು. ಹೌದು, ಮೈಸೂರು ಮಲ್ಲಿಗೆ! ರಾಷ್ಟ್ರಪ್ರಶಸ್ತಿ ಪಡೆದ ಈ ಚಿತ್ರ ಕನ್ನಡದಲ್ಲಿ ಬಂದ ಸ್ವಾತಂತ್ರ್ಯ ಹೋರಾಟದ ಹಂದರವುಳ್ಳ ಅತ್ಯುತ್ತಮ ಚಿತ್ರ.

ಹಾಗೆ ನೋಡಿದರೆ, ದೂರದರ್ಶನದಲ್ಲಿ ಸಾಕಷ್ಟು ಸ್ವಾತಂತ್ರ್ಯ ಹೋರಾಟ ಆಧಾರಿತ ಸರಣಿಗಳು ಪ್ರಸಾರಗೊಂಡಿವೆ. ಸುವರ್ಣ ಸ್ವಾತಂತ್ರ್ಯ ಸಂಭ್ರಮದ ಸಮಯದಲ್ಲಿ, ಸಾಕಷ್ಟು ಹೋರಾಟಗಾರರ ಕಥನಗಳು ಚಿತ್ರಿತವಾಗಿದ್ದವು. ಅಬ್ಬಕ್ಕ, ಚೆನ್ನಮ್ಮರ ಹೋರಾಟದೊಂದಿಗೆ, ಈಸೂರು, ಶಿವಪುರದ ಧ್ವಜ ಸತ್ಯಾಗ್ರಹ, ಸುರಪುರ–ಮುಂಡರಗಿಗಳ ಹೋರಾಟ, ವಿಧುರಾಶ್ವತ್ಥದ ದುರಂತವನ್ನೊಳಗೊಂಡಂತೆ ಸಾಕಷ್ಟು ಹೋರಾಟದ ಕತೆಗಳ ಸರಣಿ ಮೂಡಿಬಂದಿತ್ತು. ನಿರಂಜನರ 'ಚಿರಸ್ಮರಣೆ'ಯನ್ನು ಸಿಹಿಕಹಿ ಚಂದ್ರು ತೆರೆಗೆ ತಂದಿದ್ದರು. ಅಮೃತ ಸ್ವಾತಂತ್ರ್ಯ ಮಹೋತ್ಸವದ ಸಮಯದಲ್ಲಿಯೂ ಮತ್ತಷ್ಟು ಸರಣಿಗಳು ಪ್ರಸಾರಗೊಂಡವು.

ರೇಡಿಯೋ ಅದರಲ್ಲೂ ಆಕಾಶವಾಣಿಯಲ್ಲಿ ಅಮೃತ ಸ್ವಾತಂತ್ರ್ಯ ಸಂಭ್ರಮದ ಸಮಯದಲ್ಲಿ ಪ್ರತಿ ರಾಜ್ಯದ ಹೋರಾಟಗಾರರ ಬಗ್ಗೆ ಸ್ವರಾಜ್ ಸರಣಿ ಮೂಡಿಬಂತು. ಈಗಲೂ ಭಾನುವಾರ ಬೆಳಗ್ಗೆ ಮಕ್ಕಳಿಗಾಗಿಯೇ, ಒಂದು ಸರಣಿ ಮೂಡಿಬರುತ್ತಿದೆ. ರೇಡಿಯೋ ಈ ವಿಷಯದಲ್ಲಿ ಎಂದಿಗೂ ಹಿಂದೆ ಬಿದ್ದಿಲ್ಲ.

ಇನ್ನು ನಾವು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನೋಡಿದರೆ, ಅಸಂಖ್ಯ ಎನ್ನಬಹುದಾದಷ್ಟು ಚಲನಚಿತ್ರಗಳು, ಧಾರಾವಾಹಿಗಳು, ಕೃತಿಗಳು ಬಂದಿವೆ. ಎಲ್ಲವನ್ನೂ ಈ ಲೇಖನದಲ್ಲಿ ಹೇಳುವುದು ಅಸಾಧ್ಯ. ಪ್ರಮುಖವಾದ ಒಂದಷ್ಟನ್ನು ಇಲ್ಲಿ ನೆನಪಿಸಬಹುದಷ್ಟೇ.

ನಯಾ ಸನ್ಸಾರ್, 1941ರಲ್ಲಿ ಬಂದ ಈ ಚಿತ್ರದಲ್ಲಿ

ಎಕ್ ನಯಾ ಸನ್ಸಾರ್ ಬಸಾ ಲೇ
ಎಕ್ ಏಸಾ ಸನ್ಸಾರ್
ಕೆ ಜಿಸ್ಮೇ ಧರ್ತಿ ಹೋ ಆಜ಼ಾದ್
ಜಿಸ್ಮೇ ಜೀವನ್ ಹೋ ಆಜ಼ಾದ್
ಜಿಸ್ಮೇ ಭಾರತ್ ಹೋ ಆಜ಼ಾದ್

ಎಂಬ, ಸ್ವತಂತ್ರ ಭಾರತದ ಆಶಯ ಹೊತ್ತ ಹಾಡು ಇತ್ತು! ಬ್ರಿಟಿಷ್ ಇಂಡಿಯಾದಲ್ಲಿ ತೆರೆಕಂಡ ಚಿತ್ರವದು!

ನೆಹರೂ ಅವರ ಕಣ್ಣಲ್ಲಿ ನೀರು ತರಿಸಿದ್ದ,

ಏ ಮೇರೆ ವತನ್ ಏ ಲೋಗೋ? ಎಂಬ ಅಪ್ಪಟ ದೇಶಭಕ್ತಿಯ ಗೀತೆಯನ್ನು ರಚಿಸಿದ್ದ ರಾಷ್ಟ್ರಕವಿ ಪ್ರದೀಪ್ ರೇ ಈ ಗೀತೆಯ ರಚನಾಕಾರರು! ನಂತರ, 1943ರಲ್ಲಿ ತೆರೆ ಕಂಡ ಅಶೋಕ್ ಕುಮಾರ್ ನಟನೆಯ ಕಿಸ್ಮತ್ ಚಿತ್ರದಲ್ಲಿ

ದೂರ್ ಹಟೋ ಎ ದುನಿಯಾವಾಲೋ
ಹಿಂದುಸ್ತಾನ್ ಹಮಾರಾ ಹೈ

ಎಂಬ ದೇಶಭಕ್ತಿಯ ಗೀತೆಯನ್ನು ಸೇರಿಸುವ ಧೈರ್ಯ ಮೆರೆದಿದ್ದ ನಿರ್ದೇಶಕ ಗ್ಯಾನ್ ಮುಖರ್ಜಿ ಅವರು ದೇಶಭಕ್ತಿ ಗೀತೆಗಳನ್ನು ಚಲನಚಿತ್ರಗಳಲ್ಲಿ ಸೇರಿಸುವ ಪರಿಪಾಠವನ್ನು ಮುಂದುವರೆಸಿದರು. ಅಲ್ಲಿಂದ ಈಗಿನ ಗದರ್ 2ವರೆಗೂ ಸಾಕಷ್ಟು ಚಲನಚಿತ್ರಗಳಲ್ಲಿ ಅತ್ಯಂತ ಸುಂದರವಾದ ದೇಶಭಕ್ತಿ ಗೀತೆಗಳು ಬಂದವು. ಇಂದಿಗೂ ಅವು ಚಲನಚಿತ್ರ ಗೀತೆ ಎನ್ನುವುದಕ್ಕಿಂತಾ ದೇಶಭಕ್ತಿ ಗೀತೆಗಳೆಂದೇ ಕರೆಸಿಕೊಳ್ಳುತ್ತವೆ. ನಿಮ್ಮೆಲ್ಲರಿಗೂ ಈಗಾಗಲೇ ಸಾಕಷ್ಟು ಹಾಡುಗಳು ತಲೆಗೆ ಬಂದಿರಬಹುದು ಅಲ್ಲವೇ?

ಇನ್ನು ಚಲನಚಿತ್ರಗಳಂತೂ ಲೆಕ್ಕವಿಲ್ಲದಷ್ಟು! ಸ್ವಾತಂತ್ರ್ಯ ಸಂಗ್ರಾಮವನ್ನು ಆಧರಿಸಿದ ಬಂಕಿಮಚಂದ್ರರ ಕಾದಂಬರಿ ಆಧಾರಿತ 'ಆನಂದಮಠ', ಭಗತ್ ಸಿಂಗ್ ಕುರಿತ 'ಶಹೀದ್', 'ಮಂಗಲ್ ಪಾಂಡೆ', 'ಬೋಸ್', 'ಸರ್ದಾರ್', 'ಗಾಂಧೀಜೀ' ಕುರಿತ ಅನೇಕ ಚಿತ್ರಗಳು, 'ಸರ್ದಾರ್ ಉಧಮ್ ಸಿಂಗ್', 1942 ಎ ಲವ್ ಸ್ಟೋರಿ, ರಂಗ್ ದೇ ಬಸಂತಿ, ಬ್ರಿಟಿಷರ ವಿರುದ್ಧದ ವಿಶಿಷ್ಟ ಹೋರಾಟದ ಲಗಾನ್ ಇನ್ನೂ ಹತ್ತು ಹಲವು.

ವಿದೇಶಿಯರೂ ಗಾಂಧಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಕುರಿತು ಸಿನಿಮಾ ನಿರ್ಮಿಸಿದ್ದಾರೆ.

ಡಿಸ್ಕವರಿ ಆಫ್ ಇಂಡಿಯಾ, ಮೌಲಾನಾ ಅಬುಲ್ ಕಲಾಮ್‌ರ India Wins Freedom, ಲ್ಯಾರಿ ಕಾಲಿನ್ಸ್ ಮತ್ತು ಲ್ಯಾಪಿಯರ್‌ರ Freedom at Midnight, ಖುಷ್ವಂತ್ ಸಿಂಗ್ ರ Train to Pakistan, ಬೋಸರ Indias Struggle for Freedom, ಸಾವರ್ಕರ್‌ರ Indian War of Independence ಅತೀ ಮುಖ್ಯ ಕೃತಿಗಳೆನ್ನಬಹುದು. ಕಾದಂಬರಿಗಳಂತೂ ಎಣಿಕೆಗೆ ಸಿಗದಷ್ಟು.

ಧಾರಾವಾಹಿಗಳೂ ಅಷ್ಟೇ ಅಪರಿಮಿತ ಸಂಖ್ಯೆಗಳಲ್ಲಿವೆ. Discovery of India, Swaraaj, Me Dilli Hoo, Kranthi ದೂರದರ್ಶನದಲ್ಲಿ ಪ್ರಸಾರವಾದ ಬಹುಮುಖ್ಯ ಸರಣಿಗಳು. ಇತ್ತೀಚೆಗೆ ಒಟಿಟಿಯೊಂದರಲ್ಲಿ ಪ್ರಸಾರವಾದ Freedom at Midnight ಸರಣಿ ಬಹಳ ಸದ್ದು ಮಾಡಿತ್ತು.

ಸ್ವಾತಂತ್ರ್ಯೋತ್ಸವದ ಈ ಸಂಭ್ರಮದ ಸಮಯದಲ್ಲಿಯಾದರೂ ನಾವು ಸ್ವಾತಂತ್ರ್ಯ ವೀರರನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಸಲ್ಲಿಸದಿದ್ದರೆ ನಮ್ಮಂತಹ ಕೃತಘ್ನರು ಮತ್ತೊಬ್ಬರಿರಲಾರರು. ಓದುವ ಹವ್ಯಾಸ, ಅಭ್ಯಾಸ ಕಡಿಮೆಯಾಗುತ್ತಿರುವ ಈ ಹೊತ್ತಿನಲ್ಲಿ, ಸುಲಭವಾಗಿ ಯೂಟ್ಯೂಬ್ ಮತ್ತು ಒಟಿಟಿಗಳಲ್ಲಿ ದೊರೆಯುವ ಸರಣಿಗಳು ಮತ್ತು ಚಲನಚಿತ್ರಗಳನ್ನು ಸಮಯವಾದಾಗ ನೋಡಿಯಾದರೂ, ಸ್ವಾತಂತ್ರ್ಯದ ಬೆಲೆ ನಾವು ಅರಿಯಬೇಕು ಎಂಬುದೇ ಈ ನೆನೆಕೆಯ ಉದ್ದೇಶ. ಸ್ವೇಚ್ಛೆ ಮೆರೆಯುತ್ತಾ ಸ್ವಾತಂತ್ರ್ಯದ ನಿಜ ಅರ್ಥವನ್ನು ಅಪಾರ್ಥ ಮಾಡಿಕೊಂಡಿರುವ ಯುವಜನತೆಗೆ ಸ್ವಾತಂತ್ರ್ಯ ವೀರರು ಅನುಭವಿಸಿದ ಕಷ್ಟ ಕಾರ್ಪಣ್ಯಗಳ ಅರಿವು ಮೂಡದಿದ್ದರೆ ಮುಂದಿನ ದಿನಗಳು ದುರ್ಭರವಾಗಲಿವೆ.

ಶ್ರೀ ವೀರೇಂದ್ರ ಹೆಗ್ಗಡೆ ಕುರಿತು ಅವಹೇಳನಕಾರಿ ಹೇಳಿಕೆಗೆ ಚಾರುಶ್ರೀ ಖಂಡನೆ

ಶ್ರವಣಬೆಳಗೊಳ, ಆ.13– ಕರುನಾಡು ಮಾತ್ರವಲ್ಲದೆ ಇದರಾಚೆಗೂ ಅಪಾರ ಭಕ್ತ ವೃಂದ ಹೊಂದಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಶ್ರೀ ವೀರೇಂದ್ರ ಹೆಗ್ಗಡೆ ಅವರ ಮೇಲಿನ ಅವಹೇಳನಕಾರಿ ಹೇಳಿಕೆಗಳನ್ನು ಸ್ಥಳೀಯ ದಿಗಂಬರ ಜೈನ ಮಹಾಸಂಸ್ಥಾನ ಮಠದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಅವರು ಬಲವಾಗಿ ಖಂಡಿಸಿದ್ದಾರೆ.


ಇದೇ ವೇಳೆ ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಶ್ರೀ ವೀರೇಂದ್ರ ಹೆಗ್ಗಡೆ ಅವರಿಗೆ ಜೈನಮಠದ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ.

ಧರ್ಮಸ್ಥಳ ಹೆಸರು ಕೇಳಿದಾಗಲೇ ನಮ್ಮ ಹೃದಯದಲ್ಲಿ ಧರ್ಮದ ಪರಿಮಳ, ದಾನದ ಪಾವಿತ್ರ್ಯ, ಸೇವೆಯ ಮಧುರ ಸ್ಮೃತಿಗಳು ಮೂಡುತ್ತವೆ. ಶತಮಾನಗಳಿಂದ ಎಲ್ಲರಿಗೂ ಮಾರ್ಗದರ್ಶಕವಾಗಿ. ನಿಜವಾದ ಮಾನವೀಯತೆಯ ತಾಣವಾಗಿ ಬೆಳಗಿ, ಜಾತಿ–ಧರ್ಮ–ಮತಗಳ ಭೇದವಿಲ್ಲದೆ ಚತುರ್ವಿಧ ದಾನ, ಸೇವಾ ಪರಂಪರೆ ನಡೆಸಿಕೊಂಡು ಬಂದಿದೆ.

ಎಲ್ಲಾ ವರ್ಗದ ಜನರಿಗೆ ಶ್ರದ್ಧಾ ಕೇಂದ್ರವಾಗಿದೆ. ಧರ್ಮಸ್ಥಳದಿಂದ ನಡೆಯುತ್ತಿರುವ ಮಹಿಳಾ ಸಬಲೀಕರಣ ಮತ್ತು ಧಾರ್ಮಿಕ ಸಹಿಷ್ಣುತೆಯು ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಗುಣಗಾನ ಮಾಡಿದ್ದಾರೆ.

ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ತಮ್ಮ ನಿರಂತರ ಪರಿಶ್ರಮ, ನಿಸ್ವಾರ್ಥ ಸೇವಾಭಾವ ಮತ್ತು ಧರ್ಮನಿಷ್ಠೆಯ ಮೂಲಕ ಸಮಾಜದಲ್ಲಿ ಅಳಿಸಲಾಗದ ಗುರುತು ಮೂಡಿಸಿದ್ದಾರೆ.

ಇಂತಹ ಪವಿತ್ರ ಕ್ಷೇತ್ರ ಹಾಗೂ ಪವಿತ್ರ ವ್ಯಕ್ತಿತ್ವದ ವಿರುದ್ಧ ತಪ್ಪು ಮತ್ತು ಅವಹೇಳನಕಾರಿ ಹೇಳಿಕೆಗಳು ಪ್ರಸಾರವಾಗುತ್ತಿರುವುದು



ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಪಟ್ಟಾಚಾರ್ಯವರ್ಯ ಸ್ವಾಮೀಜಿ

ಅತ್ಯಂತ ಖೇದಕರ ಮತ್ತು ಧರ್ಮ–ಸಂಸ್ಕೃತಿಗೆ ಅವಮಾನಕಾರಿಯಾಗಿದೆ. ಇಂತಹ ಹೇಳಿಕೆಗಳು ಸಮಾಜದಲ್ಲಿ ಭಿನ್ನಾಭಿಪ್ರಾಯ, ದ್ವೇಷ, ಅಸಮಾಧಾನ ಹುಟ್ಟಿಸುತ್ತವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇದು ಕೇವಲ ಹೆಗ್ಗಡೆಯವರ ಮೇಲೆ ಆಗುತ್ತಿರುವ ಅವಮಾನವಲ್ಲ, ನಮ್ಮ ಸಂಸ್ಕೃತಿ, ನಮ್ಮ ಧರ್ಮ, ನಮ್ಮ ಸೇವಾ ಪರಂಪರೆಯ ಮೇಲಿನ ಅವಮಾನವಾಗಿದೆ ಎಂದು ಎಲ್ಲಾ ಧರ್ಮಾಭಿಮಾನಿಗಳು ಅರಿಯಬೇಕಿದೆ ಎಂದು ಶ್ರೀಗಳು ಎಚ್ಚರಿದ್ದಾರೆ.

ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನ ಮಠವು, ಧರ್ಮಸ್ಥಳ ಕ್ಷೇತ್ರದ ಶ್ರೀ ವೀರೇಂದ್ರ ಹೆಗ್ಗಡೆ ಅವರ ಮೇಲೆ ಸಂಪೂರ್ಣ ನಂಬಿಕೆ ಹೊಂದಿ ಇಂತಹ ಅನವಶ್ಯಕ, ಅಸತ್ಯ ಹಾಗೂ ಅಸಂಗತ ಆರೋಪಗಳನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ಸ್ವಾಮೀಜಿ ನುಡಿದಿದ್ದಾರೆ ಹಾಗೂ ಧರ್ಮಸ್ಥಳದ ಶ್ರೇಷ್ಠ ಸೇವಾ ಪರಂಪರೆಯನ್ನು ಸಮರ್ಥಿಸುತ್ತದೆ ಮತ್ತು ಶ್ರೀಮಠ ಹಾಗೂ ಶ್ರೀ ಮಠದ ಶಿಷ್ಯವೃಂದದ ಸಂಪೂರ್ಣ ಬೆಂಬಲ ಘೋಷಿಸುತ್ತದೆ.ಸಮಾಜದಲ್ಲಿ ಅಸತ್ಯ ಪ್ರಚಾರ, ತಪ್ಪು ಮಾಹಿತಿ ಹಂಚಿಕೆ ಮತ್ತು ಅವಹೇಳನಕಾರಿ ನಡವಳಿಕೆಗಳನ್ನು ತಡೆಯಲು ಎಲ್ಲಾ ಧರ್ಮಗಳ ಧರ್ಮ ಗುರುಗಳು, ಧರ್ಮಾಭಿಮಾನಿಗಳು ಧರ್ಮದ ಪರ ಕಂಕಣಬದ್ಧರಾಗಿ ನಿಲ್ಲುವಂತೆ ಅಪೇಕ್ಷಿಸುತ್ತೇವೆ. ನಮ್ಮ ಬೆಂಬಲ, ನಮ್ಮ ಆಶೀರ್ವಾದ ನಮ್ಮ ಪ್ರಾರ್ಥನೆಗಳು ಸದಾ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ ಅವರೊಂದಿಗೆ ಇರುತ್ತವೆ ಎಂದು ತಿಳಿಸಿದ್ದಾರೆ.

ಸಮಾಜದ ಎಲ್ಲ ವರ್ಗದವರು ಪರಸ್ಪರ ಗೌರವದಿಂದ, ಸತ್ಯಾಸತ್ಯತೆ ಪರಿಶೀಲಿಸಿ, ಸೌಹಾರ್ದತೆ ಉಳಿಸಿಕೊಂಡು ನಡೆದುಕೊಳ್ಳಬೇಕು. ಧರ್ಮಸ್ಥಳ ಕ್ಷೇತ್ರದ ಮೇಲೆ ಹಾಗೂ ಶ್ರೀ ಡಾ. ವೀರೇಂದ್ರ ಹೆಗ್ಗಡೆ ಅವರೊಂದಿಗೆ ನಮ್ಮ ಬೆಂಬಲ ಸದಾಕಾಲ ಅಚಲವಾಗಿರುತ್ತದೆ ಎಂದು ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಪರಿಷತ್‌ನಲ್ಲಿ ಆಗ್ರಹ

ಬೆಂಗಳೂರು, ಆ.13– ರಾಜ್ಯದ ಆರು ಸಾವಿರ ಗ್ರಾಮ ಪಂಚಾಯ್ತಿಗಳಿಗೆ, 187



ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಮೀಸಲಾತಿ ಪ್ರಕಟಿಸಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ವಿಧಾನ ಪರಿಷತ್ತಿನ ಅಧಿವೇಶನದ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಈಗಾಗಲೇ ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಚುನಾವಣೆಗಾಗಿ ಸರ್ಕಾರ ಮೀಸಲಾತಿ ಪಟ್ಟಿ ನೀಡದ ಕಾರಣಕ್ಕೆ ಆಯೋಗ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಿದೆ. ಮೇ.31 ಕ್ಕೆ ಗಡುವು ವಿಧಿಸಿದ್ದರೂ ಮೀಸಲಾತಿ ಪಟ್ಟಿ ನೀಡಿಲ್ಲ. ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆಯೋಗ ಸಿದ್ಧವಿದ್ದರೂ ಪಟ್ಟಿಕೊಟ್ಟಿಲ್ಲ. ಆದ ಕಾರಣ ರಾಜ್ಯ ಸರ್ಕಾರ ಚುನಾವಣೆ ನಡೆಸುವ ಸಂಬಂಧ ಮೀಸಲಾತಿ ಪಟ್ಟಿಯನ್ನು ಕೂಡಲೇ ಚುನಾವಣೆ ಆಯೋಗಕ್ಕೆ ಒದಗಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಸಿ.ಎನ್. ಮಂಜೇಗೌಡರು ಒತ್ತಾಯಿಸಿದರು.

ಸರ್ಕಾರ ಮೀಸಲಾತಿ ಈ ಕುರಿತು ಪ್ರತಿಕ್ರಿಯಿಸಿದ ವಿಧಾನ ಪರಿಷತ್ತಿನ ಸಭಾನಾಯಕರು ಅಗಿರುವ ಎನ್.ಎಸ್.ಬೋಸರಾಜು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಸಿ.ಎನ್. ಮಂಜೇಗೌಡರಿಗೆ ಭರವಸೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟುಹಬ್ಬದ ಹಿನ್ನೆಲೆ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮಾನಿ ಬಳಗದಿಂದ ವಿಶೇಷ ಚೇತನ ಮಕ್ಕಳ ಶಾಲೆಗೆ ನೆರವು



ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮಾನಿಗಳ ಬಳಗದ ವತಿಯಿಂದ ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳ ಶಾಲೆಗೆ ಆರ್ಥಿಕ ನೆರವು ನೀಡಲಾಯಿತು.

ಮೈಸೂರು, ಆ.13– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮಾನಿಗಳ ಬಳಗದ ವತಿಯಿಂದ ಮೈಸೂರಿನ ಶ್ರೀರಾಂಪುರದಲ್ಲಿರುವ ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳ ಶಾಲೆಯ ಶ್ರೇಯೋಭಿವೃದ್ಧಿಗಾಗಿ 50 ಸಾವಿರ ರೂ ಆರ್ಥಿಕ ನೆರವು ನೀಡಿ, ಅಲ್ಲಿನ ಮಕ್ಕಳಿಗೆ ಸಿಹಿ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನವಚೇತನ ಬಸವೇಶ್ವರ ಟ್ರಸ್ಟ್ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಮಾಕಿ ಮರೀಗೌಡರು ಹಾಗೂ ಇಲ್ಲಿನ ಸಿಬ್ಬಂದಿಯ ಸೇವೆ ನಿಜಕ್ಕೂ ಶ್ಲಾಘನೀಯ. ಒಂದು ಮಗುವನ್ನು ಸಂತೈಸುವುದೇ ಕಷ್ಟ ಎನ್ನುವ ಇಂದಿನ ಕಾಲಘಟ್ಟದಲ್ಲಿ 60ಕ್ಕೂ ಹೆಚ್ಚು ವಿಶೇಷ ಮಕ್ಕಳಿಗೆ ಮಾನವೀಯ ನೆಲೆಗಟ್ಟಿನಲ್ಲಿ ಸೇವೆ ನೀಡುತ್ತಿದ್ದಾರೆ. ಬಡವರು, ಕೂಲಿಕಾರ್ಮಿಕರ ಮಕ್ಕಳು ಇಲ್ಲಿ ಹೆಚ್ಚಾಗಿದ್ದಾರೆ. ಸೇವೆ ಜೊತೆಗೆ ವಿದ್ಯಾಭ್ಯಾಸ ಕಲ್ಪಿಸಿರುವುದು ಅಭಿನಂದನಾರ್ಹ ಎಂದರು.

ನಾಡು ಕಂಡ ಧೀಮಂತ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದಿದ್ದರೂ ಕೆಳ ಹಂತದಿಂದ ಬೆಳೆದು ಬಂದು ರಾಷ್ಟ್ರವೇ ಮೆಚ್ಚುವಂತೆ ಮಾದರಿ ಆಡಳಿತ ನೀಡುತ್ತಿದ್ದಾರೆ. ನೊಂದವರ, ದಲಿತರು, ಹಿಂದುಳಿದವರು, ಮಹಿಳೆಯರು, ಆರ್ಥಿಕವಾಗಿ ದುರ್ಬಲವಾದವರ ಪರವಾಗಿ ಹತ್ತಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಯಾವುದೇ ಮುಲಾಜಿಗೆ ಒಳಗಾಗದೇ ಕಪ್ಪುಚುಕ್ಕೆ ಇಲ್ಲದೇ ಶುದ್ಧ ಮತ್ತು ಶ್ರೇಷ್ಠ ಆಡಳಿತ ನಡೆಸಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಜನನಾಯಕ ಸಿದ್ದರಾಮಯ್ಯ ಅವರ ಹುಟ್ಟುಹಬ್ಬವನ್ನು ಈ ರೀತಿ ಸೇವಾ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಿದ್ದು ಸಂತಸ ತಂದಿದೆ ಎಂದು ಹೇಳಿದರು.

ಇದೇ ವೇಳೆ ವಿಶೇಷ ಮಕ್ಕಳ ಶಾಲೆಗೆ ಆರ್ಥಿಕ ಸಹಾಯ ಮಾಡಿದ ಅಭಿಮಾನಿಗಳ ಬಳಗದ ಸದಸ್ಯರು, ಗುತ್ತಿಗೆದಾರರಾದ ಶ್ರೀಮತಿ ಅಂಬಿಕಾ ಶಿವರಾಜು, ಆಶ್ರಯ ಸಮಿತಿ ಮಾಜಿ ಸದಸ್ಯ ಶಿವಕುಮಾರ್, ಕಾಂಗ್ರೆಸ್ ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ಜೆ.ವಿನಯ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಶಿಂಷಾ ದಿನೇಶ್, ಭಾಗ್ಯ ಚಂದ್ರಶೇಖರ್‌ಗೆ ಧನ್ಯವಾದ ತಿಳಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮುಖಂಡರಾದ ಜೋಗಿ ಮಹೇಶ್, ರವಿಶಂಕರ್, ವಿಜಯ್ ಕುಮಾರ್, ವಿಶ್ವನಾಥ್(ವಿಶ್ವ), ವಿನಯ್ ಕುಮಾರ್, ಶಿವಕುಮಾರ್, ಅಶೋಕಪುರಂ ಪಟಾಕಿ ಮಂಜುನಾಥ್, ಶಿಂಷಾ ದಿನೇಶ್, ಗುಣಶೇಖರ್, ಮಹ್ಮದ್ ಫಾರೂಖ್, ಆರ್.ಹೆಚ್.ಕುಮಾರ್, ವೀಣಾ, ಲತಾ ಮೋಹನ್, ಶಂಕರ್, ಪುಟ್ಟಸ್ವಾಮಿ, ಕುಮಾರ್, ಭಾಗ್ಯ ಚಂದ್ರಶೇಖರ್, ಮಧುರಾಜ್, ಗಣೇಶ್, ರಾಕೇಶ್, ನಾಸೀರ್ ಮತ್ತಿತರರು ಉಪಸ್ಥಿತರಿದ್ದರು.

ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಚಿನ್ನ, ಕಂಚಿನ ಪದಕ ಗೆದ್ದ ಕ್ರೀಡಾಪಟುಗಳಿಗೆ ಅಭಿನಂದನೆ



ರಾಷ್ಟ್ರಮಟ್ಟದ ಜಿಮ್ನಾಸ್ಟಿಕ್‌ನಲ್ಲಿ ಸಾಧನೆ ತೋರಿದ ಮೈಸೂರು ಸ್ಪರ್ಧಿಗಳನ್ನು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಅಭಿನಂದಿಸಿದರು. ತರಬೇತುದಾರರಾದ ಬಿ.ಲೋಕೇಶ್, ಎಸ್.ವಿದ್ವತ್ ಚಿತ್ರದಲ್ಲಿದ್ದಾರೆ.

ಮೈಸೂರು, ಆ.13(ವಿವಿಹೆಚ್)– ಇದೇ ಆ.3 ರಿಂದ 10ರವರೆಗೆ ಉತ್ತರ ಖಾಂಡ್‌ನ ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರ ಮಟ್ಟದ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಚಿನ್ನ ಹಾಗೂ ಕಂಚಿನ ಪದಕ ಗೆದ್ದ ಮೈಸೂರು ಕ್ರೀಡಾಪಟುಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಅಭಿನಂದಿಸಿದರು.

ರಾಷ್ಟ್ರಮಟ್ಟದ ಬಾಲಕ/ಬಾಲಕಿಯರ ಸಬ್‌ಜೂನಿಯರ್, ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲಿ (ಅಕ್ರೋಬೆಟಿಕ್ಸ್, ಟ್ರಾಂಪೋಲಿನ್ ಮತ್ತು ಟ್ರಬ್ಲಿಂಗ್) ನಡೆದ ಸ್ಪರ್ಧೆಯಲ್ಲಿ ಮೈಸೂರು ಜಿಮ್ನಾಸ್ಟಿಕ್ ಸ್ಪರ್ಧಿಗಳಾದ ಅನ್ವಿ ಹರಿಸತ 12 ವರ್ಷ ವಿಭಾಗದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಅರ್ಪಿತ್ ತಲಗುಡಿ 14 ವರ್ಷ ವಿಭಾಗದಲ್ಲಿ ಕಂಚು, 17 ವರ್ಷ ಒಳಗಿನ ವಿ ಟ್ರಬ್ಲಿಂಗ್ ವಿಭಾಗದಲ್ಲಿ ಕವನ್ ಕಂಚು ಗೆದ್ದಿದ್ದಾರೆ. 13 ರಿಂದ 19 ವರ್ಷದೊಳಗಿನ ಸ್ಪೋರ್ಟ್ಸ್ ಅಕ್ರೋಬೆಟಿಕ್ಸ್ ಗುಂಪು ವಿಭಾಗದಲ್ಲಿ ಆರ್.ರಾಕೇಶ್, ಶಾನ್‌ಗೌಡ, ಬಿ.ಎಂ.ಕವನ್ ಮತ್ತು ಆರ್.ತನ್ಮಯ್ ಕಂಚಿನ ಪದಕ ಪಡೆದಿದ್ದಾರೆ. ಆ ಮೂಲಕ ಮೈಸೂರು ತಂಡ ಸಮಗ್ರ ಪ್ರಶಸ್ತಿಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ರಾಷ್ಟ್ರಮಟ್ಟದ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಪದಕ ಪಡೆದ ಸ್ಪರ್ಧಿಗಳು ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ಗೋವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಅಕ್ರೋಬೆಟಿಕ್ಸ್ ಜಿಮ್ನಾಸ್ಟಿಕ್‌ನಲ್ಲಿ ಭಾರತ ತಂಡ ಭಾರತ ತಂಡದ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು ಉತ್ತಮ ಪ್ರದರ್ಶನ ತೋರಿದ್ದಲ್ಲಿ ಮೈಸೂರು ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಧರ್ಮಸ್ಥಳ ಪ್ರಕರಣ: 300ಕ್ಕೂ ಹೆಚ್ಚು ಶವ ಹೂತಿದ್ದೇನೆ ಅಂದಿದ್ದ

ಸ್ಥಳ 13ರಲ್ಲಿ 2ನೇ ದಿನವೂ ಸಿಕ್ಕಿಲ್ಲ ಒಂದೂ ಕಳೇಬರ; ಎಸ್‌ಐಟಿ ಶೋಧ ಮುಕ್ತಾಯ



ಧರ್ಮಸ್ಥಳ, ಆ.13– ತೀವ್ರ ಕುತೂಹಲ ಕೆರಳಿಸಿದ್ದ ಧರ್ಮಸ್ಥಳ ರಹಸ್ಯ ಸಮಾಧಿ ಪ್ರಕರಣಕ್ಕೆ ದೊಡ್ಡ ತಿರುವು ಸಿಕ್ಕಿದೆ. ಸ್ಥಳ ಸಂಖ್ಯೆ 13ರಲ್ಲಿ 300ಕ್ಕೂ ಹೆಚ್ಚು ಶವಗಳನ್ನು ಹೂತು ಹಾಕಿದ್ದಾಗಿ ಅನಾಮಿಕ ಹೇಳಿದ್ದು, ಆ ಜಾಗದಲ್ಲಿ ನಿನ್ನೆಯಿಂದ ಅಗೆಯುವ ಕಾರ್ಯಾಚರಣೆ ಶುರುವಾಗಿತ್ತು. ಆದರೆ ಸರಿಸುಮಾರು 14 ಅಡಿ ಆಳ ಅಗೆದರೂ ಇಲ್ಲಿಯವರೆಗೂ ಒಂದೇ ಒಂದೂ ಕಳೇಬರ ಸಿಕ್ಕಿಲ್ಲ. ಹೀಗಾಗಿ ಅಗೆದಿರುವ ಜಾಗದಲ್ಲಿ ಮತ್ತೆ ಮಣ್ಣನ್ನು ಮುಚ್ಚಲಾಗಿದೆ.

ಪ್ರಕರಣ ಸಂಬಂಧ ಈಗಾಗಲೇ ಎಸ್‌ಐಟಿ 15 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದು, ಸ್ಥಳ ಸಂಖ್ಯೆ 6ರಲ್ಲಿ ಮಾತ್ರ ಕಳೇಬರ ಪತ್ತೆಯಾಗಿತ್ತು. ಇನ್ನು ತೀವ್ರ ಕುತೂಹಲ ಕೆರಳಿಸಿದ್ದ 13ನೇ ಸ್ಥಳದಲ್ಲಿ ನಿನ್ನೆಯಿಂದ ಅಗೆಯುವ ಕೆಲಸ ನಡೆದಿತ್ತು. ಆದರೆ ಯಾವುದೇ ಅಸ್ಥಿಪಂಜರ ಪತ್ತೆಯಾಗಿರಲಿಲ್ಲ. ಇಂದು ಸಹ ಬೆಳಗ್ಗಿನಿಂದಲೇ ದೂರುದಾರ ತೋರಿಸಿದ ಜಾಗಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ಇಂದು ಸಂಜೆವರೆಗೂ ಯಾವುದೇ ಕಳೇಬರ ಪತ್ತೆಯಾಗದ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ.

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಪರಮೇಶ್ವರ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಭೇಟಿಯಾಗಿದ್ದರು. ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಂತಿ, ಡಿಐಜಿಪಿ ಅನುಚೇತ್ ಭೇಟಿ ವೇಳೆ ಪರಮೇಶ್ವರ್ ಅವರು, ತನಿಖಾ ಪ್ರಗತಿ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು ಶೀಘ್ರವಾಗಿ ತನಿಖೆ ಮುಗಿಸಿ ವರದಿ ನೀಡುವಂತೆ ಸೂಚಿಸಿದ್ದಾರೆ.

ದೂರುದಾರ ಮಾಜಿ ನೈರ್ಮಲ್ಯ ಕಾರ್ಮಿಕರಾಗಿದ್ದು, ಒಂದು ದಶಕದ ಹಿಂದೆ ಧರ್ಮಸ್ಥಳ ಗ್ರಾಮದಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆ ಸಂತ್ರಸ್ತರ ಶವ ಗಳನ್ನು ಹೂತಿದ್ದೆ ಎಂದು ಆರೋಪಿಸಿ ದ್ದಾರೆ. ಜುಲೈ 19 ರಂದು ರಚಿಸಲಾದ ಡಿಜಿಪಿ ಪ್ರಣಬ್ ಮೊಹಂತಿ ನೇತೃತ್ವದಲ್ಲಿ ಎಸ್‌ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದೆ.

ಸಿಎಂ ಸಿದ್ದರಾಮಯ್ಯ ಭೇಟಿಯಾದ ಎಸ್‌ಐಟಿ ಮುಖ್ಯಸ್ಥ ಮೊಹಂತಿ

ಬೆಂಗಳೂರು, ಆ.13– ಧರ್ಮಸ್ಥಳದ ಪ್ರಕರಣ ಸಂಬಂಧ ಮಹತ್ವದ ಬೆಳವಣಿಗೆ ನಡೆಯುತ್ತಿದೆ. ನೂರಾರು ಶವ ಹೂತಿಡಲಾಗಿದೆ ಎಂಬ ಆರೋಪದ ಶಕ್ತಿ ಕುಂದುತ್ತಿದೆ. ಪ್ರಮುಖವಾಗಿ ಎಸ್‌ಐಟಿ ಶವ ಶೋಧನೆಯಲ್ಲಿ 13 ಪಾಯಿಂಟ್ ಸೇರಿದಂತೆ ಇತರ ಪಾಯಿಂಟ್ ಉತ್ಖನನ ನಡೆಸಿದರೂ ಒಂದು ಸ್ಥಳ ಬಿಟ್ಟು ಇತರ ಯಾವುದೇ ಕಳೇಬರ ಪತ್ತೆಯಾಗಿಲ್ಲ.



ಸಿದ್ದರಾಮಯ್ಯ



ಪ್ರಣವ್ ಮೋಹಾಂತಿ

ಇದರ ಬೆನ್ನಲ್ಲೇ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೋಹಾಂತಿ, ಡಿಐಜಿ ಅನುಚೇತ್ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಯಾಗಿ ಬರೋಬ್ಬರಿ 45 ನಿಮಿಷಗಳ ಕಾಲ ಚರ್ಚಿಸಿದ್ದಾರೆ.

ಪ್ರಣವ್ ಮೊಹಾಂತಿ ಇಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ ಬಳಿಕ ಸಿದ್ದರಾಮಯ್ಯ ಭೇಟಿಯಾಗಿದ್ದಾರೆ. ತನಿಖೆಯಲ್ಲಿ ನಡೆದಿರುವ ಬೆಳವಣಿಗೆ, ಶವ ಶೋಧ ಕಾರ್ಯಾಚರಣೆ, ಇದೇ ವೇಳೆ ದಾಖಲಾದ ಇತರ ದೂರು, ದೂರುದಾರ ನೀಡಿರುವ ಮಾಹಿತಿಗಳ ಕುರಿತು ಸಿದ್ದರಾಮಯ್ಯ ಜೊತೆ ಮೊಹಾಂತಿ ಚರ್ಚಿಸಿದ್ದಾರೆ.

ಶಾಸಕಾಂಗ ಸಭೆಯಲ್ಲಿ ಧರ್ಮಸ್ಥಳ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿದ್ದರು. ಎಸ್‌ಐಟಿ ತನಿಖೆಗೆ ಜನರಲ್ಲಿ ವಿಶ್ವಾಸ ಮೂಡಿದೆ. ಭಾವನಾತ್ಮಕವಾಗಿ ಮಾತ ನಾಡುವುದು ಬೇಡ. 13ನೇ ಸ್ಥಳದಲ್ಲೂ ಯಾವುದೇ ಕಳೇಬರ ಪತ್ತೆಯಾಗದಿದ್ದರೆ, ಶವ ಶೋಧನೆ ಸ್ಥಗಿತಗೊಳಿಸುವ ಕುರಿತು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಸಿದ್ದಾರಾಮಯ್ಯ ಹೇಳಿದ್ದರು. ಇದೀಗ 13ನೇ ಸ್ಥಳಧ ಎರಡನೇ ಭಾಗದಲ್ಲೂ 18 ಅಡಿ ಆಳ ಅಗೆದರೂ ಯಾವುದೇ ಕಳೇಬರ ಪತ್ತೆಯಾದ ಹಿನ್ನಲೆಯಲ್ಲಿ ಸಿದ್ದರಾಮಯ್ಯ ಜೊತೆ ಪ್ರಣವ್ ಮೊಹಾಂತಿ ಭೇಟಿಯಾಗಿರುವುದು ಮಹತ್ವ ಪಡೆದುಕೊಂಡಿದೆ.

ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ; ತಜ್ಞರ ಸಮಿತಿ ರಚನೆ

ಪರಿಷತ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ಬೆಂಗಳೂರು, ಆ.13– ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು, ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಕುರಿತು



ಸಮಗ್ರ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚಿಸಲಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನಪರಿಷತ್‌ನಲ್ಲಿ ಗಮನ ಸೆಳೆಯುವ ಸೂಚನೆಯಡಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಹಾಗೂ ಬಿಜೆಪಿಯ ಡಿ.ಎಸ್. ಅರುಣ್ ಅವರು, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳಿಗೆ ಶೀಘ್ರ ಚುನಾವಣೆ ನಡೆಸುವ ವಿಷಯದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರ ನೀಡಿದರು.

ಸ್ಥಳೀಯ ಸಂಸ್ಥೆಗಳಿಗೆ ಬೇಗ ಚುನಾವಣೆ ನಡೆಯಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ಕಾನೂನಾತ್ಮಕವಾಗಿ ಪರಿಹಾರ ಕಂಡುಕೊಂಡು, ಕಗ್ಗಂಟು ಸರಿಪಡಿಸಿಕೊಂಡು ಮೀಸಲಾತಿಯನ್ನು ಪ್ರಕಟಿಸುವ ಪ್ರಕ್ರಿಯೆ ನಡೆಯುತ್ತಿದೆ. ಶೀಘ್ರ ಚುನಾವಣೆ ನಡೆಸಲಾಗುತ್ತದೆ ಎಂದರು.

ಜಿಲ್ಲಾ, ತಾಲೂಕು, ಗ್ರಾಮ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವುದರಿಂದ ಐದು ವರ್ಷದಲ್ಲಿ ಒಂದೂವರೆ ವರ್ಷ ಚುನಾವಣೆ ಪ್ರಕ್ರಿಯೆಯಲ್ಲೇ ಮುಗಿದು ಹೋಗುತ್ತದೆ. ಕೆಲಸಗಳು ಆಗುವುದಿಲ್ಲ. ಒಂದೇ ಬಾರಿಗೆ ಮೂರು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕು ಎಂದು ಮಂಜುನಾಥ ಭಂಡಾರಿ ಒತ್ತಾಯಿಸಿದರು.

ಒಂದೇ ಬಾರಿ ಚುನಾವಣೆ ನಡೆಯುವುದಕ್ಕೆ ಕಾಯ್ದೆಗೆ ತಿದ್ದುಪಡಿ ತರಬೇಕೇ? ಸಂವಿಧಾನಕ್ಕೆ ತಿದ್ದುಪಡಿಯಾಗಬೇಕೇ? ಎಂಬುದರ ಬಗ್ಗೆ ಅಧ್ಯಯನದ ಅಗತ್ಯವಿದೆ. ಕೇರಳದಲ್ಲಿ ಏಕ ಕಾಲದಲ್ಲಿ, ಐದು ವರ್ಷಕ್ಕೆ ಸರಿಯಾಗಿ ಚುನಾವಣೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಎಲ್ಲವನ್ನೂ ಪರಿಶೀಲಿಸಿ, ವರದಿ ಸಲ್ಲಿಸಲು ಸಮಿತಿ ರಚಿಸಲಾಗುತ್ತದೆ ಎಂದು ಪ್ರಿಯಾಂಕ್ ಹೇಳಿದರು. ತಾಲೂಕು ಪಂಚಾಯಿತಿಗಳನ್ನೇ ಕೈಬಿಡಬೇಕೆಂದು ಕೆಲವರು ಸಲಹೆ ನೀಡುತ್ತಿದ್ದಾರೆ. ಪಂಚಾಯಿತಿಗಳು ಸರಳೀಕರಣವಾಗಿ, ಸಬಲೀಕರಣವಾಗಬೇಕು. ಸದಸ್ಯರ ಗೌರವಧನ ಹೆಚ್ಚಿಸಲು ಆರ್ಥಿಕ ಇಲಾಖೆಗೆ ಹೋಗಿದ್ದ ಪ್ರಸ್ತಾವ ವಾಪಸ್ ಬಂದಿದೆ. ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ಮಾಡಿದರಷ್ಟೇ ಸಾಲದು, ಆಡಳಿತಾತ್ಮಕ ಅಧಿಕಾರ ಕೊಡಬೇಕು. ಎಲ್ಲದ್ದಕ್ಕೂ ಸರ್ಕಾರವನ್ನೇ ಕೇಳಬೇಕು ಎಂಬ ಪರಿಸ್ಥಿತಿ ಇದೆ. ಬರೀ ಚುನಾವಣೆ ಮಾಡಿ, ಕೈಕಟ್ಟಬೇಡಿ'ಎಂದು ಕಾಂಗ್ರೆಸ್‌ನ ಬಲ್ಕೀಸ್ ಬಾನು ಹೇಳಿದರು.

ಆನ್‌ಲೈನ್ ಗೇಮಿಂಗ್ ಹಾವಳಿ ತಡೆಗೆ ಸೆಪ್ಟೆಂಬರ್‌ನಲ್ಲಿ ಮಾರ್ಗಸೂಚಿ

ವಿಧಾನಸಭೆ, ಆ.13– ರಾಜ್ಯದಲ್ಲಿ ಆನ್‌ಲೈನ್ ಗೇಮಿಂಗ್ ಹಾವಳಿ ತಡೆಗೆ ಸೂಕ್ತ ಮಾರ್ಗಸೂಚಿ ರೂಪಿಸಲು ಡಿಜಿಪಿ ಪ್ರಣಬ್ ಮೋಹಂತಿ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿ ಸೆಪ್ಟೆಂಬರ್‌ನಲ್ಲಿ ವರದಿ ನೀಡಲಿದೆ. ಅದರ ಆಧಾರದಲ್ಲಿ ಆನ್‌ಲೈನ್ ಗೇಮ್‌ಗಳನ್ನು ನಿಯಂತ್ರಿಸಲು ಸೂಕ್ತ ನಿಯಮ ರೂಪಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು.

ಪ್ರಶ್ನೋತ್ತರ ಕಲಾಪ ವೇಳೆ ಬಿಜೆಪಿಯ ಸುರೇಶ್‌ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಆನ್‌ಲೈನ್ ಗೇಮಿಂಗ್‌ಗಳು ಯುವಜನರ ಭವಿಷ್ಯ ಹಾಳು ಮಾಡುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಆನ್‌ಲೈನ್ ಬೆಟ್ಟಿಂಗ್ ಪ್ರಕರಣಗಳಿಗೆ ಸಂಬಂಧಿಸಿ 347 ಪ್ರಕರಣ ದಾಖಲಿಸಲಾಗಿವೆ. ಅಲ್ಲದೆ, ಆನ್‌ಲೈನ್ ಗೇಮಿಂಗ್‌ನಿಂದ ಆಗುತ್ತಿರುವ ಸಮಸ್ಯೆ ನಿವಾರಿಸಲು 2020ರಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಹೈಕೋರ್ಟ್‌ನಲ್ಲಿ ತಿದ್ದುಪಡಿ ರದ್ದು ಮಾಡಲಾಗಿತ್ತು. ಈ ಕುರಿತು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದ್ದು, ವಿಚಾರಣೆ ಬಾಕಿಯಿದೆ ಎಂದರು.

ಅದರ ನಡುವೆಯೇ ಗೇಮಿಂಗ್ ಉದ್ಯಮದ ಪ್ರತಿನಿಧಿಗಳನ್ನೊಳಗೊಂಡ



ಜಿ.ಪರಮೇಶ್ವರ್

ಪ್ರಣಬ್ ಮೋಹಂತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿ ಸೆಪ್ಟೆಂಬರ್‌ನಲ್ಲಿ ವರದಿ ನೀಡಲಿದ್ದು, ಅದರ ಆಧಾರದಲ್ಲಿ ಮಾರ್ಗಸೂಚಿ ರೂಪಿಸಲಾಗುವುದು. ಅದರಲ್ಲಿ ಯಾವೆಲ್ಲ ಆನ್‌ಲೈನ್ ಗೇಮ್‌ಗಳು ಕೌಶಲ್ಯಾಭಿವೃದ್ಧಿ ಅಥವಾ ಬೆಟ್ಟಿಂಗ್‌ಗೆ ಸಂಬಂಧಿಸಿದ್ದು ಎಂದು ವರ್ಗೀಕರಿಸಲಾಗುವುದು. ಅಲ್ಲದೆ ಸರ್ಕಾರ ರೂಪಿಸುವ ಮಾರ್ಗಸೂಚಿಯನ್ನು ಗೇಮಿಂಗ್ ಉದ್ಯಮಿಗಳಿಗೂ ನೀಡಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು. ಮಧ್ಯಪ್ರವೇಶಿಸಿದ ಬಿಜೆಪಿಯ ಆರಗ ಜ್ಞಾನೇಂದ್ರ, ನಾನು ಗೃಹ ಸಚಿವನಾಗಿದ್ದಾಗಲೇ ಕಾಯ್ದೆಗೆ ತಿದ್ದುಪಡಿ ತರಲಾಯಿತು. ಆಗ ನನ್ನ ಮೇಲೆ ಸಾಕಷ್ಟು ಒತ್ತಡಗಳು ಬಂದವು. ಈ ಉದ್ಯಮದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದು ಕಲ್ಪನೆಗೂ ನಿಲುಕದ್ದು. ಅದನ್ನೆಲ್ಲ ಮೀರಿ ಆನ್‌ಲೈನ್ ಬೆಟ್ಟಿಂಗ್, ಗೇಮಿಂಗ್‌ಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಸದ್ಯ ದೇಶದಲ್ಲಿ 4.5 ಬಿಲಿಯನ್ ವಹಿವಾಟು ನಡೆಸಲಾಗುತ್ತಿದ್ದು, 590 ಮಿಲಿಯನ್ ಗೇಮರ್‌ಗಳಿದ್ದಾರೆ. ಗೇಮಿಂಗ್ ಉದ್ಯಮಿಗಳು ಜಿಎಸ್‌ಟಿ ಕಟ್ಟುವುದರಿಂದ ತಪ್ಪಿಸಿಕೊಳ್ಳಲು ಬೇರೆ ದೇಶಗಳ ಸರ್ವರ್‌ಗಳಿಂದ ಗೇಮ್‌ಗಳನ್ನು ಆಡಿಸಲಾಗುತ್ತಿದೆ. ಈ ಬಗ್ಗೆಯೂ ಗಮನಹರಿಸಬೇಕಿದೆ ಎಂದರು. ನನ್ನ ವಾಲೆಟ್‌ನಲ್ಲಿ 1.62 ಲಕ್ಷ ಆನ್‌ಲೈನ್ ರಮ್ಮಿ ಆಡುವಂತೆ ಉತ್ತೇಜಿಸುವಂತಹ ಮೆಸೇಜ್‌ಗಳು ಮೊಬೈಲ್‌ಗೆ ಬರುತ್ತವೆ. ನನ್ನ ಮೊಬೈಲ್‌ಗೆ ನನ್ನ ವಾಲೆಟ್‌ಗೆ 1.62 ಲಕ್ಷ ಹಾಕಲಾಗಿದೆ. ಅದರಿಂದ ರಮ್ಮಿ ಆಡಿ ಎಂಬ ಮೆಸೇಜ್ ಬಂದಿದೆ. ಇದು ಎಲ್ಲರಿಗೂ ಉತ್ತೇಜನ ನೀಡುತ್ತದೆ ಎಂದು ಸುರೇಶ್ ಕುಮಾರ್ ತಿಳಿಸಿದರು.

ಮನೆ ಮುಂದೆ ನಿಲ್ಲಿಸಿದ್ದ ಇನ್ನೋವಾ ಕಾರು ಕಳವು

ಮೈಸೂರು, ಆ.13– ಮನೆ ಮುಂದೆ ನಿಲ್ಲಿಸಿದ್ದ ಇನ್ನೋವಾ ಕಾರು ರಾತ್ರೋ ರಾತ್ರಿ ಕಳುವಾಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಇಲ್ಲಿನ ಆಲನಹಳ್ಳಿಯ ಎಸ್.ಡಿ.ಜಂಬುರಾವ್ ಲೇಔಟ್ ಬಡಾವಣೆ ನಿವಾಸಿ ಮಂಜುನಾಥ್ ಅವರ ಇನ್ನೋವಾ ಕಾರನ್ನು(ಕೆಎ–11, ಎನ್–1127) ಖದೀಮರು ಕದ್ದೊಯ್ದಿದ್ದಾರೆ.

ವ್ಯವಸಾಯದ ಜೊತೆಗೆ ಬ್ಯುಸಿನೆಸ್ ಮಾಡಿಕೊಂಡಿರುವ ಮಂಜುನಾಥ್, 2017ರಲ್ಲಿ ಪತ್ನಿ ಹೆಸರಿನಲ್ಲಿ ಖರೀದಿಸಿದ್ದ ಈ ಕಾರನ್ನು ಆ.11ರಂದು ಸಂಜೆ 7ಕ್ಕೆ ಮನೆ ಮುಂದಿನ ಜಾಗದಲ್ಲಿ ನಿಲ್ಲಿಸಿದ್ದರು. ಬೆಳಗೆದ್ದು ನೋಡುವಷ್ಟರಲ್ಲಿ ಕಾರು ಕಳುವಾಗಿತ್ತು.

ಈ ಸಂಬಂಧ ಮಂಜುನಾಥ್ ಪತ್ನಿ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕಾರಿನಲ್ಲಿ ಜಮೀನಿಗೆ ಸಂಬಂಧಿಸಿದ ದಾಖಲೆಗಳೂ ಇದ್ದವು ಎಂದು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಖದೀಮರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಸಂಗೀತೋತ್ಸವ ಭವ್ಯ ಪ್ರಶಸ್ತಿ ಉತ್ಸವ–2025 ಸಮಾರೋಪ



ಡಾ. ರಾ.ಸತ್ಯನಾರಾಯಣ ಸಂಸ್ಮರಣ ಉತ್ಸವದಲ್ಲಿ ಪ್ರೊ.ಯಜ್ಞೇಶ್ವರ ಎಸ್ ಶಾಸ್ತ್ರಿ ಅವರಿಗೆ 'ವೇದಶಾಸ್ತ್ರ ಸೂರಿ', ನಾಟ್ಯವಿದೂಷಿ ಪಾರ್ವತಿ ದತ್ತ ಅವರಿಗೆ 'ರಾ.ಸತ್ಯನಾರಾಯಣ ಸ್ಮರಣಾರ್ಥ' ಪ್ರಶಸ್ತಿ ನೀಡಲಾಯಿತು.

ಮೈಸೂರು, ಆ.13(ವಿವಿಹೆಚ್)– ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬ್ರಹ್ಮವಿದ್ಯಾ, ಡಿವಿಜಿ ಬಳಗದ ಪ್ರತಿಷ್ಠಾನದ ವತಿಯಿಂದ ಮೈಸೂರಿನ ಶ್ರೀ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದ ಶ್ರೀವಾಸುದೇವಾಚಾರ್ಯ ಭವನದಲ್ಲಿ ಬುಧವಾರ ಡಾ. ರಾ.ಸತ್ಯನಾರಾಯಣ ಸಂಸ್ಮರಣ ಉತ್ಸವ–2025, ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮೂರು ದಿನಗಳ ಸಂಗೀತೋತ್ಸವ ಭವ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.

ಕಾರ್ಯಕ್ರಮದಲ್ಲಿ ಸಂಸ್ಕೃತ, ವೇದಶಾಸ್ತ್ರ ವಿಭಾಗದಲ್ಲಿ ಅತ್ಯುನ್ನತ ಸಾಧನೆ ತೋರಿದ ಸಾಂಚಿ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಯಜ್ಞೇಶ್ವರ ಎಸ್ ಶಾಸ್ತ್ರಿ ಅವರಿಗೆ 'ವೇದಶಾಸ್ತ್ರ ಸೂರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ನಾಟ್ಯವಿದೂಷಿ ಪಾರ್ವತಿ ದತ್ತ ಅವರಿಗೆ 'ಡಾ. ರಾ.ಸತ್ಯನಾರಾಯಣ ಸ್ಮರಣಾರ್ಥ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾಧ್ಯಾಪಕಿ ಡಾ. ಜ್ಯೋತಿ ಶಂಕರ್ ಅವರು 'ಕನ್ನಡ ಕಾವ್ಯ ವಾಚನ', ಆಯುರ್ಧಾಮ ವೈದ್ಯ ಡಾ. ಪ್ರಶಾಂತ್ ಭಟ್ ಅವರು 'ಆರೋಗ್ಯ ದಿನಚರಿ' ವಿಶೇಷ ಬೋಧನಾ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು ಅರಮನೆ ಮಂಡಳಿ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮಹಾರಾಣಿ ಕ್ಲಸ್ಟರ್ ವಿವಿ ರಿಜಿಸ್ಟ್ರಾರ್ ಡಾ. ಶ್ರೀಕಾಂತಮ್ ನಾಗೇಂದ್ರಶಾಸ್ತ್ರಿ, ಬ್ರಹ್ಮವಿದ್ಯಾ ನಿರ್ದೇಶಕಿ ಡಾ. ರಾಧಿಕಾ ನಂದಕುಮಾರ್, ಡಿವಿಜಿ ಬಳಗದ ನಿರ್ದೇಶಕ ಕಾಂತರಾಜು, ನಂದಕುಮಾರ್ ಉಪಸ್ಥಿತರಿದ್ದರು.

ಸಮುದಾಯದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಶ್ರಮಿಸಿ

ಮಾಚಿದೇವ ಸಂಸ್ಥಾನದ ಪೀಠಾಧಿಪತಿ ಡಾ.ಬಸವ ಮಾಚಿದೇವ ಸ್ವಾಮೀಜಿ ಕರೆ

ಮೈಸೂರು, ಆ.13– ಬೇರೆಯವರ ಸಹಾಯ ನಿರೀಕ್ಷಿಸದೆ ಸಮುದಾಯದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಮಾಚಿದೇವ ಸಂಸ್ಥಾನದ ಪೀಠಾಧಿಪತಿ ಡಾ.ಬಸವ ಮಾಚಿದೇವ ಸ್ವಾಮೀಜಿ ಕರೆ ನೀಡಿದರು.



ಮೈಸೂರಿನ ರೋಟರಿ ಸಭಾಂಗಣದಲ್ಲಿ ನಡೆದ ಶ್ರೀ ಮಡಿವಾಳ ಮಾಚಿದೇವರ ಸ್ಮರಣೋತ್ಸವ ಮತ್ತು ಮನೆ ಮನೆಗೆ ಮಾಚಿದೇವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಪ್ರತಿನಿಧಿಗಳನ್ನು ಅಭಿನಂದಿಸಲಾಯಿತು.

ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರೀ ಮಡಿವಾಳ ಮಾಚಿದೇವರ ಸ್ಮರಣೋತ್ಸವ ಮತ್ತು ಮನೆ ಮನೆಗೆ ಮಾಚಿದೇವ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಮಾಜದ ಅಭಿವೃದ್ಧಿಗೆ ಬೇರೆಯವರ ಕೊಡುಗೆ ನಿರೀಕ್ಷಿಸುವ ಮೊದಲು ನಮ್ಮ ಕೊಡುಗೆ ಏನೆಂಬುದನ್ನು ಅರ್ಥಮಾಡಿಕೊಂಡು ಸಮುದಾಯದ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಮುಂದುವರೆಯಬೇಕು ಎಂದು ಕಿವಿಮಾತು ಹೇಳಿದರು.

ಮನೆ ಮನೆಗೆ ಮಾಚಿದೇವ ಕಾರ್ಯಕ್ರಮ ಕೇವಲ ಸಾಂಕೇತಿಕ. ಈ ಮೂಲಕ ನಮ್ಮ ಸಮುದಾಯದ ಮಕ್ಕಳನ್ನು ಪ್ರತಿಭಾ ಪುರಸ್ಕಾರದ ಮೂಲಕ ಪ್ರೋತ್ಸಾಹಿಸುವುದರ ಜೊತೆಗೆ ಸಮುದಾಯದ ಸಾಧಕರನ್ನು ಗೌರವಿಸಲಾಗಿದೆ. ನಾವು ಸಾಧ್ಯವಾದಷ್ಟು ಸಂಘಟಿತರಾಗಿದ್ದೇವೆ. ಪ್ರಶ್ನೆ ಮಾಡುವಷ್ಟರ ಮಟ್ಟಕ್ಕೆ ನಮ್ಮ ಸಮುದಾಯದ ಜನ ಬೆಳೆದಿದ್ದಾರೆ. ಮೊದಲು ನಾವು ಕೀಳರಿಮೆ ಬಿಟ್ಟು, ನಮ್ಮ ಮಕ್ಕಳನ್ನು ಶೈಕ್ಷಣಿಕವಾಗಿ ಬೆಳೆಸಬೇಕು. ಅವರು ಉನ್ನತ ಸ್ಥಾನಕ್ಕೇರಲು, ಉದ್ಯಮಿಗಳಾಗಿ ಬೆಳೆಯಲು ನೆರವಾಗಬೇಕು. ಸಂಘಟಿತರಾದರೆ ಮಾತ್ರ ನಿಮ್ಮನ್ನು ಜನಪ್ರತಿನಿಧಿಗಳು ಗುರುತಿಸುವಂತಾಗಿ ಸೂಕ್ತ ಸ್ಥಾನಮಾನಗಳು ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ಸಮುದಾಯದ ಮುಖಂಡರು ಬೆನ್ನೆಲುಬಾಗಿ ನಿಲ್ಲಬೇಕು ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮಡಿವಾಳ ಕಾಯಕ ಸಮುದಾಯ ಸಂಘಟನೆಯಾಗದಿದ್ದರೆ ಅಭಿವೃದ್ಧಿ ಕಷ್ಟವಾಗುತ್ತದೆ. ನಾನು ಶಾಸಕನಾಗಿದ್ದಾಗ ಮಡಿವಾಳ ಸಮುದಾಯದ ಅಭಿವೃದ್ಧಿಗೆ ಸಾಧ್ಯವಾದಷ್ಟು ಕೊಡುಗೆ ನೀಡಿದ್ದೇನೆ. ಈ ಹಿಂದೆ ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಿದ್ದರಿಂದ ಮಡಿವಾಳ ಸಮುದಾಯದವರು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸಲು ಅವಕಾಶ ದೊರಕಿತು ಎಂದು ತಿಳಿಸಿದರು.

ಅಂಬೇಡ್ಕರ್‌ವಾದಿ ಹರಿಹರ ಆನಂದಸ್ವಾಮಿ ಮಾತನಾಡಿ, ಧ್ವನಿ ಇಲ್ಲದೆ ಕಗ್ಗತ್ತಲಲ್ಲಿದ್ದ ಮಡಿವಾಳ ಸಮುದಾಯದಲ್ಲಿ ಇದೀಗ ಒಂದು ಸಣ್ಣ ಬೆಳಕು ಮೂಡಿದೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಚಿಂತನೆಗಳನ್ನು ಮೈಗೂಡಿಸಿಕೊಂಡು ಮೌಢ್ಯಕ್ಕೆ ಬಲಿಯಾಗದೆ ಸಂಘಟನೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಅಭಿವೃದ್ಧಿ ಹೊಂದಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಅಶೋಕಪುರಂ ದೊಡ್ಡಗರಡಿ ಅಧ್ಯಕ್ಷರೂ ಆದ ಕಾಂಗ್ರೆಸ್ ಯುವ ಮುಖಂಡ ಜೋಗಿ ಮಹೇಶ್, ಅಂಬೇಡ್ಕರ್‌ವಾದಿ ಹರಿಹರ ಆನಂದಸ್ವಾಮಿ, ಅಹಿಂದ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಜಿಪಂ ಮಾಜಿ ಸದಸ್ಯ ಹೆಚ್.ಸಿ. ಲಕ್ಷ್ಮಣ್, ನಾಯಕ ಹಿತ ರಕ್ಷಣಾ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಹುಣಸೂರು ಪ್ರಭಾಕರ್, ಸಮಾಜ ಸೇವಕರಾದ ಜಯರಾಜ್ ಹೆಗ್ಗಡೆ, ಸಿ.ಬಾಲಚಂದ್ರನ್, ಪತ್ರಕರ್ತ ಡಿ.ಎನ್.ಬಾಬು, ನಿವೃತ್ತ ಎಡಿಎಲ್‌ಆರ್ ಮಂಜುನಾಥ್, ಪಿಕೆಟಿಬಿ ಆಸ್ಪತ್ರೆಯ ಡಾ.ಪ್ರಶಾಂತ್, ಡಾ.ಪ್ರಸಾದ್ ವರುಣಾ ಕಾಂಗ್ರೆಸ್ ಮುಖಂಡ ಸಂತೋಷ್ ಕಿರಾಳು ಅವರನ್ನು ಅಭಿನಂದಿಸಲಾಯಿತು. ಬಳಿಕ ಮಡಿವಾಳ ಸಮುದಾಯದ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಯಿತು.

ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಅಧ್ಯಕ್ಷ ಸತ್ಯನಾರಾಯಣ, ಗೌರವಾಧ್ಯಕ್ಷ ಬಿ.ಜಿ.ಕೇಶವ ಹಾಗೂ ಜಿಲ್ಲಾ ಸಂಚಾಲಕ ಸಂತೋಷ್ ಕಿರಾಳು ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ರವಿಕುಮಾರ್, ಸಂಘದ ಪ್ರಧಾನ ಕಾರ್ಯದರ್ಶಿ ಕೆಂಪಶೆಟ್ಟಿ, ಉಪಾಧ್ಯಕ್ಷ ಕುರುಬೂರು ಮಹದೇವಸ್ವಾಮಿ, ಸಾಲಿಗ್ರಾಮ ಹರ್ಷವರ್ಧನ್, ಕೆ.ಆರ್.ನಗರ ಕೃಷ್ಣಯ್ಯ, ಸಿ.ಎಸ್.ಮಹೇಶ್, ರವಿ ಚಿಲ್ಕುಂದ, ಖಜಾಂಚಿ ರವಿಚಂದ್ರ, ಬಿಳಗಲಿ ಮಂಜು, ಬನ್ನೂರು ನಾಗರಾಜು, ಆಲಗೂಡು ಬಸವರಾಜು, ಶ್ರೀರಾಮ್ ಆರ್.ಚಿಕ್ಕಹೊನ್ನಶೆಟ್ಟಿ, ವೆಂಕಟೇಶ್ ಟಿ., ಮಹಿಳಾ ಜಿಲ್ಲಾಧ್ಯಕ್ಷೆ ವಸಂತಕುಮಾರಿ, ಪ್ರಧಾನ ಕಾರ್ಯದರ್ಶಿ ಜಯಲಕ್ಷ್ಮೀ, ಎಸ್.ಎಲ್.ಕುಮಾರ್, ಶಾಂತರಾಜು, ರಮೇಶ್, ಎಂ.ಎಂ.ವಿಶ್ವನಾಥ್, ಡಿ.ಟಿ. ರಾಜಣ್ಣ ಪಿ.ಗಿರೀಶ್, ರೇವಣ್ಣ, ಶ್ರೀನಿವಾಸ್, ಪಿ. ಮಹೇಶ್, ವೆಂಕಟೇಶ್, ಬಲರಾಮ, ಚಂದ್ರುಶೆಟ್ಟಿ, ಚಂದ್ರು, ರವಿ, ಕೆ.ರಾಘು ಹೊಸರಾಮನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಕೆ.ಆರ್.ಪೇಟೆ: ಲೋಕಾಯುಕ್ತ ಬಲೆಗೆ ಬಿದ್ದ ಪಿಡಿಒ, ಬಿಲ್ ಕಲೆಕ್ಟರ್




ಕೆ.ಆರ್.ಪೇಟೆ, ಆ.13– ಮನೆಯ ಇ-ಸ್ವತ್ತು ಮಾಡಿಕೊಡಲು ರೈತನಿಂದ 20 ಸಾವಿರ ರೂ. ಲಂಚ ಪಡೆಯುತ್ತಿದ್ದ ತಾಲೂಕಿನ ಮುರುಕನಹಳ್ಳಿ ಪಿಡಿಒ ಹಾಗೂ ಬಿಲ್ ಕಲೆಕ್ಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮುರುಕನಹಳ್ಳಿ ಗ್ರಾಮ ಪಿಡಿಒ ಸಯ್ಯದ್ ಮುಜಾಹಿದ್ ಹಾಗೂ ಬಿಲ್ ಕಲೆಕ್ಟರ್ ನಾಗೇಶ್ ಲೋಕಾಯುಕ್ತ ಬಲೆಗೆ ಬಿದ್ದವರು.

ವಿವರ: ಹೊನ್ನೇನಹಳ್ಳಿ ಗ್ರಾಮದ ನಿವಾಸಿಗಳಾದ ಕಾಂತರಾಜು ಮತ್ತು ದೇವರಾಜು ಅವರು ತಮ್ಮ ತಂದೆಯಿಂದ ಬಂದ ಮನೆ ಭಾಗ ಮಾಡಿಕೊಂಡು ವಿಭಾಗ ಪತ್ರ ಮಾಡಿಸಿಕೊಂಡಿದ್ದು, ಅದರಂತೆ ಖಾತೆ ಮಾಡಿ ಕೊಡುವಂತೆ ಕಾಂತರಾಜು ಅವರು ಜು.30 ರಂದು ಪಿಡಿಒ ಸಯ್ಯದ್ ಮುಜಾಹಿದ್ ಅವರಿಗೆ ಅರ್ಜಿ ಸಲ್ಲಿಸಿದ್ದರು. ಈ ವೇಳೆ ಖಾತೆ ಮಾಡಿಕೊಡಲು ಪಿಡಿಒ 50 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆ.4 ರಂದು ಮತ್ತೆ ಗ್ರಾಪಂಗೆ ಬಂದ ಕಾಂತರಾಜು ಅವರು 50ಸಾವಿರ ಕೊಡಲು ಸಾಧ್ಯವಿಲ್ಲ ಕಡಿಮೆ ಮಾಡುವಂತೆ ಮನವಿ ಮಾಡಿದ್ದರು. ಆಗ 40 ಸಾವಿರ ಕೊಡುವಂತೆ ಒಪ್ಪಂದವಾಗಿ 10 ದಿನದೊಳಗೆ 20 ಸಾವಿರ ಕೊಡುವುದಾಗಿ ಕಾಂತರಾಜು ತಿಳಿಸಿದ್ದರು.

ಪಿಡಿಒ ಅವರು ಲಂಚಕ್ಕೆ ಬೇಡಿಕೆ ಇಡುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡು ಬಂದಿದ್ದ ಕಾಂತರಾಜು ಅವರು ಮಂಡ್ಯ ಲೋಕಾಯುಕ್ತ ಎಸ್‌ಪಿ ಸುರೇಶ್‌ಬಾಬು ಅವರಿಗೆ ಈ ಸಂಬಂಧ ದೂರು ನೀಡಿದ್ದರು. ಇದರ ಆಧಾರದ ಮೇರೆಗೆ ಬುಧವಾರ ಮಧ್ಯಾಹ್ನ ರೈತ ಕಾಂತ ರಾಜು ಅವರಿಂದ 20 ಸಾವಿರ ರೂ. ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಇನ್ಸ್‌ಪೆಕ್ಟರ್ ಬಿ.ಪಿ. ಬ್ಯಾಟರಾಯ ಗೌಡ ನೇತೃತ್ವದ ಅಧಿಕಾರಿಗಳ ತಂಡ ಪಿಡಿಒ ಸಯ್ಯದ್ ಮುಜಾಹಿದ್ ಮತ್ತು ಬಿಲ್ ಕಲೆಕ್ಟರ್ ನಾಗೇಶ್ ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಸಿಬ್ಬಂದಿಗಳಾದ ಶಂಕರ್, ಸಿದ್ದಲಿಂಗಸ್ವಾಮಿ, ದಿನೇಶ್, ಶರತ್, ಮಹದೇವ್, ನವೀನ್, ಇಫ್ರಾನ್ ಮತ್ತಿತರರು ಭಾಗವಹಿಸಿದ್ದರು.

ಸೇವಾ ಕಾರ್ಯಗಳಿಂದ ಮಠಗಳ ಘನತೆ, ಗೌರವ ಹೆಚ್ಚಳ

ವಿಧಾನಸಭೆ ಉಪಸಭಾಪತಿ ರುದ್ರಪ್ಪಮಾನಪ್ಪ ಲಮಾಣಿ

ಚಿನಕುರಳಿ, ಆ.13– ಮಠಗಳನ್ನು ಆಸ್ತಿಗಳಿಂದ ಅಳೆಯಬಾರದು. ಅವುಗಳು ನಡೆಸುವ ಧಾರ್ಮಿಕ ಸೇವಾ ಕಾರ್ಯಗಳು ಮಠಗಳ ಘನತೆ, ಗೌರವ ಹೆಚ್ಚಿಸುತ್ತವೆ ಎಂದು ವಿಧಾನಸಭೆ ಉಪಸಭಾಪತಿ ರುದ್ರಪ್ಪಮಾನಪ್ಪ ಲಮಾಣಿ ತಿಳಿಸಿದರು.

ತಾಲೂಕಿನ ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ ಆವರಣದಲ್ಲಿ ನಡೆದ ಮಹಾತಪಸ್ವಿ, ಶತಾಯುಷಿ ಲಿಂಗೈಕ್ಯ ಶ್ರೀಮರಿದೇವರು ಶಿವಯೋಗಿ ಮಹಾಸ್ವಾಮೀಜಿಗಳ 17ನೇ ಪುಣ್ಯಸ್ಮರಣೆ ಹಾಗೂ 9ನೇ ವರ್ಷದ ಮಹಾರಥೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬೇಬಿ ಗ್ರಾಮದ ದುರ್ದಂಡೇಶ್ವರ ಮಠವು ಸೇವಾ ಕಾರ್ಯದಲ್ಲಿ ಮುಂದಿದೆ. ಮಠದ ಪೀಠಾಧ್ಯಕ್ಷ ತ್ರಿನೇತ್ರಮಹಂತ ಶಿವಯೋಗಿ ಸ್ವಾಮೀಜಿಗಳು ಕಷ್ಟದಲ್ಲಿದ್ದವರಿಗೆ ಸ್ಪಂದಿಸುವ, ಸಹಾಯ ಮಾಡುವ ಗುಣ ಮೈಗೂಡಿಸಿಕೊಂಡು ಮಠವನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಠದ ವತಿಯಿಂದ ಶಾಲೆ ತೆರೆದು ಮಕ್ಕಳಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದಾರೆ. ತಮ್ಮ ಹಿರಿಯ ಶ್ರೀಗಳ ಬಗ್ಗೆ ಅಪಾರ ಗುರುಭಕ್ತಿ, ಗೌರವ ಹೊಂದಿದ್ದಾರೆ ಎನ್ನುವುದಕ್ಕೆ ಇವರು ಪ್ರತಿವರ್ಷ ನಡೆಸುವ ಪುಣ್ಯಸ್ಮರಣೆ ಹಾಗೂ ರಥೋತ್ಸವ ಸಾಕ್ಷಿಯಾಗಿದೆ ಎಂದು ಬಣ್ಣಿಸಿದರು.

ವಿನಯ್ ಗುರೂಜಿ ಮಾತನಾಡಿ, ಸರ್ಕಾರದ ವ್ಯವಸ್ಥೆ ಮೊದಲೇ ಮಠಗಳು ವಿದ್ಯೆ, ಆಶ್ರಯ, ದಾಸೋಹ ನೀಡುತ್ತಿದ್ದವು ಎಂದ ಅವರು, ಮನುಷ್ಯನಲ್ಲಿರುವ ವಿಷವನ್ನು ಮಠಗಳು ಹೋಗಲಾಡಿಸುವ ಕೆಲಸ ಮಾಡುತ್ತಿವೆ. ಪ್ರಶಸ್ತಿ, ಗೌರವ, ಪುರಸ್ಕಾರಗಳು ವ್ಯಕ್ತಿಗೆ ಗೌರವ ತಂದು ಕೊಡುತ್ತವೆ. ಅದೇ ರೀತಿ ಕೆಲವು ಸಾಧಕ ವ್ಯಕ್ತಿಗಳಿಗೆ ನೀಡುವ ಪುರಸ್ಕಾರಗಳು ಪ್ರಶಸ್ತಿಗೆ ಗೌರವ ತಂದು ಕೊಡುತ್ತವೆ. ಇಂದು ಮಠದ ವತಿಯಿಂದ ನಿವೃತ್ತ ಐಎಎಸ್ ಅಧಿಕಾರಿಗಳಿಗೆ ನೀಡಿರುವ ಗೌರವ ಪ್ರಶಸ್ತಿಯು ಗೌರವ ಹೆಚ್ಚಿಸಿದೆ ಎಂದರು.



ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ದಯಾಶಂಕರ್ ಅವರನ್ನು ಸನ್ಮಾನಿಸಲಾಯಿತು.

> ಕಲ್ಲು ಮಂಟಪವನ್ನು ಮಠವನ್ನಾಗಿ ಬೆಳೆಸಿದ ಕೀರ್ತಿ ಶ್ರೀತ್ರಿನೇತ್ರ ಮಹಾಂತ ಸ್ವಾಮೀಜಿಗಳಿಗೆ ಸಲ್ಲುತ್ತದೆ. ಶ್ರೀಗಳು ಹಲವು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ನಡೆಸುವ ಜೊತೆಗೆ ನಿತ್ಯ ಸಮಾಜ ಸೇವೆಗಾಗಿ ಶ್ರಮಿಸುತ್ತಿದ್ದಾರೆ. ಸಮಾಜದ ಶ್ರೇಯಾಭಿವೃದ್ಧಿಗಾಗಿ ಶ್ರೀಗಳು ಪ್ರತಿವರ್ಷ ನವರಾತ್ರಿಯಂದು ಮೌನಾಚರಣೆ ನಡೆಸುತ್ತಾರೆ. ಜೊತೆಗೆ ಹೆಣ್ಣು ಮಕ್ಕಳಿಗೆ ಮಡಿಲಕ್ಕಿ ವಿತರಣೆ ಮಾಡುತ್ತಾರೆ. ಇದಕ್ಕಾಗಿ ಈ ಮಠವನ್ನು ಹೆಣ್ಣುಮಕ್ಕಳ ತವರು ಮಠವೆಂದು ಕರೆಯುತ್ತಾರೆ. ಅಲ್ಲದೆ ಕೇವಲ 2 ತಲೆಮಾರಿನ ಇತಿಹಾಸ ಹೊಂದಿರುವ ಚಂದ್ರವನ ಹಾಗೂ ಬೇಬಿ ಮಠವು ಹಲವು ದಶಕಗಳಲ್ಲಿ ಮಾಡಬಹುದಾದ ಸಾಧನೆ ಹಾಗೂ ಸೇವಾ ಕೆಲಸ ಕಾರ್ಯ ಮಾಡುವ ಮೂಲಕ ಭಕ್ತರಿಂದ ಮೆಚ್ಚುಗೆ ಪಡೆದಿದೆ. **–ಎಸ್.ದಯಾಶಂಕರ್, ನಿವೃತ್ತ ಐಎಎಸ್ ಅಧಿಕಾರಿ.**

ಉಪ ಸಭಾಪತಿಗಳ ಆಪ್ತ ಕಾರ್ಯದರ್ಶಿ ಡಾ. ಶ್ರೀಪಾದ ಮಾತನಾಡಿದರು. ಇದೇ ವೇಳೆ ಮಹಾ ಚೇತನ ಶ್ರೀಮರಿದೇವರು ಶಿವಯೋಗಿ ಜೀವನದಿ ರಾಷ್ಟ್ರೀಯ ಪ್ರಶಸ್ತಿಯನ್ನು ನಿವೃತ್ತ ಐಎಎಸ್ ಅಧಿಕಾರಿ ದಯಾಶಂಕರ್ ಅವರಿಗೆ ನೀಡಿ ಗೌರವಿಸಲಾಯಿತು. ಬಳಿಕ ಜೀಕನ್ನಡ ಸರಿಗಮಪ ವಿಜೇತೆ ಶಿವಾನಿ ಅವರನ್ನು ಅಭಿನಂದಿಸಲಾಯಿತು.

ಇದಕ್ಕೂ ಮುನ್ನ ಶ್ರೀಮರಿದೇವರು ಮಹಾಸ್ವಾಮೀಜಿಗಳ ರಥೋತ್ಸವ ನಡೆಯಿತು. ರಥೋತ್ಸವಕ್ಕೆ ಹಲವಾರು ಶ್ರೀಗಳು ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಇದಕ್ಕೂ ಮುನ್ನ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಗಮಿಸಿ ಮರಿದೇವರು ಮಹಾಸ್ವಾಮೀಜಿಗಳ ಗದ್ದುಗೆಗೆ ಪೂಜೆ ಸಲ್ಲಿಸಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಡಾ.ಶ್ರೀತ್ರಿನೇತ್ರಮಹಂತ ಶಿವಯೋಗಿ ಸ್ವಾಮೀಜಿ, ಶಿವಗಂಗಾ ಕ್ಷೇತ್ರದ ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ತಾಲೂಕು ಅಧ್ಯಕ್ಷ ಧನಂಜಯ್, ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಮಠದ ಕಾರ್ಯದರ್ಶಿ ಟಿ.ಪಿ.ಶಿವಕುಮಾರ್, ಆಡಳಿತಾಧಿಕಾರಿ ಚಿಕ್ಕ ತಿಮ್ಮಯ್ಯ, ವೀರಶೈವ ಲಿಂಗಾಯತ ಜಿಲ್ಲಾಧ್ಯಕ್ಷ ಎಸ್. ಆನಂದ್, ತಾಲೂಕು ಅಧ್ಯಕ್ಷ ಎಂ.ಶಿವಕುಮಾರ್, ಗ್ರಾಪಂ ಅಧ್ಯಕ್ಷೆ ಪುಟ್ಟಲಿಂಗಮ್ಮ, ಮಾಜಿ ಅಧ್ಯಕ್ಷರಾದ ಎಸ್.ಟಿ.ನಾಗಣ್ಣ, ಚಂದ್ರಶೇಖರಯ್ಯ, ಮಂಗಳಮ್ಮ, ಡಿ.ಸಿ.ಶಿವಕುಮಾರ್, ಪಿಡಿಒ ಪಿ.ಸಿ.ಕುಮಾರ್, ಕೆ.ಬಿ.ಶಿವರಾಮಯ್ಯ, ಅಮೃತರಾಜಶೇಖರ್ ಸೇರಿದಂತೆ ಹಲವರಿದ್ದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ಖಂಡಿಸಿ ಕರೆ ನೀಡಿದ್ದ

ಬಸರಾಳು ಹೋಬಳಿ ಕೇಂದ್ರ ಬಂದ್ ಯಶಸ್ವಿ

ಮಂಡ್ಯ, ಆ.13– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕುರುಬ ಸಮುದಾಯದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿಯಾಗಿ ನಿಂದಿಸಿದ್ದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾ ಕುರುಬರ ಸಂಘ, ಮಂಡ್ಯ ಜಿಲ್ಲಾ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಸ್ಥಳೀಯರು ಕರೆ ನೀಡಿದ್ದ ಬಸರಾಳು ಹೋಬಳಿ ಕೇಂದ್ರ ಬಂದ್ ಯಶಸ್ವಿಯಾಯಿತು.

ಬಸರಾಳು ಬಂದ್‌ಗೆ ವರ್ತಕರು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸ್ವಯಂ ಪ್ರೇರಿತರಾಗಿ ಬೆಂಬಲ ವ್ಯಕ್ತಪಡಿಸಿದರು. ಬಂದ್ ಹಿನ್ನಲೆಯಲ್ಲಿ ನಾಗಮಂಗಲ–ಮಂಡ್ಯ ಹೆದ್ದಾರಿ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಕಾಂಗ್ರೆಸ್ ಮುಖಂಡ ಕೋಡಿಕೊಪ್ಪಲು ನಾಗೇಶ್ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಕುರುಬ ಸಮುದಾಯದವರು ಬಂದ್‌ನಲ್ಲಿ ಭಾಗವಹಿಸಿ, ಬಸರಾಳು ಕನಕ ಭವನದಿಂದ ಪ್ರಮುಖ ವೃತ್ತದವರೆಗೆ ಬೃಹತ್ ಪ್ರತಿಭಟನೆ ಮೂಲಕ ಜೋಡಿ ಟಗರುಗಳ ಜೊತೆ ಮೆರವಣಿಗೆ ನಡೆಸಿದರು.



ಸಿಎಂ ಸಿದ್ದರಾಮಯ್ಯ, ಕುರುಬ ಸಮುದಾಯದ ವಿರುದ್ಧ ಹೇಳಿಕೆ ಖಂಡಿಸಿ ಬಸರಾಳಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಮುಖಂಡ ನಾಗೇಶ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುರುಬ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ನಿಂದಿಸಿರುವ ಬಸರಾಳು ಗ್ರಾಮದ ಹೇಮಾವತಿ ಬಡಾವಣೆಯ ಶಾನುಭೋಗನಹಳ್ಳಿ ಕುಮಾರ್ ಮತ್ತು ಬೆನ್ನಹಟ್ಟಿಯ ಮಹೇಶ್ ಅವರನ್ನು ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಬೇರೆ ಯಾರೂ ಸಹ ಯಾವ ಜಾತಿಯವರ ಬಗ್ಗೆಯೂ ಮಾತನಾಡಬಾರದು. ಬೇರೆಯವರಿಗೆ ಇದೊಂದು ಪಾಠ ಆಗುವ ರೀತಿ ಕಾನೂನು ಕ್ರಮ ಜರುಗಿಸಬೇಕು. ಬಸರಾಳು ಗ್ರಾಮದಲ್ಲಿ ಒಕ್ಕಲಿಗರು ಹಾಗೂ ಕುರುಬರು ವಿಶ್ವಾಸದಿಂದ ಇದ್ದೇವೆ. ಅವಹೇಳನಕಾರಿಯಾಗಿ ನಿಂದಿಸಿರುವ ಇಂತಹ ಕಿಡಿಗೇಡಿಗಳ ವಿರುದ್ಧ ನಾವು ಹೋರಾಟ ಮಾಡುತ್ತಿದ್ದೇವೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಕರಡಿಕೊಪ್ಪಲು ಕೆ.ಸಿ.ಪುಟ್ಟಸ್ವಾಮಿಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಸಮಾಜಕ್ಕೂ ನ್ಯಾಯ ಕೊಡುವವರು. ಅವರನ್ನು ಒಕ್ಕಲಿಗರ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಕುರುಬ ಸಮಾಜದಲ್ಲಿ ನಾವು ಸಂಗೊಳ್ಳಿರಾಯಣ್ಣ, ಕನಕದಾಸರ ಭಾವಚಿತ್ರ ನೋಡಿದ್ದೇವೆ. ಆದರೆ ಸಿದ್ದರಾಮಯ್ಯ ಅವರನ್ನು ಕುರುಬ ಸಮಾಜದ ದೇವರ ರೂಪದಲ್ಲಿ ಕಾಣುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಕುಮಾರ್ ಹಾಗೂ ಮಹೇಶ್ ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಅವರನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ನಂತರ ಪ್ರತಿಭಟನಾಕಾರರು ಬಸರಾಳು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಬಂಧಿತ ಆರೋಪಿಗಳ ಮೇಲೆ ಗೂಂಡಾ ಕಾಯ್ದೆ ತೆರೆಯುವಂತೆ ಒತ್ತಾಯಿಸಿ ಇಬ್ಬರು ಆರೋಪಿಗಳು ಬಹಿರಂಗ ಕ್ಷಮೆಯಾಚಿಸುವಂತೆ ಒತ್ತಾಯಿಸಿ ಗಡಿಪಾರು ಮಾಡಲು ಆಗ್ರಹಿಸಿದರು.

ಪ್ರತಿಭಟನಾಕಾರರ ಮನವೊಲಿಸಿದ ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ತಿಮ್ಮಯ್ಯ ಹಾಗೂ ಗಂಗಾಧರಸ್ವಾಮಿ ಅವರು ಬಂಧಿತ ಆರೋಪಿಗಳ ಮೇಲೆ ಈಗಾಗಲೇ ಗೂಂಡಾ ಆಕ್ಟ್ ಅಡಿ ಪ್ರಕರಣ ದಾಖಲಿಸಿರುವುದಾಗಿ ಮಾಹಿತಿ ನೀಡಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್. ಚಿದಂಬರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಅಪ್ಪಾಜಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪುಟ್ಟಸ್ವಾಮಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಕೆ.ಹೆಚ್. ನಾಗರಾಜು, ಎನ್.ದೊಡ್ಡಯ್ಯ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಮುಖಂಡರಾದ ಕೃಷ್ಣ, ರಾಜೇಶ್, ಪ್ರಸನ್ನ, ಸಿ.ಎಂ.ದ್ಯಾವಪ್ಪ, ಶಂಕರೇಗೌಡ, ರಾಜು, ಸಾವಿತ್ರಮ್ಮ, ಮಹೇಶ್, ಶೈಲೇಂದ್ರ ಸೇರಿದಂತೆ ಹಲವರಿದ್ದರು.

ಉಚಿತ ತರಬೇತಿ ಕೇಂದ್ರ ತೆರೆಯಿರಿ

ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಒತ್ತಾಯ



ಬಿಜೆಪಿ ಮುಖಂಡ ಸಚ್ಚಿದಾನಂದ ವಿದ್ಯಾರ್ಥಿನಿಗೆ ಲ್ಯಾಪ್‌ಟಾಪ್ ವಿತರಿಸಿದರು.

ಶ್ರೀರಂಗಪಟ್ಟಣ, ಆ.13– ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಸರ್ಕಾರವನ್ನು ಒತ್ತಾಯಿಸಿದರು.

ತಾಲೂಕಿನ ಪಿ.ಹೊಸಹಳ್ಳಿಯಲ್ಲಿ ಬುಧವಾರ ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಉಚಿತ ಸೀಟು ಪಡೆದಿರುವ ಗ್ರಾಮದ ಸಹದೇವ ಅವರ ಪುತ್ರಿ ಅಪೂರ್ವ ಅವರಿಗೆ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಲ್ಯಾಪ್‌ಟಾಪ್ ವಿತರಿಸಿ, ಅವರು ಮಾತನಾಡಿದರು.

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳಿಗೆ ತರಬೇತಿ ಪಡೆಯಲು ವಿದ್ಯಾರ್ಥಿಗಳು ಹೊರ ರಾಜ್ಯಗಳಿಗೆ ಹೋಗುತ್ತಿದ್ದಾರೆ. ದುಬಾರಿ ಶುಲ್ಕ ಪಾವತಿಸಿ ತರಬೇತಿ ಪಡೆಯಬೇಕಾದ ಸ್ಥಿತಿ ಇದೆ. ಆದರೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ಇದು ಕಷ್ಟವಾಗುತ್ತಿದೆ. ಹೀಗಾಗಿ ಸರ್ಕಾರ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಉಚಿತ ಪರೀಕ್ಷಾ ತರಬೇತಿ ಕೇಂದ್ರಗಳನ್ನು ಆರಂಭಿಸಬೇಕು ಎಂದು ಮನವಿ ಮಾಡಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅಪೂರ್ವ, ವೈದ್ಯಕೀಯ ಶಿಕ್ಷಣ ಕೋರ್ಸ್ ಮುಗಿಸಿ ಯುಪಿಎಸ್‌ಸಿ ಪರೀಕ್ಷೆ ಬರೆಯುವ ಗುರಿ ಇಟ್ಟುಕೊಂಡಿದ್ದೇನೆ. ಐಎಎಸ್ ಅಧಿಕಾರಿ ಆಗಬೇಕು ಎಂಬುದು ನನ್ನ ಮಹದಾಸೆ ಎಂದರು. ಗ್ರಾಪಂ ಸದಸ್ಯರಾದ ಸಾಗರ್, ಕೃಷ್ಣಾನಂದ, ಮಾಜಿ ಅಧ್ಯಕ್ಷ ಲಕ್ಷ್ಮಣ್, ವೈ.ಮಹದೇವು, ಚಂದ್ರಪ್ಪ, ರಾಮು, ರವಿ, ರಾಜು ಇತರರಿದ್ದರು

ಒಂದನೇ ಪುಟದಿಂದ

ಫೀಲ್ಡ್‌ಗಿಳಿಯಲಿದೆ ಅಕ್ಕ ಪಡೆ

ಕಿತ್ತೊಗೆಯಬೇಕಿದೆ. ಬಾಲ್ಯ ವಿವಾಹ ತಡೆ ತಿದ್ದುಪಡಿ ವಿಧೇಯಕ ತರುತ್ತಿದ್ದೇವೆ ಎಂದರು. ರಾಜ್ಯದಲ್ಲಿ ಬಾಲಗರ್ಭಿಣಿ ಪ್ರಕರಣಗಳು 2022–23ರಲ್ಲಿ 405, 2023–24ರಲ್ಲಿ 709, 2024–25ರಲ್ಲಿ 685 ಸರ್ಕಾರದ ಗಮನಕ್ಕೆ ಬಂದಿದೆ. ಜಿಲ್ಲೆಗೊಂದು ಮಕ್ಕಳ ರಕ್ಷಣಾ ಸಮಿತಿ ಇರಲಿದೆ, ಸಾಮಾಜಿಕ ಮಾಧ್ಯಮಕ್ಕೂ ಕಡಿವಾಣ ಹಾಕಬೇಕಿದೆ, ಕೆಲವು ಸಮುದಾಯಗಳಲ್ಲಿ ಬಾಲ್ಯ ವಿವಾಹ ಆಚರಣೆಯಲ್ಲಿದ್ದು, ಕಡಿವಾಣ ಹಾಕಲಾಗುತ್ತಿದೆ.

ಡಿಸಿ ಆಯ್ಕೆ ಸಮಿತಿ: ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ನೇಮಕ, ವರ್ಗಾವಣೆ/ಸ್ಥಾನಪಲ್ಲಟಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ನೇಮಕ ಮಾಡುತ್ತದೆ. ಸರ್ಕಾರ ಅಥವಾ ಸಚಿವರ ಹಸ್ತಕ್ಷೇಪ ಇಲ್ಲ ಎಂದರು. ಕಿರಣ್‌ಕುಮಾರ್ ಕೊಡ್ಗಿ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಗುಡ್ಡಗಾಡು ಜಿಲ್ಲೆಗಳಲ್ಲಿ ವರ್ಗಾವಣೆ ನಿಯಮ ಸಡಿಲಿಕೆ ಮಾಡಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗುತ್ತಿದೆ. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಮಾರ್ಗಸೂಚಿ ಪ್ರಕಾರ ನೇಮಕಾತಿ ಆಗದಿದ್ದರೆ ಲಿಖಿತ ರೂಪದಲ್ಲಿ ಸಚಿವರ ಗಮನಕ್ಕೆ ತಂದರೆ ಸರಿಪಡಿಸಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ ಎಂಬ ಸಲಹೆ ನೀಡಿದರು.

ವಿಧಾನಸೌಧ ರಕ್ಷಿಸಿ!

ನಾಯಿಗಳಿಗೆ ಬಿರಿಯಾನಿ ಹಾಕುವ ಬದಲು ಅವುಗಳನ್ನು ಸೆರೆಹಿಡಿಯಬೇಕು ಎಂದು ಆಗ್ರಹಿಸಿದರು. ಇದಕ್ಕೆ ದನಿಗೂಡಿಸಿದ ಬಿಜೆಪಿ ಸದಸ್ಯ ಎಸ್.ಸುರೇಶ್‌ಕುಮಾರ್, ಸುಪ್ರೀಂಕೋರ್ಟ್‌ನ ಆದೇಶ ಇಡೀ ದೇಶಕ್ಕೆ ಅನ್ವಯ. ಕೇವಲ 6 ತಿಂಗಳಲ್ಲಿ ಬೆಂಗಳೂರಿನಲ್ಲಿ 18 ಸಾವಿರ ನಾಯಿ ಕಡಿತದ ಪ್ರಕರಣ ದಾಖಲಾಗಿದೆ. 18 ಮಂದಿಗೆ ರೇಬಿಸ್ ತಗುಲಿದೆ. ಕೋರ್ಟ್ ಆದೇಶ ಬೆಂಗಳೂರು, ಮಂಗಳೂರು, ಮೈಸೂರು ಹಾಗೂ ಇತರ ನಗರಗಳಿಗೂ ಅನ್ವಯಿಸಬೇಕು ಎಂದರು. ವಿಧಾನಸೌಧಕ್ಕೂ ಅನ್ವಯಿಸಬೇಕು ಎಂದು ವಿಧಾನಸೌಧದ ಆವರಣದಲ್ಲಿ ನಾಯಿಗಳು ಓಡಾಡುತ್ತಿರುವುದನ್ನು ಉಲ್ಲೇಖಿಸಿ ಸ್ಪೀಕರ್ ಖಾದರ್ ಹೇಳಿದರು.

ತುಂಬಾ ಬೀದಿನಾಯಿಗಳಿವೆ. ನಾಯಿ ಕಡಿತದ ಎರಡು ಲಕ್ಷ ಪ್ರಕರಣಗಳು ವರದಿಯಾಗಿವೆ. ಇದು ಗಂಭೀರ ವಿಷಯ. ನಾಯಿಯ ಬಗ್ಗೆ ಕರುಣೆ ತೋರುವ ಟ್ವೀಟ್ ಒಂದನ್ನು ಮುಖ್ಯಮಂತ್ರಿ ಮಾಡಿದ್ದಾರೆ. ನಾಯಿ ಪ್ರೇಮಿಗಳ ಮನೆಯಲ್ಲಿ ಅವುಗಳನ್ನು ಬಿಡೋಣ ಎಂದು ಬಿಜೆಪಿಯ ಸಿ.ಎನ್ ಅಶ್ವತ್ಥನಾರಾಯಣ ಹೇಳಿದರು.

ಶಾಸಕರ ಭವನದಲ್ಲೂ ನಾಯಿಗಳ ಉಪಟಳವಿದ್ದು, ಬಾಗಿಲು ತೆರೆದಿಡಲಾಗುತ್ತಿಲ್ಲ. ಮ್ಯಾಟ್‌ಗಳ ಮೇಲೆ ಮೂತ್ರ ಮಾಡಿ, ಹೊರಗೆ ಬರದಂತಾಗಿದೆ ಎಂದು ಬಿಜೆಪಿಯ ಉಮಾನಾಥ ಕೋಟ್ಯಾನ್ ಹೇಳಿದರು. ನಾಯಿಗಳ ಪರ ಹಾಗೂ ವಿರೋಧವಾಗಿ ಶಾಸಕರು ಇದ್ದಾರೆ. ಹೀಗಾಗಿ ನಿರ್ಧರಿಸಲು ಆಗುತ್ತಿಲ್ಲ ಎಂದು ಖಾದರ್ ಈ ವೇಳೆ ಹೇಳಿದರು.

ದಯವಿಟ್ಟು, ವಿಧಾನಸೌಧ ಹಾಗೂ ಶಾಸಕರ ಭವನವನ್ನು ನಾಯಿಗಳಿಂದ ರಕ್ಷಿಸಿ ಎಂದು ಮನವಿ ಮಾಡಿದರು. ನಾಯಿಗಳು ಶಾಸಕರ ಭವನವನ್ನು ಪ್ರವೇಶಿಸದಂತೆ ವ್ಯವಸ್ಥೆ ಮಾಡಿ. ಅವುಗಳನ್ನು ಓಡಿಸಿ ಎಂದು ಬಿಜೆಪಿಯ ಎಚ್.ಕೆ.ಸುರೇಶ್ ಹೇಳಿದರು.

ಸಿಇಟಿ/ನೀಟ್ ಆಯ್ಕೆ ದಾಖಲೆಗೆ ಪರಿಷ್ಕೃತ ವೇಳಾಪಟ್ಟಿ

ಶುಲ್ಕ ಪಾವತಿಗೆ ಆ.14 ರಂದು ಸಂಜೆ 4ರವರೆಗೆ ಅವಕಾಶ ನೀಡಲಾಗಿದೆ. ಕಾಲೇಜಿಗೆ ವರದಿ ಮಾಡಿಕೊಳ್ಳಲು ಆ.15 ಕೊನೆ ದಿನ. ಈ ವೇಳಾಪಟ್ಟಿಯಲ್ಲಿ ಯಾವ ಬದಲಾವಣೆ ಇರುವುದಿಲ್ಲ. ದಿನಾಂಕ ಕೂಡ ವಿಸ್ತರಿಸುವುದಿಲ್ಲ.

ವೈದ್ಯಕೀಯಕ್ಕೆ ಆ.14ರಿಂದ ಆಯ್ಕೆ ದಾಖಲು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವವರಿಗೆ ಆಯ್ಕೆ ದಾಖಲಿಸಲು ಆ.14ರಂದು ಮಧ್ಯಾಹ್ನ 1 ಗಂಟೆಯಿಂದ ಲಿಂಕ್ ತೆರೆಯಲಾಗುವುದು. ಆ.16 ರವರೆಗೆ ಆಯ್ಕೆ ದಾಖಲಿಸಬಹುದು. ಶುಲ್ಕ ಪಾವತಿಸಲು ಆ.18 ಹಾಗೂ ಕಾಲೇಜಿಗೆ ವರದಿ ಮಾಡಿಕೊಳ್ಳಲು ಆ.19 ಕೊನೆ ದಿನ ಎಂದು ಅವರು ತಿಳಿಸಿದ್ದಾರೆ.

ಛಾಯ್ಸ್–1 ಆಯ್ಕೆ ಮಾಡಿದವರು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿ, ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಬಳಿಕ ಎಲ್ಲಾ ಮೂಲ ದಾಖಲೆಗಳ ಸಮೇತ ಸಂಬಂಧಪಟ್ಟ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಈ ಬಾರಿ ಮೂಲ ದಾಖಲೆಗಳ ಪರಿಶೀಲನೆ ಕಾಲೇಜು ಹಂತದಲ್ಲೇ ಆಗುತ್ತದೆ. ಹೀಗಾಗಿ ಕ್ಲೇಮ್ ಪ್ರಕಾರ ಮೂಲ ದಾಖಲೆಗಳನ್ನು ತೆಗೆದು ಕೊಂಡು ಹೋಗಬೇಕು. ದಾಖಲೆಗಳು ಸರಿ ಇವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವ ಜವಾಬ್ದಾರಿಯನ್ನು ಕಾಲೇಜುಗಳಿಗೆ ನೀಡಲಾಗಿದೆ.

ರಜೆ ಇಲ್ಲ: ಪ್ರವೇಶ ಪ್ರಕ್ರಿಯೆಗೆ ಸಮಯದ ಅಭಾವ ಇರುವ ಕಾರಣ ಎಲ್ಲಾ ರಜೆ ದಿನಗಳಂದೂ ಕಾಲೇಜುಗಳು ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಆಪ್ತ ಸಚಿವರ ಮೂಲಕ ಸಿಎಂ ಸಿದ್ದರಾಮಯ್ಯ ಮನವೊಲಿಕೆ

ಚುನಾವಣೆ ಮುಗಿಯುತ್ತಿದ್ದಂತೆ, ಸೆಪ್ಟೆಂಬರ್ ಕ್ರಾಂತಿಯನ್ನು ಆಗಸ್ಟ್‌ನಲ್ಲೇ ಮಾಡಲು ಹೊರಟಿದ್ದಾರೆ. ಸಚಿವ ಸ್ಥಾನದಿಂದ ವಜಾಗೊಳ್ಳುತ್ತಿದ್ದಂತೆ ರಾಜಣ್ಣ ತಮ್ಮ ಪುತ್ರನ ಮೂಲಕ ತಾವು ಪ್ರತಿನಿಧಿಸುವ ಮಧುಗಿರಿ ವಿಧಾನಸಭಾ ಕ್ಷೇತ್ರದ ಸದಸ್ಯತ್ವಕ್ಕೆ ರಾಜೀನಾಮೆ ಪತ್ರವನ್ನು ವಿಧಾನಸಭಾಧ್ಯಕ್ಷರಿಗೆ ತಲುಪಿಸುವಂತೆ ಕಳುಹಿಸಿದ್ದರು. ವಿಧಾನ ಪರಿಷತ್ ಸದಸ್ಯರೂ ಆಗಿರುವ ರಾಜಣ್ಣ ಪುತ್ರ ಪತ್ರವನ್ನು ಸಭಾಧ್ಯಕ್ಷರಿಗೆ ನೀಡದೆ, ಮುಖ್ಯಮಂತ್ರಿಯನ್ನು ಭೇಟಿ ಮಾಡಿ, ತಮ್ಮ ತಂದೆಯ ನಿರ್ಧಾರ ಮತ್ತು ಪತ್ರವನ್ನು ತಲುಪಿಸಿದರು.

ಪತ್ರ ಪಡೆದುಕೊಂಡ ಮುಖ್ಯಮಂತ್ರಿ, ಸಚಿವರಾದ ಸತೀಶ್ ಜಾರಕಿಹೊಳಿ, ಚಲುವರಾಯಸ್ವಾಮಿ ಹಾಗೂ ಡಾ.ಸುಧಾಕರ್ ಅವರನ್ನು ಕರೆಸಿಕೊಂಡು, ರಾಜಣ್ಣ ಪತ್ರದ ಬಗ್ಗೆ ಚರ್ಚೆ ನಡೆಸಿದರು. ನಂತರ ಪತ್ರವನ್ನು ಜಾರಕಿಹೊಳಿ ಅವರಿಗೆ ನೀಡಿ, ನೀವು ಮೂವರೂ ರಾಜಣ್ಣ ಮನೆಗೆ ತೆರಳಿ ಅವರ ಮನವೊಲಿಸಿ, ದುಡುಕುವುದು ಬೇಡ, ಮುಂದೆ ಬೇರೆ ಪರಿಣಾಮಗಳು ಬೀರಬಹುದು ಎಂದು ಹೇಳಿ. ನಾನು ಅವರ ಜೊತೆ ಮಾತನಾಡುವೆ ಎಂದು ತಿಳಿಸಿದ ನಂತರ ಸಚಿವರು, ರಾಜಣ್ಣ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಮಾಹಿತಿ ತಲುಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜಣ್ಣ, ನನ್ನನ್ನು ಸಂಪುಟದಿಂದ ಉಚ್ಚಾಟಿಸಲು, ಆ ಹಿರಿಯ ಮಂತ್ರಿಯೇ ಕಾರಣ, ಅಂತಹವರ ಜೊತೆ ಪಕ್ಷ ಮತ್ತು ಅಧಿವೇಶನದಲ್ಲೂ ಇರಲಾರೆ, ನನಗೆ ಯಾರ ಭಯವೂ ಇಲ್ಲ. ದೆಹಲಿಯವರ ಮುಖ ನೋಡಿ ಕ್ಷೇತ್ರದಲ್ಲಿ ನನಗೆ ಮತ ಹಾಕುವುದಿಲ್ಲ. ನಮ್ಮ ಕಾರ್ಯಕರ್ತರು, ಸ್ನೇಹಿತರು ವಿಧಾನಸಭೆಗೆ ಆಯ್ಕೆ ಮಾಡಿ ಕಳುಹಿಸಿದ್ದಾರೆ ಎಂದು ಒಂದಷ್ಟು ವಿಷಯಗಳನ್ನು ಸಚಿವರ ಮುಂದಿಟ್ಟಿದ್ದಾರೆ. ಡಾ.ಸುಧಾಕರ್, ಕೆಲವೊಂದು ವಿಷಯ ಪ್ರಸ್ತಾಪಿಸಿ, ರಾಜಣ್ಣ ಕೋಪ ಶಮನಗೊಳಿಸಿ, ರಾಜೀನಾಮೆ ಪತ್ರ ಹಿಂದೆ ಪಡೆದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದರು. ಇಷ್ಟಾದರೂ ರಾಜಣ್ಣ, ನನ್ನ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ, ಜಿಲ್ಲಾ ಸಹಕಾರಿ ಬ್ಯಾಂಕ್ ಚುನಾವಣೆ ನಂತರ ಜನರ ಮುಂದೆಯೇ ಎಲ್ಲವನ್ನೂ ಬಹಿರಂಗಪಡಿಸುತ್ತೇನೆ ಎಂದಿದ್ದಾರೆ.

> **ರಾಜಣ್ಣ ನಿಲುವಿಗೆ ಕೈ ಶಾಸಕ ಸಹಮತ**
>
> ಹಾಗೊಂದು ವೇಳೆ ಪ್ರತಿಕ್ರಿಯಿಸುವುದಾದರೆ, ಆ ಪಕ್ಷದಲ್ಲಿ ಇದ್ದುಕೊಂಡು ಮಾಡಬಾರದು ಎಂದಿದ್ದಾರೆ. ರಾಜಣ್ಣ ಪರಿಶಿಷ್ಟ ಸಮಾಜಕ್ಕೆ ಸೇರಿದ ನಾಯಕ. ಅಂತಹವರನ್ನು ಸಂಪುಟದಿಂದ ವಜಾಗೊಳಿಸಿದ್ದು ಸರಿಯಲ್ಲ. ಏನೇ ತಪ್ಪು ಮಾಡಿದ್ದರೂ ಕರೆಸಿ, ಚರ್ಚಿಸಬಹುದಿತ್ತು. ಮುಂದೆ ಈ ರೀತಿ ಮಾಡದಂತೆ ಬುದ್ಧಿವಾದ ಹೇಳಬಹುದಿತ್ತು. ಅದನ್ನು ಹೊರತುಪಡಿಸಿ ವಜಾಗೊಳಿಸುವ ತೀರ್ಮಾನ ಕೈಗೊಳ್ಳಬಾರದಿತ್ತು. ಈ ಕ್ರಮ ನನಗೆ ಸರಿ ಕಾಣಿಸಲಿಲ್ಲ. ಅವರು ಪರಿಶಿಷ್ಟ ಸಮುದಾಯಕ್ಕೆ ಸೇರಿದವರಾದರೂ ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಇದು ಸುಲಭವಲ್ಲ, ನಾನೂ ಅದೇ ರೀತಿ ಜನಪ್ರತಿನಿಧಿಯಾಗಿದ್ದೇನೆ ಎಂದರು.

ಕಸದ ತೊಟ್ಟಿ ಮಾಡಬೇಡಿ

ನಮ್ಮ ತಂದೆ ನೀರಾವರಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುವಾಗ ನಾನು ಶಾಲೆಗೆ ಹೋಗುತ್ತಿದ್ದೆ. ಹಾಗಾಗಿ ಅಲ್ಲಿನ ಪರಿಸರದ ಬಗ್ಗೆ ನನಗೆ ಚೆನ್ನಾಗಿ ಅರಿವಿದೆ. ಜೊತೆಗೆ ಮಂಡ್ಯ ಮತ್ತು ಮೈಸೂರು ಭಾಗದ ರೈತ ಸಂಘಟನೆಗಳ ಕಾರ್ಯಕರ್ತರೊಂದಿಗೆ ನಾನು ಸಂಪರ್ಕದಲ್ಲಿದ್ದು, ಅವರುಗಳ ಮೂಲಕವೂ ಸಮಗ್ರ ಮಾಹಿತಿ ಕಲೆ ಹಾಕಿರುವೆ. ಜಲಾಶಯದ ಪ್ರದೇಶ ವಾಸ್ತವವಾಗಿ ಪರಿಸರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಆದರೆ ಇದನ್ನು ಜಲ ಸಂಪನ್ಮೂಲ ಹಾಗೂ ಪ್ರವಾಸೋದ್ಯಮ ಇಲಾಖೆಗಳು ನಿರ್ವಹಣೆ ಮಾಡುತ್ತಿವೆ ಎಂದು ತಿಳಿಸಿದ್ದಾರೆ.


ಮಹನೀಯರ ಚಿಂತನೆಗೆ ತದ್ವಿರುದ್ಧ: ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಅವರು ನೈಸರ್ಗಿಕ ಪರಿಸರ ಸಂರಕ್ಷಿಸಿ, ಅಣೆಕಟ್ಟು ನಿರ್ಮಾಣ ಮಾಡಿದ್ದಾರೆ. ಈಗ ಕೆಆರ್‌ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಮಾಡುವುದು ನಾಲ್ವಡಿ ಹಾಗೂ ವಿಶ್ವೇಶ್ವರಯ್ಯ ಅವರ ಪರಿಕಲ್ಪನೆಗೆ ತದ್ವಿರುದ್ಧವಾಗಲಿದೆ. 500 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡುವ ವಾಹನಗಳ ಪಾರ್ಕಿಂಗ್ ಸ್ಥಳದಲ್ಲಿ ಪ್ಲಾಸ್ಟಿಕ್ ಮತ್ತು ಆಹಾರ ತ್ಯಾಜ್ಯಗಳನ್ನು ಭಾರೀ ಪ್ರಮಾಣದಲ್ಲಿ ಸಂಗ್ರಹವಾಗಲಿದೆ. ಇದರಿಂದ ಇಡೀ ಪ್ರದೇಶ ಅನೈರ್ಮಲ್ಯವಾಗಲಿದ್ದು, ಕಸದ ತೊಟ್ಟಿಯಾಗಿ ಮಾರ್ಪಡಲಿದೆ. ಭಾರೀ ಪ್ರಮಾಣದ ತ್ಯಾಜ್ಯವನ್ನು ಯಾವುದೇ ಸರ್ಕಾರಿ ಸಂಸ್ಥೆಗಳು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರತಿಕೂಲ ಪರಿಣಾಮ: ಕೆಆರ್‌ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣವಾದರೆ ಐತಿಹಾಸಿಕ ಶ್ರೀರಂಗಪಟ್ಟಣ ಹಾಗೂ ಸಾಂಸ್ಕೃತಿಕ ನಗರಿ ಮೈಸೂರಿನ ಮೇಲೂ ನಾನಾ ರೀತಿಯಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಈ ಬಗ್ಗೆ ಅರಿವಿದ್ದ ಕಾರಣದಿಂದಲೇ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಅವರು ಇಂತಹ ಯೋಜನೆ ಕೈಗೊಳ್ಳುವ ದುಸ್ಸಾಹಸ ಮಾಡಲಿಲ್ಲ ಎಂದೆನಿಸುತ್ತದೆ.

ವರದಿ ಬಹಿರಂಗಪಡಿಸಲಿ: ಕೆಆರ್‌ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ವಾದರೆ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಪ್ರವಾಸೋದ್ಯಮ ಇಲಾಖೆ ಅಧ್ಯಯನ ನಡೆಸಿದೆ. ಆದರೆ, ಆ ವರದಿಯನ್ನು ಸರ್ಕಾರ ಬಹಿರಂಗಗೊಳಿಸಿಲ್ಲ. ಏನೇ ಮಾಡಿದರೂ ಇದನ್ನು ಹೆಚ್ಚು ಸಮಯ ಗೌಪ್ಯವಾಗಿಡಲು ಸಾಧ್ಯವಾಗುವುದಿಲ್ಲ. ಒಂದಲ್ಲಾ ಒಂದು ದಿನ ಅಧ್ಯಯನದ ವರದಿ ಬಹಿರಂಗಗೊಳ್ಳಲಿದೆ. ಪರಿಸರದ ಮೇಲೆ ವ್ಯಾಪಕ ಪರಿಣಾಮ ಬೀರುತ್ತದೆ ಎಂಬುದನ್ನು ಮನಗಂಡು, ಸಾರ್ವಜನಿಕರ ಹಿತಾಸಕ್ತಿಯಿಂದ ಸರ್ಕಾರ ಈ ಯೋಜನೆಯನ್ನು ರದ್ದುಪಡಿಸಬಹುದೆಂದು ಆಶಿಸಿದ್ದೇನೆ ಎಂದು ಪ್ರೊ.ಚಂದ್ರಶೇಖರ್ ಪ್ರವಾಸೋದ್ಯಮ ಸಚಿವರಿಗೆ ಬರೆದಿರುವ ಪತ್ರದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಿಎಸ್‌ಆರ್‌ಟಿಐ ನಿರ್ದೇಶಕಿಯಾಗಿ ಡಾ.ಪಿ.ದೀಪಾ ನೇಮಕ

ಮೈಸೂರು, ಆ.13(ಎಸ್‌ಪಿಎನ್)–ಮೈಸೂರಿನ ಕೇಂದ್ರ ರೇಷ್ಮೆ ಕೃಷಿ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ (ಸಿಎಸ್‌ಆರ್‌ಟಿಐ) ನೂತನ ನಿರ್ದೇಶಕಿಯಾಗಿ ಡಾ.ಪಿ.ದೀಪಾ ಅವರನ್ನು ನೇಮಕ ಮಾಡಲಾಗಿದೆ. ರೇಷ್ಮೆ ಹುಳು ಬೀಜದ ಪ್ರಮುಖ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾದ ರಾಷ್ಟ್ರೀಯ ರೇಷ್ಮೆ ಹುಳು ಬೀಜ ಸಂಸ್ಥೆ (ಎನ್‌ಎಸ್‌ಎಸ್‌ಓ) ಅಡಿಯಲ್ಲಿ ವಿವಿಧ ಘಟಕಗಳಲ್ಲಿ ಡಾ.ದೀಪಾ ಅವರು ಕಳೆದ 35 ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. 2030ರ ವೇಳೆಗೆ ಪ್ರಸ್ತುತ ದೇಶವು 41,121 ಮೆಟ್ರಿಕ್ ಟನ್‌ಗಳಿಂದ 50 ಸಾವಿರ ಮೆಟ್ರಿಕ್ ಟನ್ ಕಚ್ಚಾ ರೇಷ್ಮೆಯ ವಾರ್ಷಿಕ ಉತ್ಪಾದನೆಯನ್ನು ತಲುಪುವ ಗುರಿಯತ್ತ ಸಾಗುವಾಗ, ಮಲ್ಬೆರಿ ಮತ್ತು ರೇಷ್ಮೆಹುಳು ಉತ್ಪಾದಕತೆಯನ್ನು ಸುಧಾರಿಸಲು ಕ್ಷೇತ್ರ–ಆಧಾರಿತ ಸಂಶೋಧನಾ ಯೋಜನೆಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು ಅವರ ಆದ್ಯತೆಗಳಲ್ಲಿ ಸೇರಿದೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.



ಮಲ್ಬೇರಿ ಮತ್ತು ರೇಷ್ಮೆಗೂಡು ಉತ್ಪಾದನಾ ಪ್ರಕ್ರಿಯೆಗಳಿಂದ ಉಪ–ಉತ್ಪನ್ನ ಅಭಿವೃದ್ಧಿಯ ಮೂಲಕ ಮೌಲ್ಯವರ್ಧನೆಯೊಂದಿಗೆ ಪಾಲುದಾರರಿಗೆ ಕಡಿಮೆ–ವೆಚ್ಚದ, ಪರಿಸರ ಸ್ನೇಹಿ ಮತ್ತು ಬಳಕೆದಾರ ಸ್ನೇಹಿ ತಂತ್ರಜ್ಞಾನಗಳ ಅಭಿವೃದ್ಧಿಯು ಸಹ ಪ್ರಮುಖ ಆದ್ಯತೆಯ ಕ್ಷೇತ್ರವಾಗಿದೆ ಎಂದು ತಿಳಿಸಿದ್ದಾರೆ.

2 ಹುಲಿ ಪ್ರತ್ಯಕ್ಷ

ಇಂದು ಅಲೋಕ ಕಡೆಯಿಂದ ಮೈಸೂರಿನತ್ತ ಬರುತ್ತಿದ್ದ ಆನಂದ್ ಎಂಬುವರು ಈ ಹುಲಿಗಳನ್ನು ಕಂಡು ಬೆವರಿದ್ದಾರೆ. ಒಂದು ರಸ್ತೆಯನ್ನು ಹಾದು ಅರಣ್ಯ ಪ್ರವೇಶಿಸಿದರೆ, ಮತ್ತೊಂದು ರಸ್ತೆ ಬದಿ ಕೆಲ ಕಾಲ ನಿಂತು ಭಯ ಹುಟ್ಟಿಸಿದೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರು ಬೆಚ್ಚಿಬಿದ್ದಿದ್ದಾರೆ. ಮೈಸೂರು ಹೊರವಲಯದ ವರ್ಣ ಹಾಗೂ ಮಹದೇವಪುರ ರಸ್ತೆಯ ಆಜುಬಾಜಿನಲ್ಲಿ ಹುಲಿಯೊಂದು ಪ್ರತ್ಯಕ್ಷವಾಗಿ ಆತಂಕ ಮೂಡಿಸಿತ್ತು. ಈ ಹುಲಿ ಸೆರೆ ಕಾರ್ಯಾಚರಣೆ ನಡೆದರೂ ಪತ್ತೆಯಾಗಿರಲಿಲ್ಲ. ಅಲ್ಲಿಗೆ ಹುಲಿಯ ಭಯಕ್ಕೆ ತೆರೆಬಿದ್ದಿತ್ತು. ಆದರೆ, ಈಗ ನಗರ ಹೊರವಲಯದಲ್ಲಿ ಎರಡು ಹುಲಿಗಳು ಕಾಣಿಸಿಕೊಂಡಿರುವುದರಿಂದ ಅಭಯಾರಣ್ಯವನ್ನು ತೊರೆದು ಹುಲಿಗಳು ಜನವಸತಿ ಪ್ರದೇಶಗಳಿಗೆ ವಲಸೆ ಹೋಗುತ್ತಿರುವ ಆತಂಕ ಶುರುವಾಗಿದೆ. ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ಜನರಲ್ಲಿ ಉಂಟಾಗಿರುವ ಭೀತಿಯನ್ನು ದೂರ ಮಾಡಬೇಕಿದೆ.

ಬಿ–ಖಾತಾ ನೀಡುವ ಕಾರ್ಯ ಆರಂಭ

ಇದು ದೇಶದಲ್ಲೇ ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆ ಸಂಗ್ರಹಿಸಿದ ಅತೀ ಹೆಚ್ಚು ತೆರಿಗೆಯಾಗಿದೆ. ಈ ಹಣವನ್ನು ರಾಜ್ಯದ ಎಲ್ಲಾ ಪಂಚಾಯ್ತಿಗಳ ಅಭಿವೃದ್ಧಿಗೆ ಬಳಕೆ ಮಾಡಲಾಗುತ್ತದೆ. ಇ–ಸ್ವತ್ತು ಸಮಸ್ಯೆಗಳ ಸುಧಾರಣೆಗೆ ಸಮಿತಿ ರಚಿಸಲಾಗಿದೆ. ಅಲ್ಲದೆ ದಿಶಾಂಕ ಆಪ್ ಲೋಪದೋಷಗಳನ್ನು ಗಮನಕ್ಕೆ ತಂದರೆ ಸರಿಪಡಿಸಲಾಗುವುದು ಎಂದು ಸಚಿವರು ತಿಳಿಸಿದರು.

ರಾಜ್ಯದ ಎಲ್ಲಾ ಪಂಚಾಯ್ತಿಗಳಲ್ಲೂ ಮೈಕ್ರೋಗ್ರಿಡ್ ಪರಿಕಲ್ಪನೆ ಜಾರಿಗೆ ತಂದು ವಿದ್ಯುತ್ ಖರೀದಿಸಲಾಗುವುದು. ಮೈಕ್ರೋಗ್ರಿಡ್ ವಿನೂತನ ಯೋಜನೆಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಟೆಂಡರ್ ಕರೆಯಲಾಗಿದೆ. ಯೋಜನೆಯಡಿ ಬೀದಿದೀಪ, ಪಂಚಾಯ್ತಿ ಕಚೇರಿಗಳಿಗೆ ವಿದ್ಯುತ್ ಬಳಕೆ ಮಾಡಿ ಉಳಿದ ವಿದ್ಯುತ್ ಅನ್ನು ಗ್ರಿಡ್‌ಗೆ ಒಪ್ಪಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕೆರೆ ಅಂಗಳ ಖಾತೆ ಮಾಡಿಕೊಡಲಾಗದು

ಅರ್ಜಿ ಸಲ್ಲಿಸಬಹುದಾಗಿದೆ. ಅಧಿಕಾರಿಗಳು ಪರಿಶೀಲಿಸಿ ರದ್ದುಪಡಿಸುತ್ತಾರೆ. ಈ ಸಂಬಂಧದ ತಿದ್ದುಪಡಿ ಕಾಯ್ದೆಗೆ ರಾಷ್ಟ್ರಪತಿಗಳ ಅಂಕಿತ ದೊರೆತಿದೆ. ನಿಯಮಗಳನ್ನು ರೂಪಿಸಲಾಗುತ್ತಿದೆ. ಈ ತಿಂಗಳಲ್ಲಿ ಅಂತಿಮಗೊಳಿಸಲಾಗುವುದು, ನಕಲಿ ದಾಖಲೆ ಸೃಷ್ಟಿಸಿ ನೋಂದಣಿ ಮಾಡಿರುವುದಕ್ಕೆ ತಕ್ಷಣಕ್ಕೆ ಪರಿಹಾರ ಸಿಗಲಿದೆ. ಪ್ರಸ್ತುತ ಈ ರೀತಿ ನೋಂದಣಿಯಾದರೆ ಸಿವಿಲ್ ಕೋರ್ಟ್ ಮೊರೆ ಹೋಗಬೇಕಿತ್ತು ಎಂದು ಹೇಳಿದರು.

ಹಳೆಯ ದಾಖಲೆ ನೀಡಿ ನೋಂದಣಿ ಮಾಡಿರುವ ಮಾಹಿತಿ ಇದೆ. ತಪ್ಪಿತಸ್ಥರನ್ನು ಹುಡುಕುವುದಕ್ಕಿಂತ ತಪ್ಪಿಗೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುವುದು, ನಕಲಿ ನೋಂದಣಿ ತಪ್ಪಿಸುವ ಉದ್ದೇಶದಿಂದ ನೋಂದಣಿ ತಿದ್ದುಪಡಿ ವಿಧೇಯಕ ತರಲಾಗಿದೆ ಎಂದು ಸ್ಪಷ್ಟಪಡಿಸಿದರು.

ಬೇಲ್ ಭವಿಷ್ಯ

ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸದ್ಯ ಸುಪ್ರೀಂಕೋರ್ಟ್‌ನಲ್ಲಿ ಜಾಮೀನಿಗೆ ಸಂಬಂಧಿಸಿ ವಿಚಾರಣೆ ನಡೆದು, ಜುಲೈ 24, 2025ರಂದು ತೀರ್ಪನ್ನು ಕಾಯ್ದಿರಿಸಿ, ಕನಿಷ್ಠ 10 ದಿನಗಳ ಬಳಿಕ ತೀರ್ಪು ಪ್ರಕಟವಾಗುವುದಾಗಿ ಕೋರ್ಟ್ ತಿಳಿಸಿತ್ತು. ಈಗ, ತಾತ್ಕಾಲಿಕವಾಗಿ ಸುಪ್ರೀಂಕೋರ್ಟ್ ನಾಳಿನ ಕಲಾಪದಲ್ಲಿ ಈ ಪ್ರಕರಣ ಲಿಸ್ಟ್ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಒಂದು ವೇಳೆ ಜಾಮೀನು ರದ್ದಾದರೆ, ನಟ ದರ್ಶನ್ ಸೇರಿದಂತೆ ಆರೋಪಿಗಳು ಮತ್ತೆ ಜೈಲು ಸೇರ ಬೇಕಾಗಬಹುದು. ಜಾಮೀನು ಮುಂದುವರಿದರೆ ನಟ ದರ್ಶನ್‌ಗೆ ತಾತ್ಕಾಲಿಕ ರಿಲೀಫ್ ಸಿಗಲಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದೊಂದಿಗೆ ನಾವಿದ್ದೇವೆ....

ಮೈಸೂರಲ್ಲಿ ಸಾವಿರಾರು ಭಕ್ತಾದಿಗಳ ಜನಾಗ್ರಹ ಜಾಥಾ

●ವ್ಯವಸ್ಥಿತ ಸಂಚುರೂಪಿಸಿ, ಅಪಪ್ರಚಾರಕ್ಕೆ ಖಂಡನೆ ●ಎಸ್ಐಟಿ ತನಿಖೆ ಪಾರದರ್ಶಕವಾಗಿರಲಿ



ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ವೀರೇಂದ್ರ ಹೆಗ್ಗಡೆ ಅವರ ಕುಟುಂಬಕ್ಕೆ ಕಳಂಕ ತರಲು ಒಳಸಂಚು ರೂಪಿಸಿ, ಷಡ್ಯಂತರ ನಡೆಸುತ್ತಿರುವವರ ವಿರುದ್ಧ ಸೂಕ್ತ ತನಿಖೆಗೆ ಆಗ್ರಹಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಅಭಿಮಾನಿಗಳ ವೇದಿಕೆ ನೇತೃತ್ವದಲ್ಲಿ ಬೃಹತ್ ಜನಾಗ್ರಹ ಜಾಥಾ ನಡೆಸಲಾಯಿತು.

ಮೈಸೂರು, ಆ.13(ಎಂಕೆ)– 'ಧರ್ಮಸ್ಥಳ'ದೊಂದಿಗೆ ನಾವಿದ್ದೇವೆ.... ಹಿಂದೂ ದೇವಾಲಯಗಳನ್ನು ರಕ್ಷಿಸಿ... ಶ್ರೀ ಕ್ಷೇತ್ರದ ರಕ್ಷಣೆ ನಮ್ಮೆಲ್ಲರ ಹೊಣೆ... ಉದ್ಘೋಷ ಮೈಸೂರಿನಲ್ಲಿ ಮೊಳಗಿತು.

ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ವೀರೇಂದ್ರ ಹೆಗ್ಗಡೆ ಅವರ ಕುಟುಂಬಕ್ಕೆ ಕಳಂಕ ತರಲು ಒಳಸಂಚು ರೂಪಿಸಿ, ಷಡ್ಯಂತರ ನಡೆಸುತ್ತಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ, ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಸಾವಿರಾರು ಭಕ್ತಾದಿಗಳು ಜನಾಗ್ರಹ ಜಾಥಾ ನಡೆಸಿ ಪ್ರತಿಭಟಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಅಭಿಮಾನಿಗಳ ವೇದಿಕೆ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಜನಾಗ್ರಹ ಜಾಥಾ ಹಿನ್ನಲೆಯಲ್ಲಿ ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾ ಶಿಕ್ಷಕರ ಸದನ ಆವರಣದಲ್ಲಿ ಪಕ್ಷಾತೀತವಾಗಿ ಜಮಾವಣೆಗೊಂಡ ಅಪಾರ ಭಕ್ತ ಸಮೂಹ, ಹೊಸ ಜಿಲ್ಲಾಧಿಕಾರಿ ಕಚೇರಿವರೆಗೆ ಶ್ರೀ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡುವವರ ವಿರುದ್ಧ ಧಿಕ್ಕಾರ ಕೂಗುತ್ತಾ ಎಸ್ಐಟಿ ತನಿಖೆ ಪಾರದರ್ಶಕವಾಗಿರಲಿ... ಧರ್ಮಸ್ಥಳ ಕ್ಷೇತ್ರ ಉಳಿಸಿ... ವೀರೇಂದ್ರ ಹೆಗಡೆ ಅವರೊಂದಿಗೆ ನಾವಿದ್ದೇವೆ ಎಂಬ ಘೋಷಣೆ ಮೊಳಗಿಸಿದರು.

ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಸುಮಾರು 800 ವರ್ಷಗಳ ಇತಿಹಾಸವುಳ್ಳ ಶ್ರೀ ಕ್ಷೇತ್ರ ಧರ್ಮಸ್ಥಳ 'ದಕ್ಷಿಣ ಕಾಶಿ' ಎಂದೇ ನಾಮಾಂಕಿತವಾಗಿದೆ. ರಾಜ್ಯದಲ್ಲಷ್ಟೇ ಅಲ್ಲದೇ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಹೀಗೆ ದೇಶದ ಬೇರೆ ಬೇರೆ ಕಡೆಗಳಿಂದ ಪ್ರತಿನಿತ್ಯ ಶ್ರೀ ಮಂಜುನಾಥ ಸ್ವಾಮಿ ದರ್ಶನ ಪಡೆಯಲು ಸುಮಾರು 50 ಸಾವಿರದಿಂದ ಲಕ್ಷ ಭಕ್ತರು ಆಗಮಿಸುತ್ತಾರೆ. ಇಂತಹ ಶ್ರೀ ಕ್ಷೇತ್ರ ಧರ್ಮಸ್ಥಳ ದೇವಾಲಯವನ್ನು ಗುರಿಯಾಗಿಸಿಕೊಂಡು ಯಾವುದೇ ದಾಖಲೆಗಳಿಲ್ಲದೆ ನಿರಂತವಾಗಿ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುತ್ತಿರುವುದರಿಂದ ಶ್ರೀ ಕ್ಷೇತ್ರದ ಕೋಟ್ಯಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುತ್ತಿದ್ದು, ಸಮಾಜದಲ್ಲಿ ಉದ್ವಿಗ್ನತೆ ಮತ್ತು ಶಾಂತಿಭಂಗಕ್ಕೆ ಕಾರಣವಾಗಬಹುದು ಎಂದು ಎಚ್ಚರಿಸಿದರು.

ಅನಾಮಿಕ ವ್ಯಕ್ತಿಯೋರ್ವ ನೀಡಿದ ದೂರಿನ ಆಧಾರದಲ್ಲಿ ರಾಜ್ಯ ಸರಕಾರವು 'ವಿಶೇಷ ತನಿಖಾ(ಎಸ್ಐಟಿ)ತಂಡ' ರಚಿಸಿ ತನಿಖೆ ನಡೆಸುತ್ತಿರುವುದನ್ನು ಶ್ರೀ ಕ್ಷೇತ್ರದ ಭಕ್ತವೃಂದ ಗೌರವದಿಂದ ಸ್ವಾಗತಿಸಲಿದೆ. ಆದರೆ, ಅನಾಮಿಕ ದೂರುದಾರನನ್ನು ಬಳಸಿಕೊಂಡು ಶ್ರೀ ಕ್ಷೇತ್ರದ ಬಗ್ಗೆ ದಿನಕ್ಕೊಂದು ರೀತಿಯಲ್ಲಿ ತಮ್ಮ ಯೂಟ್ಯೂಬ್, ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲತಾಣದ ಮೂಲಕ ಸುಳ್ಳು ಮಾಹಿತಿಗಳನ್ನು ಬಿತ್ತರಿಸಿ ಭಕ್ತರಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ಇಂತಹ ಸುಳ್ಳು ಸುದ್ದಿಗಳು ಸಮೂಹ ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಏನೂ ಸಿಗಲ್ಲ!: ಬಳಿಕ ಭಕ್ತರನ್ನುದ್ದೇಶಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸರ್ವರ ಕ್ಷೇಮ ಬಯಸುವ ಧರ್ಮಸ್ಥಳ ಕ್ಷೇತ್ರದ ವಿಚಾರದಲ್ಲಿ ಸಂಚು ರೂಪಿಸಲಾಗುತ್ತಿದ್ದು, ಸಜ್ಜನರು ಷಡ್ಯಂತರ ನಡೆಸುವವರ ವಿರುದ್ಧ ಎದ್ದು ನಿಲ್ಲಬೇಕಿದೆ. ಕಳೆದ 25 ವರ್ಷಗಳಿಂದಲೂ ಶ್ರೀ ಕ್ಷೇತ್ರದೊಂದಿಗೆ ಕೆಲಸ ಮಾಡುತ್ತಿದ್ದೇನೆ. ಸಮಾಜದಲ್ಲಿ ತುಳಿತಕ್ಕೊಳಗಾದವರ ಶ್ರೇಯೋಭಿವೃದ್ಧಿಗಾಗಿ ಹಲವು ಯೋಜನೆಗಳ ರೂಪಿಸಿಕೊಂಡು ಬಂದಿರುವ ಶ್ರೀ ಕ್ಷೇತ್ರ, ಲಕ್ಷಾಂತರ ಜನರ ಬದುಕಿಗೆ ಆಸರೆಯಾಗಿದೆ. ಕಮ್ಯೂನಿಸ್ಟ್ ಮನೋಭಾವದ ಕ್ಷುಲ್ಲಕ ಶಕ್ತಿಗಳು ಷಡ್ಯಂತರ ಮಾಡುತ್ತಿವೆ. ಧರ್ಮಸ್ಥಳದಲ್ಲಿ ಹದಿನೈದು ಅಲ್ಲ ನೂರು ಗುಂಡಿ ತೋಡಿದರು ಏನೂ ಸಿಗಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಎಸ್ಐಟಿ ರಚಿಸಿ, ತಪ್ಪಿತಸ್ಥರ ಪತ್ತೆ ಹಚ್ಚಲು ಮುಂದಾಗಿದೆ ಎಂದರು.

ನಾವೆಲ್ಲರೂ ಧರ್ಮಸ್ಥಳದ ಪರ: ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಧರ್ಮಸ್ಥಳ ಪರವಾಗಿ ನಾವೆಲ್ಲರೂ ಪಕ್ಷಾತೀತ ಮತ್ತು ಜಾತ್ಯಾತೀತವಾಗಿ ಸೇರಿದ್ದೇವೆ. ಧರ್ಮಸ್ಥಳ ಪುಣ್ಯ ಮತ್ತು ಪವಿತ್ರ ಕ್ಷೇತ್ರ. ಕೋಟಿ ಕೋಟಿ ಭಕ್ತ ಸಮೂಹವೇ ಧರ್ಮಸ್ಥಳ ಪರವಾಗಿದೆ. ಅಂತಹದರಲ್ಲಿ ಇಲ್ಲ ಸಲ್ಲದ ಅಪಾದನೆ ಮಾಡುತ್ತಿರುವುದು ಹೀನ ಕೆಲಸವಾಗಿದೆ. ಅಲ್ಲಿ ಅತ್ಯಾಚಾರ, ಕೊಲೆ ಆಗಿದೆ ಎಂದು ದುರುದ್ದೇಶ ಇಟ್ಟುಕೊಂಡು ಅಪಪ್ರಚಾರ ಮಾಡಲಾಗುತ್ತಿದೆ. ಸಾವಿರಾರು ದೇವಸ್ಥಾನಗಳ ಜೀರ್ಣೋದ್ಧಾರ, ಸ್ವಸಹಾಯ ಸಂಘದ ಮೂಲಕ ಕೋಟ್ಯಾಂತರ ಮಹಿಳೆಯರಿಗೆ ಶ್ರೀ ಕ್ಷೇತ್ರ ನೆರವಾಗಿದೆ. ಸದ್ಯ ನಡೆಯುತ್ತಿರುವ ತನಿಖೆಯಿಂದ ಸತ್ಯಾಂಶ ಹೊರಬರಲಿ. ಯಾರೆ ತಪ್ಪು ಮಾಡಿದ್ದರು ಶಿಕ್ಷೆಯಾಗಲಿ ಎಂದು ಹೇಳಿದರು.

ಧರ್ಮಸ್ಥಳ ಅಂಟಿರುವ ಕಳಂಕ ಕೊನೆಗಾಣಿಸಿ: ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾತನಾಡಿ, ಧರ್ಮಸ್ಥಳಕ್ಕೆ ಅಂಟಿರುವ ಕಳಂಕ ಕೊನೆಗೊಳಿಸಿ ಶ್ರೀ ಕ್ಷೇತ್ರದ ಪಾವಿತ್ರತೆ ಹಾಗೂ ಘನತೆಯನ್ನು ಕಾಪಾಡಬೇಕಿದೆ. ಹಿಂದೂಗಳ ಧಾರ್ಮಿಕ ಕೇಂದ್ರವಾಗಿರುವ ಧರ್ಮಸ್ಥಳದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವಿವಾದಗಳು ಕೇಳಿಬಂದಿರುವುದು ಆ ಕ್ಷೇತ್ರದ ಭಕ್ತರಲ್ಲಿ ಆತಂಕ ಉಂಟು ಮಾಡಿದೆ. ಪರ ವಿರೋಧಗಳ ಪ್ರಚಾರ ಹೆಚ್ಚಾಗಿವೆ. ಸತ್ಯಾಸತ್ಯತೆ ನಾಡಿನ ಜನರಿಗೆ ತಿಳಿಸಬೇಕು. ನೊಂದವರಿಗೆ ನ್ಯಾಯ ಸಿಗಬೇಕು. ಭಕ್ತರ ಭಾವನೆಗೆ ಧಕ್ಕೆಯಾಗುವುದು ತಪ್ಪಿಸಬೇಕು. ಧರ್ಮಾಧಿಕಾರಿಗಳ ತೇಜೋವಧೆ ನಿಲ್ಲಬೇಕು ಹಾಗೂ ಧರ್ಮಸ್ಥಳದ ಪಾವಿತ್ರತೆ ರಕ್ಷಿಸಬೇಕು ಎಂದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್, ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ಹಿಂದೂ ಪುಣ್ಯಕ್ಷೇತ್ರಗಳ ರಕ್ಷಣಾ ಸಮಿತಿ ಸಂಚಾಲಕ ಮೈ.ಕಾ. ಪ್ರೇಮ್‌ಕುಮಾರ್, ಬಿಜೆಪಿ ಮುಖಂಡರಾದ ಡಾ.ಹೇಮಾ ನಂದೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿಚಾರಣೆಗೊಳಪಡಿಸಬೇಕು...!

ಕುಮಾರಿ ಸೌಜನ್ಯಾಳಿಗೆ ನ್ಯಾಯ ದೊರಕಿಸುವುದಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಮೇಲೆ ಸಮರ ಸಾರಿರುವ ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ, ಸಮೀರ್, ಎಂ.ಡಿ.ಸಂತೋಷ್ ಶೆಟ್ಟಿ, ಜಯಂತ್ ಟಿ, ಅಜಯ್ ಅಂಚನ್ ಇವರುಗಳು ಷಡ್ಯಂತ್ರ ಹಾಗೂ ಅಪಪ್ರಚಾರ ಮಾಡುತ್ತಿರುವುದರ ಹಿನ್ನೆಲೆ ಏನು?, ಇವರು ಸುಳ್ಳು ಆರೋಪ ಮಾಡಲು ಪ್ರಚೋದಿಸುತ್ತಿರುವವರು ಯಾರು? ಈ ತಂಡಕ್ಕೆ ಹಣಕಾಸಿನ ನೆರವು ಎಲ್ಲಿಂದ ಬರುತ್ತಿದೆ. ಎಂಬುದನ್ನು ತಿಳಿಯಲು ಸೂಕ್ತ ತನಿಖೆ ನಡೆಸಬೇಕಾಗಿದೆ. ತಮ್ಮ ಮೊಬೈಲ್‌ನಲ್ಲಿ ಸಾಕ್ಷಿಗಳಿವೆ ಎಂದು ವೇದಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಘಂಟಾ ಘೋಷವಾಗಿ ಭಾಷಣ ಮಾಡುತ್ತಿರುವ ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ, ಸಮೀರ್ ಎಂ.ಡಿ, ಸಂತೋಷ್ ಶೆಟ್ಟಿ, ಜಯಂತ್ ಟಿ, ಅಜಯ್ ಅಂಚನ್ ಅವರನ್ನು ವಿಚಾರಣೆಗೆ ಒಳಪಡಿಸಿ ಸತ್ಯಾಸತ್ಯತೆಯನ್ನು ಬಯಲಿಗೆಳೆಯಬೇಕಾಗಿದೆ. ಈ ನಿಟ್ಟಿನಲ್ಲಿ ಈಗಿರುವ ಎಸ್ಐಟಿ ತಂಡ ಅಥವಾ ಇನ್ನೊಂದು ತನಿಖಾ ತಂಡವನ್ನು ರಚಿಸಿ ತಕ್ಷಣ ತನಿಖೆಯನ್ನು ಕೈಗೊಳ್ಳಬೇಕೆಂದು ಜನಾಗ್ರಹ ಜಾಥಾ ವೇಳೆ ಕರಪತ್ರಗಳನ್ನು ಹಂಚಲಾಯಿತು.

ಸಹಿ ಸಂಗ್ರಹ ಅಭಿಯಾನ...

ಜನಾಗ್ರಹ ಜಾಥದ ವೇಳೆ ಹಿಂದೂ ಪುಣ್ಯಕ್ಷೇತ್ರಗಳ ರಕ್ಷಣಾ ಸಮಿತಿ ವತಿಯಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಧರ್ಮಸ್ಥಳ ಮತ್ತು ಡಾ.ವೀರೇಂದ್ರ ಹೆಗ್ಗಡೆ ಅವರ ಕುಟುಂಬದ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

"ದೂರದಾರನ ದೂರಿನ ಮೇರೆಗೆ ರಾಜ್ಯ ಸರ್ಕಾರ ಎಸ್ಐಟಿ ರಚನೆ ಮಾಡಿದೆ. ಅನಾಮಿಕ ವ್ಯಕ್ತಿ ಹೇಳಿದಂತೆ ಸ್ಥಳಗಳೆಲ್ಲವನ್ನೂ ಈಗಾಗಲೇ ಪರಿಶೀಲನೆ ನಡೆಸಲಾಗುತ್ತಿದ್ದು, ಆತ ಹೇಳಿದಂತಹ ಸ್ಥಳಗಳಲ್ಲಿ ಏನೂ ಸಿಕ್ಕಿಲ್ಲ. ಕಾನೂನಾತ್ಮಕವಾಗಿ ತನಿಖೆ ಇನ್ನೇನು ಮುಕ್ತಾಯ ಹಂತದಲ್ಲಿದೆ. ಅಲ್ಲದೆ ಸುಳ್ಳು ಹೇಳಿಕೆ ಕೊಟ್ಟು ದಾರಿತಪ್ಪಿಸಿದ ಅನಾಮಿಕ ಮತ್ತು ಆತನೊಂದಿಗೆ ಇರುವವರ ವಿರುದ್ಧ ಪ್ರಕರಣ ದಾಖಲಿಸಿ, ಕಾನೂನು ಕ್ರಮ ತೆಗೆದುಕೊಳ್ಳಬೇಕು.

–ಓ ಶ್ಯಾಂ ಭಟ್, ಖ್ಯಾತ ವಕೀಲ

ಕರ್ನಾಟಕ ಸೇನಾ ಪಡೆಯಿಂದ ಪ್ರತಿಭಟನೆ



ಕರ್ನಾಟಕ ಸೇನಾ ಪಡೆ ವತಿಯಿಂದ ಹಳೇ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.13(ಎಂಕೆ)– ಧರ್ಮಸ್ಥಳದಲ್ಲಿ ನೂರಾರು ಶವ ಸಂಸ್ಕಾರ ಮಾಡಲಾಗಿದೆ ಎಂಬುದನ್ನು ಮುಂದಿಟ್ಟುಕೊಂಡು ಶ್ರೀ ಕ್ಷೇತ್ರದ ಮಂಜುನಾಥಸ್ವಾಮಿ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಅಪಪ್ರಚಾರ ಮಾಡುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಧರ್ಮಸ್ಥಳ ನಮ್ಮ ರಾಜ್ಯದ ಪ್ರತಿಷ್ಠಿತ, ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರ. ನಿತ್ಯ ಲಕ್ಷಾಂತರ ಭಕ್ತಾದಿಗಳು ಭೇಟಿ ನೀಡುತ್ತಾರೆ. ಭಕ್ತಾದಿಗಳಲ್ಲಿ ಕೆಲವರು ಸ್ನಾನ ಮಾಡುವಾಗ ನೇತ್ರಾವತಿ ನದಿಯಲ್ಲಿ ಕಾಲು ಜಾರಿ ಬಿದ್ದು ಮೃತರಾಗಿರಬಹುದು. ಕೆಲವರು ಜೀವನದಲ್ಲಿ ಜಿಗುಪ್ಸೆಗೊಂಡು, ಇನ್ನೂ ಕೆಲವರು ಇಲ್ಲಿ ಸತ್ತರೆ ಮುಕ್ತಿ ಸಿಗತ್ತದೆಂದು ಆತ್ಮಹತ್ಯೆ ಮಾಡಿಕೊಂಡಿರಬಹುದು. ಇದನ್ನೇ ನೆಪವಾಗಿಟ್ಟುಕೊಂಡು ಕೆಲವರು, ಶ್ರೀ ಕ್ಷೇತ್ರಕ್ಕೆ, ಧರ್ಮಾಧಿಕಾರಿಗಳಿಗೆ ಕೆಟ್ಟ ಹೆಸರು ತಂದು ನಮ್ಮ ಹಿಂದೂ ಧರ್ಮವನ್ನು, ಧಾರ್ಮಿಕ ಕ್ಷೇತ್ರವನ್ನು ಹಾಳು ಮಾಡಲು ವ್ಯವಸ್ಥಿತ ಸಂಚು ರೂಪಿಸಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಎಸ್ಐಟಿ ತಂಡ ಅನಾಮಿಕ ವ್ಯಕ್ತಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ನಿಜ ತಿಳಿಯಬೇಕು ಹಾಗೂ ಶ್ರೀ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಿ, ಕಪ್ಪು ಮಸಿ ಬಳಿಯಲು ಪ್ರಯತ್ನಿಸುತ್ತಿರುವ ವ್ಯಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಖಂಡರಾದ ಗೋಲ್ಡನ್ ಸುರೇಶ್, ಪ್ರಭುಶಂಕರ್, ಸಿಂಧುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಮಧುವನ ಚಂದ್ರು, ವರಕೂಡು ಕೃಷ್ಣೇಗೌಡ, ಶಿವಲಿಂಗಯ್ಯ, ನೇಹಾ, ಮಹದೇವಸ್ವಾಮಿ, ಪದ್ಮ, ಹೊನ್ನೇಗೌಡ, ಡಾ. ಶಾಂತರಾಜೇ ಅರಸ್, ನಾರಾಯಣ ಗೌಡ, ಹನುಮಂತಯ್ಯ, ರಾಧಾಕೃಷ್ಣ, ನಾಗರಾಜು, ಸುಬ್ಬೇಗೌಡ, ರಘು ಅರಸ್, ನಂದಕುಮಾರ್, ಅಶೋಕ್, ಬಸವರಾಜು, ಕುಮಾರ್, ಗೀತಾ ಗೌಡ, ಎಳನೀರು ರಾಮಣ್ಣ, ದರ್ಶನ್ ಗೌಡ, ಪ್ರದೀಪ್, ಭಾನುಪ್ರಕಾಶ್, ರವಿ ನಾಯಕ್, ರವೀಶ್, ಪ್ರಭಾಕರ್, ವಿಷ್ಣು ಉಪಸ್ಥಿತರಿದ್ದರು.

ಆ.21, 22ಕ್ಕೆ ಖರೀದಿಗಾರರ–ಮಾರಾಟಗಾರರ ಸಭೆ

ಮೈಸೂರು,ಆ.13(ಜಿಎ)–ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ), ಮೈಸೂರು ವಲಯವು ಆ.21 ಮತ್ತು 22ರಂದು ಮೈಸೂರಿನ ಜಗನ್ನಾಥ ಕಲೆ ಮತ್ತು ಸಂಸ್ಕೃತಿ ಕೇಂದ್ರದಲ್ಲಿ 'ಇಂಟಿಗ್ರೇಟ್ 2025' ಎಂಬ ಎರಡು ದಿನಗಳ ಖರೀದಿದಾರ–ಮಾರಾಟಗಾರರ ಸಭೆ, ಕೈಗಾರಿಕಾ ಪ್ರದರ್ಶನ ಮತ್ತು ತಾಂತ್ರಿಕ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಸಿಐಐ ಮೈಸೂರು ವಲಯದ ಅಧ್ಯಕ್ಷ ನಾಗರಾಜ್ ಗರ್ಗೇಶ್ವರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.21ರ ಮಧ್ಯಾಹ್ನ 3ಕ್ಕೆ ಉದ್ಘಾಟನೆ, 22ರ ಸಂಜೆ 6.30ಕ್ಕೆ ಸಮಾರೋಪ ನಡೆಯಲಿದ್ದು, ಕೈಗಾರಿಕಾ ಇಲಾಖೆ ಹಿರಿಯ ಅಧಿಕಾರಿಗಳು, ಕೆಲ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಇಂಟಿಗ್ರೇಟ್ 2025 ಎಂಎಸ್ಎಂಇಗಳನ್ನು ಸಬಲೀಕರಣಗೊಳಿಸುವ, ಸ್ಥಳೀಯ ಮೂಲಗಳನ್ನು ಉತ್ತೇಜಿಸುವ ಮತ್ತು ಪರಿಸರ ವ್ಯವಸ್ಥೆಯಾದ್ಯಂತ ಸಹಯೋಗವನ್ನು ಬೆಳೆಸುವ ಮೂಲಕ ವ್ಯವಹಾರ ಸುಸ್ಥಿರತೆಯನ್ನು ಸಕ್ರಿಯಗೊಳಿಸುವ ಸಿಐಐ ಮೈಸೂರಿನ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಈ ವೇದಿಕೆಯು ಕೈಗಾರಿಕೆಗಳು ಕಾರ್ಯತಂತ್ರದ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಪಾಲುದಾರಿಕೆಗಳನ್ನು ಅನ್ವೇಷಿಸಲು ಸಹಾಯ ಮಾಡುತ್ತದೆ ಎಂದರು.

ಸಮ್ಮೇಳನದಲ್ಲಿ ಕರ್ನಾಟಕ ಮತ್ತು ಅಕ್ಕಪಕ್ಕದ ರಾಜ್ಯಗಳಿಂದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಖರೀದಿದಾರರಿಂದ ಬೇಡಿಕೆಯನ್ನು ಪ್ರಾದೇಶಿಕ ಪೂರೈಕೆದಾರರ ಸಾಮರ್ಥ್ಯಗಳೊಂದಿಗೆ ಸಂಪರ್ಕಿಸುವ ಮೂಲಕ, ನಾವೀನ್ಯತೆ, ಡಿಜಿಟಲೀಕರಣ ಮತ್ತು ಸುಸ್ಥಿರತೆಯನ್ನು ಪ್ರೋತ್ಸಾಹಿಸುವ ಮೂಲಕ ಸಮಗ್ರ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸಲು ಸಹಕಾರಿಯಾಗಲಿದೆ. ತಾಂತ್ರಿಕ ಅವಧಿಗಳಲ್ಲಿ ಭಾಗವಹಿಸಲು ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ. ಇದರಲ್ಲಿ ಅನುಭವಿ ಕೈಗಾರಿಕಾ ಮುಖಂಡರು ಮತ್ತು ವಿಷಯ ತಜ್ಞರು ಎಂಎಸ್ಎಂಇ ಬೆಳವಣಿಗೆ, ನಾವೀನ್ಯತೆ ಮತ್ತು ಸ್ಪರ್ಧಾತ್ಮಕತೆಯ ಪ್ರಮುಖ ಕ್ಷೇತ್ರಗಳ ಕುರಿತು ಒಳನೋಟಗಳನ್ನು ಹಂಚಿಕೊಳ್ಳುತ್ತಾರೆ ಎಂದು ತಿಳಿಸಿದರು.

ಈ ವರ್ಷದ ಕಾರ್ಯಕ್ರಮವು ರೀ–ಇಂಟಿಗ್ರೇಟ್ ಅನ್ನು ಪ್ರಾರಂಭಿಸುವುದನ್ನು ಸಹ ಒಳಗೊಂಡಿರುತ್ತದೆ. ಇದು ವಿರಾಮದ ನಂತರ ತಮ್ಮ ವೃತ್ತಿ ಜೀವನವನ್ನು ಪುನರಾರಂಭಿಸುವಲ್ಲಿ ಅರ್ಹ ಮತ್ತು ಅನುಭವಿ ಮಹಿಳೆಯರನ್ನು ಬೆಂಬಲಿಸುವ ಗುರಿಯನ್ನು ಹೊಂದಿರುವ ಸಾಮಾಜಿಕ ಉಪಕ್ರಮವಾಗಿದೆ ಮತ್ತು ಅದೇ ಸಮಯದಲ್ಲಿ, ಸ್ಥಳೀಯ ಎಂಎಸ್ಎಂಇಗಳಿಗೆ ಪರಿಣಾಮಕಾರಿಯಾಗಲಿದ್ದು, ಹೆಚ್ಚಿನ ಮಾಹಿತಿಗಾಗಿ 85533–95747 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಸ್ಯಾಮ್ ಚೆರಿಯನ್, ಸೋಲೋಮನ್ ಪುಷ್ಪರಾಜ್, ಸಂತೋಷ್ ರೆಡ್ಡಿ, ಆರ್.ಪ್ರಶಾಂತ್ ಉಪಸ್ಥಿತರಿದ್ದರು.

2ನೇ ದಿನವೂ ಮುಂದುವರೆದ ಆಶಾ ಕಾರ್ಯಕರ್ತೆಯರ ಧರಣಿ




ಮೈಸೂರಿನ ಗಾಂಧಿ ವೃತ್ತದ ಬಳಿ ಅಹೋರಾತ್ರಿ ಧರಣಿ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು

ಮೈಸೂರು, ಆ.13(ಎಂಕೆ)– ಕೇಂದ್ರ ಸರ್ಕಾರದ ಪ್ರೋತ್ಸಾಹ ಧನ ಒಳಗೊಂಡಂತೆ ಮಾಸಿಕ 10 ಸಾವಿರ ರೂ. ಗೌರವ ಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ 2ನೇ ದಿನವೂ ಮುಂದುವರೆಯಿತು.

ನಗರದ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡಿರುವ ಆಶಾ ಕಾರ್ಯಕರ್ತೆಯರು ಕೊಟ್ಟ ಮಾತಿನಂತೆ ನಡೆದುಕೊಳ್ಳದ ರಾಜ್ಯ ಸರ್ಕಾರದ ನಡೆ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು. ಕನಿಷ್ಠ 10ಸಾವಿರ ರೂ. ಕಡ್ಡಾಯವಾಗಿ ನಿಗದಿಯಾಗಬೇಕು. ಬಿಸಿಯೂಟ ಕಾರ್ಯಕರ್ತೆಯರಿಗೆ ನೀಡಿದ 1 ಸಾವಿರ ರೂ. ಪ್ರೋತ್ಸಾಹ ಧನವನ್ನು ಆಶಾ ಕಾರ್ಯಕರ್ತೆಯರಿಗೂ ನೀಡಬೇಕು. ನಗರ ಆಶಾ ಕಾರ್ಯಕರ್ತೆಯರಿಗೆ 2 ಸಾವಿರ ಗೌರವ ಧನ ಹೆಚ್ಚಿಸಬೇಕು. ನಿವೃತ್ತರಾದವರಿಗೆ ಪಶ್ಚಿಮ ಬಂಗಾಳದಂತೆ ಇಡುಗಂಟು ನೀಡಬೇಕು ಎಂದು ಒತ್ತಾಯಿಸಿದರು.

2ನೇ ದಿನ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿಗೆ ಬೆಂಬಲ ನೀಡಿದ ರೈತ ಮುಖಂಡರು, ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಆಶಾ ಕಾರ್ಯಕರ್ತೆರನ್ನು ವಂಚಿಸಿರುವುದು ಖಂಡನೀಯ. ರೈತ ಸಂಘಟನೆಗಳು ಸದಾ ಆಶಾ ಕಾರ್ಯಕರ್ತೆಯರ ಸೇವೆಯನ್ನು ಶ್ಲಾಘಿಸಿ, ಬೆಂಬಲ ನೀಡಲಿದೆ ಎಂದರು. ರೈತ ಮುಖಂಡರಾದ ಹೊಸಕೋಟೆ ಬಸವರಾಜು, ಕೆಂಚಲೂರು ಮಾರಕಯ್ಯ, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಮೈಸೂರು ನಗರ ಸಲಹೆಗಾರರಾದ ಜಿ.ಎಸ್.ಸೀಮಾ, ಜಿಲ್ಲಾಧ್ಯಕ್ಷ ಭಾಗ್ಯ, ಉಪಾಧ್ಯಕ್ಷೆ ಮಣಿಲಾ, ಕಾರ್ಯದರ್ಶಿ ಮಂಜುಳಾ ಮತ್ತಿತರರಿದ್ದರು.

ಹಣ್ಣು ಹಂಪಲು ವಿತರಣೆ...



ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಪ್ರಯುಕ್ತವಾಗಿ ಜಯಲಕ್ಷ್ಮಿ ಪುರಂ ಹೆರಿಗೆ ಆಸ್ಪತ್ರೆಯ ಬಾಣಂತಿಯರಿಗೆ ಬ್ರೆಡ್, ಹಣ್ಣು–ಹಂಪಲು ವಿತರಿಸಲಾಯಿತು. ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಆಸ್ಪತ್ರೆಯ ಆಡಳಿತಾಧಿಕಾರಿ ಕೆಂಪೇಗೌಡ, ಮೈಸೂರು ನಗರದ ಯುವ ಕಾಂಗ್ರೆಸ್ ಉಪಾಧ್ಯಕ್ಷ ನವೀನ್, ಉಪಾಧ್ಯಕ್ಷ ಸಂಜಯ, ಪ್ರಧಾನ ಕಾರ್ಯದರ್ಶಿ ಚಂದ್ರು, ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರತಾಪ್, ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಜೀವನ್, ಚಂದನ್, ಮೋಹನ್ ಗಣಪತಿ, ಕಿರಣ್, ಲೋಹಿತ್ ರಾಮಣ್ಣ ಹಾಗೂ ಮುಖಂಡರು ಉಪಸ್ಥಿತರಿದ್ದರು.

ರೈತ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ



ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.13(ಎಂಕೆ)– ಕ್ವಿಟ್ ಇಂಡಿಯಾ ಚಳುವಳಿ ಸ್ಮರಣಾರ್ಥ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಗಾಂಧಿ ಸರ್ಕಲ್‌ನಲ್ಲಿ ಜಮಾವಣೆಗೊಂಡ ರೈತ ಮುಖಂಡರು, 'ಬಹುರಾಷ್ಟ್ರೀಯ ಕಂಪನಿಗಳೇ ದೇಶ ಬಿಟ್ಟು ತೊಲಗಿ' ಘೋಷಣೆಯಡಿ ಕೇಂದ್ರ ಸರ್ಕಾರ ರೈತರನ್ನು ಕಡೆಗಣಿಸಿ, ವಿದೇಶಿ ಕಾರ್ಪೋರೇಟ್ ಕಂಪನಿಗಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಜಗದೀಶ್, ಸೂರ್ಯ ಕಂದೇಗಾಲ, ಶ್ರೀನಿವಾಸ್, ಜವರಯ್ಯ, ಉಗ್ರನರಸಿಂಹೇಗೌಡ, ಪ್ರಭಾಕರ್, ಗಣೇಶ್, ಬಸಪ್ಪ ನಾಯಕ, ಜಯರಾಮ್ ಮತ್ತಿತರರಿದ್ದರು.

ಬುದ್ಧ ಗಯಾ ಮಹಾವಿಹಾರ ಬೌದ್ಧರ ಆಡಳಿತಕ್ಕೆ ಒಳಪಡಿಸಲು ಆಗ್ರಹಿಸಿ ಪ್ರತಿಭಟನೆ



ಟೌನ್‌ಹಾಲ್ ಬಳಿ ಅಂಬೇಡ್ಕರ್ ಪ್ರತಿಮೆ ಎದುರು ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.13(ಎಂಕೆ)– 1949ರ ಬುದ್ಧಗಯಾ ಟೆಂಪಲ್ ಕಾಯ್ದೆ(ಬಿಟಿ ಆಕ್ಟ್) ರದ್ದುಗೊಳಿಸಿ, ಬುದ್ಧ ಗಯಾ ಮಹಾಭೋದಿ ಮಹಾವಿಹಾರವನ್ನು ಸಂಪೂರ್ಣ ಬೌದ್ಧರ ಆಡಳಿತಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಬುದ್ಧಗಯಾ ಮಹಾ ಭೋದಿ ಮಹಾವಿಹಾರ ಮುಕ್ತಿ ಆಂದೋಲನ ಸಮಿತಿ ಸಹಯೋಗದೊಂದಿಗೆ ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಟೌನ್‌ಹಾಲ್ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಸಾಮ್ರಾಟ ಅಶೋಕ ಸ್ಥಾಪಿಸಿದ ಬುದ್ಧಗಯಾ ಮಹಾವಿಹಾರವು ಜಗತ್ ಪ್ರಸಿದ್ಧವಾಗಿದ್ದು, ಬೌದ್ಧರಿಗೆ ಪ್ರವಿತ್ರ ಯಾತ್ರಾ ಸ್ಥಳವಾಗಿದೆ. ಸಾವಿರಾರು ವರ್ಷ ಬೌದ್ಧರ ಆಡಳಿತದಲ್ಲೇ ಇದ್ದ ಬುದ್ಧಗಯಾ 1949ರ ನಂತರ ಅನ್ಯ ಧರ್ಮಿಯರ ಆಡಳಿತದಲ್ಲಿದೆ.

ದೇಶದಲ್ಲಿರುವ ಬೌದ್ಧ ಸ್ಮಾರಕಗಳನ್ನು ಬೌದ್ಧರ ಕೈಗೆ ಬರಬೇಕಾದರೆ, ಬುದ್ಧ ಗಯಾ ಆಡಳಿತ ಮಂಡಳಿ ಸದಸ್ಯರೆಲ್ಲರೂ ಬೌದ್ಧರೆ ಆಗಬೇಕು. ಅದಕ್ಕಾಗಿ ನಾಲ್ವರು ಹಿಂದೂಗಳು, ನಾಲ್ವರು ಬೌದ್ಧರನ್ನೊಳಗೊಂಡ 1949ರ ಬಿಟಿ ಕಾಯ್ದೆ ಕೂಡಲೆ ರದ್ದಾಗಬೇಕು ಎಂದು ಆಗ್ರಹಿಸಿದರು. ನಳಂದ ಬುದ್ಧವಿಹಾರದ ಬೋಧಿದತ್ತ ಬಂತೇಜಿ, ಡಾ.ಆಕಾಶ್ ಲಾಮ, ಮಾಜಿ ಮೇಯರ್ ಪುರುಷೋತ್ತಮ್, ಎಂ.ಮಂಜುನಾಥ್ ಮತ್ತಿತರರಿದ್ದರು.

ಸಂಸ್ಕೃತ ದಿನಾಚರಣೆ...



ಸಂಸ್ಕೃತ ಮಾಸದ ಪ್ರಯುಕ್ತ ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಸಭಾಂಗಣದಲ್ಲಿ ಮೈಸೂರು ಸಂಸ್ಕೃತ ಭಾರತಿ ವತಿಯಿಂದ ಸಂಸ್ಕೃತ ದಿನ, ರಕ್ಷಾ ಬಂಧನ ಕಾರ್ಯಕ್ರಮವನ್ನು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು. ಈ ವೇಳೆ ಸಂಸ್ಕೃತ ವಿದ್ವಾಂಸರಾದ ಶ್ರೀಮತಿ ಹೇಮ ನಾಗರಾಜ್, ಮಲ್ಲಿಕಾರ್ಜುನ್, ಲಾವಣ್ಯ, ಟಿ.ಎಸ್.ಅರುಣ್, ಶ್ರೀಧರ್ ಶಾಸ್ತ್ರೀ ಇನ್ನಿತರರು ಉಪಸ್ಥಿತರಿದ್ದರು.

ಆ.16ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಾಂಸ ಮಾರಾಟ ನಿಷೇಧ

ಮೈಸೂರು,ಆ.13– ಆ.16 ರಂದು ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಮೈಸೂರು ನಗರಪಾಲಿಕೆ ಆರೋಗ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಫ್ಟ್ ರಿಲೀಸ್ ಯೋಜನೆ ಅನುಷ್ಠಾನಕ್ಕೆ ಚಿಂತನೆ



ಆನೆ ಹಬ್ಬ ದಿನದ ಅಂಗವಾಗಿ ಹಾರಂಗಿ ಶಿಬಿರ ದಲ್ಲಿರುವ ಸಾಕಾನೆಗಳಾದ ಲಕ್ಷ್ಮಣ, ಏಕದಂತ, ರಾಮ, ವಿಕ್ರಮ, ಈಶ್ವರ, ಕರ್ಣ ಆನೆಗಳನ್ನು ಸಿಂಗಾರ ಮಾಡಿ ಪೂಜೆ ಸಲ್ಲಿಸಲಾಯಿತು

ಕುಶಾಲನಗರ,ಆ.13– ಭದ್ರಾ ಅಭಯಾರಣ್ಯದಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶವನ್ನು ಗುರುತಿಸಿ ರೈಲ್ವೆ ಕಂಬಿಗಳನ್ನು ಅಳವಡಿಸಿ ಸೆರೆ ಹಿಡಿದ ಕಾಡಾನೆಗಳನ್ನು ಆ ಜಾಗದಲ್ಲಿ ಬಿಡುವ ಸಾಫ್ಟ್ ರಿಲೀಸ್ ಯೋಜನೆಗೆ ಶಾಸಕರ ನೇತೃತ್ವದಲ್ಲಿ ಮುಖ್ಯಮಂತ್ರಿ, ಅರಣ್ಯ ಸಚಿವರೊಂದಿಗೆ ಚರ್ಚೆ ನಡೆಸಿದ್ದು, ಅರಣ್ಯ ಇಲಾಖೆಯಿಂದ ಅನುಷ್ಠಾನಗೊಳಿಸಲು ಚಿಂತಿಸಲಾಗಿದೆ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ತಿಳಿಸಿದ್ದಾರೆ.

ಹಾರಂಗಿ ಸಾಕಾನೆ ಶಿಬಿರದಲ್ಲಿ ನಡೆದ ವಿಶ್ವ ಆನೆ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ 4 ಲಕ್ಷ 15 ಸಾವಿರದಷ್ಟು ಆನೆಗಳಿದ್ದು, ಭಾರತದಲ್ಲಿ 27 ಸಾವಿರದಷ್ಟಿವೆ. ದೇಶದಲ್ಲೇ ಕರ್ನಾಟಕದ 7 ಜಿಲ್ಲೆಗಳಲ್ಲಿ ಕಾಡಾನೆಗಳ ಸಂಖ್ಯೆ ಹೆಚ್ಚಿದೆ. ಆನೆ ಹಾಗೂ ಮಾನವ ಸಂಘರ್ಷಕ್ಕೆ ಶಾಶ್ವತವಾದ ಪರಿಹಾರೋಪಾಯಗಳನ್ನು ಕಂಡು ಹಿಡಿಯುವುದು ಬಹು ಮುಖ್ಯ. ಅದರ ಜೊತೆಯಲ್ಲಿ ಅನೆಗಳ ಸಂರಕ್ಷಣೆಗೆ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

ಅಧ್ಯಕ್ಷತೆ ವಹಿಸಿದ್ದ ಮಡಿಕೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ.ನೆಹರು ಮಾತನಾಡಿ, ಕಾಡಾನೆಗಳ ರಕ್ಷಣೆ ಕೇವಲ ಇಲಾಖೆ ಅಥವಾ ಸರ್ಕಾರದ ಜವಾಬ್ದಾರಿಯಲ್ಲ ಇಲ್ಲಿ ಕಾಡಂಚಿನ ಜನರು, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಬಹು ಮುಖ್ಯವಾಗಿರುತ್ತದೆ ಎಂದರು.

ಮಡಿಕೇರಿ ಡಿಎಫ್‌ಓ ಅಭಿಷೇಕ್, ತಿತಿಮತಿ ವಿಭಾಗದ ಡಿಎಫ್‌ಓ ಕೆ. ಗೋಪಾಲ್, ವನ್ಯಜೀವಿ ವಿಭಾಗದ ಉಪ ಸಂರಕ್ಷಣಾ ಅಧಿಕಾರಿ ಕಾರ್ಯಪ್ಪ, ನಿವೃತ್ತ ಪಶು ವೈದ್ಯಾಧಿಕಾರಿ ಡಾ.ಚಿಟ್ಟಿಯಪ್ಪ, ಸೋಮವಾರಪೇಟೆ ಉಪನ್ಯಾಸಕ ಶಶಿಧರ್ ವಿವಿಧ ವಲಯಗಳ ಅರಣ್ಯಾಧಿಕಾರಿಗಳು ಇದ್ದರು.

ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳಿಗೆ ಆನೆಗಳ ಸಂರಕ್ಷಣೆ, ಪರಿಸರ, ಪ್ರಕೃತಿಯ ಬಗ್ಗೆ ಉಪನ್ಯಾಸ ನಡೆಯಿತು. ಆನೆ ಹಬ್ಬದ ಅಂಗವಾಗಿ ಹಾರಂಗಿ ಶಿಬಿರದಲ್ಲಿರುವ ಸಾಕಾನೆಗಳಾದ ಲಕ್ಷ್ಮಣ, ಏಕದಂತ, ರಾಮ, ವಿಕ್ರಮ, ಈಶ್ವರ, ಕರ್ಣ ಆನೆಗಳನ್ನು ಶೃಂಗರಿಸಿ ಪೂಜೆ ಸಲ್ಲಿಸಿ ವಿವಿಧ ಬಗೆಯ ಆಹಾರಗಳನ್ನು ನೀಡಲಾಯಿತು.

ಹಿಂದೂ ಜಾಗರಣ ವೇದಿಕೆಯಿಂದ

ಬೃಹತ್ ಪಂಜಿನ ಮೆರವಣಿಗೆ

ವಿರಾಜಪೇಟೆ, ಆ.13– ಅಖಂಡ ಭಾರತ ಸಂಕಲ್ಪ ದಿನಾಚರಣೆ ಪ್ರಯುಕ್ತ ಹಿಂದೂ ಜಾಗರಣ ವೇದಿಕೆಯ ತಾಲೂಕು ಘಟಕದ ವತಿಯಿಂದ ಬೃಹತ್ ಪಂಜಿನ ಮೆರವಣಿಗೆ ನಡೆಯಿತು.

ಇಲ್ಲಿನ ತೆಲುಗರ ಬೀದಿಯ ಶ್ರೀ ದಕ್ಷಿಣ ಮಾರಿಯಮ್ಮ ದೇವಾಲಯದ ಬಳಿ ತಾಯಿ ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವುದರೊಂದಿಗೆ ಕಾರ್ಯಕರ್ತರು ಪಂಜಿನ ಮೆರವಣಿಗೆಯಲ್ಲಿ ಸಾಗಿದರು.

ಪಟ್ಟಣದ ತೆಲುಗರ ಬೀದಿಯಲ್ಲಿನ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡ ಮೆರವಣಿಗೆ ಜೈನರ ಬೀದಿ, ಎಫ್‌ಎಂಸಿ ರಸ್ತೆ, ಗಡಿಯಾರ ಕಂಬದ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ, ಮಾಂಸದ ಮಾರುಕಟ್ಟೆ, ಕೆಎಸ್ ಆರ್‌ಸಿ ರಸ್ತೆ ಮಾರ್ಗವಾಗಿ ದೊಡ್ಡಟ್ಟಿ ಚೌಕಿ ಮೂಲಕ ಮಹಿಳಾ ಸಮಾಜದತ್ತ ಸಾಗಿತು. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಿಂದ ಸಾಕಷ್ಟು ಸಂಖ್ಯೆಯಲ್ಲಿ ಯುವಕರು ಹಾಗೂ ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



ಅಖಂಡ ಭಾರತ ಸಂಕಲ್ಪ ದಿನಾಚರಣೆ ಪ್ರಯುಕ್ತ ಹಿಂದೂ ಜಾಗರಣ ವೇದಿಕೆಯ ತಾಲೂಕು ಘಟಕದ ವತಿಯಿಂದ ವಿರಾಜಪೇಟೆಯಲ್ಲಿ ಬೃಹತ್ ಪಂಜಿನ ಮೆರವಣಿಗೆ ನಡೆಯಿತು.

ಪ್ರಮುಖ ಬೀದಿಗಳಲ್ಲಿ ಕಾರ್ಯಕರ್ತರು ಭಾರತ ಮಾತೆ, ಶ್ರೀರಾಮನಿಗೆ ಜಯಕಾರ ಹಾಕುತ್ತಾ ಘೋಷಣೆಗಳನ್ನು ಮೆರವಣಿಗೆಯುದ್ದಕ್ಕೂ ಮೊಳಗಿಸಿದರು. ಮೆರವಣಿಗೆಯಲ್ಲಿ ಯಾವುದೇ ಅಹಿತರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆಯಿಂದ ಜಿಲ್ಲಾ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಆಯೋಜಿಸಲಾಗಿತ್ತು.

ಹಿಂದೂ ಜಾಗರಣ ವೇದಿಕೆಯ ತಾಲೂಕು ಸಂಯೋಜಕ ಅನಿಲ್ ಸಿದ್ದಾಪುರ ಸೇರಿದಂತೆ ಎಲ್ಲಾ ಹಿಂದೂ ಸಂಘಟನೆಗಳ ಪ್ರಮುಖರು ಇದ್ದರು.

ಗ್ಲಾಸ್ ಬ್ರಿಡ್ಜ್ ನಿರ್ಮಿಸಿದರೆ, ರಾಜಾಸೀಟು ಉಳಿಸಿ ಆಂದೋಲನ ಎಚ್ಚರಿಕೆ

ಮಡಿಕೇರಿ, ಆ.13–ಪ್ರಸಿದ್ಧ ಪ್ರವಾಸಿ ತಾಣ ರಾಜಾ ಸೀಟಿನಲ್ಲಿ ಅವೈಜ್ಞಾನಿಕವಾದ ಗ್ಲಾಸ್ ಬ್ರಿಡ್ಜ್ ನಿರ್ಮಿಸುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ಜನರ ವಿರೋಧದ ನಡುವೆಯೂ ಯೋಜನೆ ಜಾರಿಗೆ ಮುಂದಾದಲ್ಲಿ ರಾಜಾಸೀಟು ಉಳಿಸಿ ಆಂದೋಲನಕ್ಕೆ ಮುಂದಾಗಬೇಕಾಗುತ್ತದೆ ಎಂದು ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿಯ ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಎಚ್ಚರಿಕೆ ನೀಡಿದ್ದಾರೆ.

ಈ ನಾಡಿನ ಸುಂದರ ಪರಿಸರ, ವಿಶಿಷ್ಟ ಸಂಸ್ಕೃತಿ, ಪರಂಪರೆಗಳನ್ನು ಬದಿಗೆ ಸರಿಸಿ, ಗ್ಲಾಸ್ ಬ್ರಿಡ್ಜ್ ಯೋಜನೆಯನ್ನು ಜಾರಿಗೆ ತರಲು ಮುಂದಾಗಿರುವುದು ದುಡ್ಡು ಹೊಡೆಯುವ ಷಡ್ಯಂತ್ರವಾಗಿದೆ. ಯೋಜನೆಯನ್ನು ಜಾರಿಗೊಳಿಸುತ್ತೇವೆ ಎಂದು ಯಾರೂ ಕನಸಿನಲ್ಲಿಯೂ ಯೋಚಿಸುವುದು ಬೇಡ ಎಂದು ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು. ಕೇವಲ ಪ್ರವಾಸೋದ್ಯಮ ಅಭಿವೃದ್ಧಿಯ ನೆಪದಲ್ಲಿ ಇಂತಹ ಪರಿಸರ ವಿರೋಧಿ ಯೋಜನೆಗಳನ್ನು ಜಾರಿಗೊಳಿಸುವ ಪ್ರಯತ್ನಗಳು ನಡೆಯುತ್ತಿದೆ. ಈಗಾಗಲೆ ಭಾಗಮಂಡಲ ರಸ್ತೆಯಲ್ಲಿ, ಅಬ್ಬಿಫಾಲ್ಸ್ ರಸ್ತೆಯಲ್ಲಿ ಗ್ಲಾಸ್ ಬ್ರಿಡ್ಜ್‌ಗಳು ನಿರ್ಮಾಣವಾಗಿ ಪ್ರಸ್ತುತ ಸ್ಥಗಿತವಾಗಿದೆ. ಇವುಗಳು ಇರುವ ಪ್ರದೇಶಗಳಲ್ಲಿ ಪ್ರವಾಸಿಗರ ಬೀಡು, ವಾಹನಗಳ ದಟ್ಟಣೆಯಿಂದ ಆ ಪ್ರದೇಶಗಳಲ್ಲಿನ ಸ್ಥಳೀಯರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ ಎಂದು ತಿಳಿಸಿದರು.

ಯೋಜನೆಗೆ ರೂ. 15 ಕೋಟಿ : ರಾಜಾಸೀಟಿನಲ್ಲಿ ಉದ್ದೇಶಿತ ಗ್ಲಾಸ್ ಬ್ರಿಡ್ಜ್ ಅಂದಾಜು 15 ಕೋಟಿ ರೂ. ವೆಚ್ಚದ್ದಾಗಿದೆ. ಕನಿಷ್ಠ ಮೂಲಭೂತ ಸೌಲಭ್ಯಗಳೇ ಇಲ್ಲದೆ ಇಂತಹ ಯೋಜನೆಗಳ ಜಾರಿಯ ಔಚಿತ್ಯವೇನು ಎಂದು ರವಿ ಕುಶಾಲಪ್ಪ ಪ್ರಶ್ನಿಸಿದರು. ನಾವೆಂದಿಗೂ ಅಭಿವೃದ್ಧಿಯ ವಿರೋಧಿಗಳಲ್ಲ. ಸಾಧ್ಯವಾದಲ್ಲಿ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲಿ. ಪರಿಶಿಷ್ಟ ಸಮುದಾಯದ ಕಾಲೋನಿಗಳ ಅಭಿವೃದ್ಧಿಗೆ ಮುಂದಾಗಲಿ ಎಂದು ಸಲಹೆ ನೀಡಿದರು. ಜಿಲ್ಲೆಯಲ್ಲಿ 2018ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪಗಳ ಸಂದರ್ಭ ಇದರ ಅಧ್ಯಯನಕ್ಕೆ ಬಂದಿದ್ದ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ತಂಡ ಮಡಿಕೇರಿ, ಗಾಳಿಬೀಡು, ಗರ್ವಾಲೆ, ಮಾದಾಪುರ ಸೇರಿದಂತೆ ಹಲವು ಗ್ರಾಮಗಳಲ್ಲಿ ಬೃಹತ್ ನಿರ್ಮಾಣ ಕಾಮಗಾರಿಗಳು ನಡೆಯಬಾರದು ಎಂದು ತಿಳಿಸಿದೆ ಈ ಹಿನ್ನೆಲೆಯಲ್ಲಿ ರಾಜಾಸೀಟಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಯ ನೆಪದಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣ ಮಾಡಬಾರದು ಎಂದು ರವಿ ಕುಶಾಲಪ್ಪ ಆಗ್ರಹಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಮೇಶ್ ಹೊಳ್ಳ, ಜಿ.ಪಂ ಮಾಜಿ ಸದಸ್ಯ ಡಿ.ಬಿ.ಧರ್ಮಪ್ಪ, ಜಿಲ್ಲಾ ವೀರಶೈವ ಲಿಂಗಾಯಿತ ಮಹಾ ಸಭಾದ ಅಧ್ಯಕ್ಷ ಹೆಚ್.ವಿ. ಶಿವಪ್ಪ, ಪ್ರಧಾನ ಕಾರ್ಯದರ್ಶಿ ಸಾಂಭಶಿವಯ್ಯ, ಖಜಾಂಚಿ ಹೆಚ್.ಬಿ.ಉದಯ ಕುಮಾರ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶಾಶ್ವತ ಪರಿಹಾರಕ್ಕೆ ಸಿಎಂಗೆ ಮನವಿ

ಮಡಿಕೇರಿ: ಜಿಲ್ಲೆಯ ರೈತರು ಅನುಭವಿಸುತ್ತಿರುವ 'ಸಿ ಮತ್ತು ಡಿ' ಜಾಗದ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಶಾಸಕ ಡಾ.ಮಂತರ್ ಗೌಡ ಮನವಿ ಸಲ್ಲಿಸಿದರು. ಜಿಲ್ಲೆಯ ರೈತರು ಹಾಗೂ ಕೃಷಿಕರ ಆತಂಕವನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದು ಕೆಲವೊಂದು ಪ್ರಕರಣಗಳು ನ್ಯಾಯಾಲಯದಲ್ಲಿದೆ. ಅದನ್ನು ಕಾನೂನಾತ್ಮಕವಾಗಿಯೇ ಬಗೆಹರಿಸಬೇಕಾಗುತ್ತದೆ. ಈ ಎಲ್ಲಾ ಅಂಶಗಳನ್ನು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಲಾಗಿದೆ.

ಮಹಾಗಣಪತಿ ದೇವಾಲಯಕ್ಕೆ ರಜತ ಕವಚ ಸಮರ್ಪಣೆ



ಉದ್ಯಮಿ ಎಫ್.ಎಲ್. ಮಣಿಕಂಠ ರಜತ ಕವಚ ಸಮರ್ಪಣೆ ಮಾಡಿದರು.

ಕುಶಾಲನಗರ: ಪಟ್ಟಣದ ಜನರ ಆರಾಧ್ಯ ದೈವ ಶ್ರೀ ಮಹಾಗಣಪತಿ ದೇವಸ್ಥಾನಕ್ಕೆ ಉದ್ಯಮಿ ಫ್ರೆಸರ್‌ಪೇಟೆಯ ಗತಲಕ್ಷ್ಮಯ್ಯ ಶೆಟ್ಟಿಯವರ ಮೊಮ್ಮಕ್ಕಳಾದ ಎಫ್.ಎಲ್. ಮಣಿಕಂಠ ರಜತ ಕವಚ ಸಮರ್ಪಣೆ ಮಾಡಿದರು.

ದೇವಾಲಯದ ಪ್ರಧಾನ ಅರ್ಚಕ ನಾಗೇಂದ್ರ ಬಾಬು ಮತ್ತು ರಾಘವೇಂದ್ರ ಭಟ್ಟರ ನೇತೃತ್ವದಲ್ಲಿ ಗಣಪತಿ ಹೋಮ ಹಾಗೂ ವಿಶೇಷ ಪೂಜೆ ಸಲ್ಲಿಸಲಾಯಿತು. ನೂತನ ರಜತ ಕವಚಕ್ಕೆ ಪೂಜೆ ಪುರಸ್ಕಾರ ನೆರವೇರಿಸಿದ ಬಳಿಕ ಉದ್ಯಮಿ ಎಫ್.ಎಲ್. ಮಣಿ ಹಾಗೂ ಅವರ ಕುಟುಂಬದವರು ಶಿಲ್ಪಿ ಮಂಗಳೂರಿನ ಉಮೇಶ್ ಆಚಾರ್ಯ ಸಿದ್ಧಪಡಿಸಲಾದ ವಿಗ್ರಹವನ್ನು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಎಂ. ಕೆ.ದಿನೇಶ್‌ರಿಗೆ ಹಸ್ತಾಂತರಿಸಿದರು.

ದೇವಾಲಯದ ಪ್ರಧಾನ ಅರ್ಚಕ ನಾಗೇಂದ್ರ ಬಾಬು ಮಾತನಾಡಿ, ಶ್ರೀ ಮಹಾಗಣಪತಿ 32 ಅವತಾರಗಳನ್ನು ಹೊಂದಿದ್ದು, ಈ ವಿಚಾರ ಕುರಿತು ಭಕ್ತರಿಂದ ಕವಚಗಳನ್ನು ದಾನ ರೂಪದಲ್ಲಿ ಪಡೆದು ಪ್ರತಿ ದಿನ ಈ ಕವಚಗಳನ್ನು ಧರಿಸಿ ವಿಶೇಷ ಪೂಜೆ ಸಲ್ಲಿಸುವ ಉದ್ದೇಶ ಹೊಂದಲಾಗಿದೆ ಎಂದರು.

ನಂಜರಾಯಪಟ್ಟಣ ಕಾಫಿ ಬೆಳೆಗಾರರಾದ ಕರುಂಬಯ್ಯ ಮತ್ತು ಕವಿತಾ ಅಭಿಷೇಕ ಪಾತ್ರೆ ದಾನವಾಗಿ ನೀಡಿದರು.

ದೇವಾಲಯ ಸಮಿತಿ ವತಿಯಿಂದ ದಾನಿಗಳಾದ ಮಣಿಕಂಠ ಹಾಗೂ ಕುಟುಂಬ ಮತ್ತು ಕರುಂಬಯ್ಯ ದಂಪತಿಗಳನ್ನು ಸನ್ಮಾನಿಸಿದರು. ದೇವಾಲಯ ಸಮಿತಿ ಮಾಜಿ ಅಧ್ಯಕ್ಷ ವಿ.ಎನ್.ವಸಂತ ಕುಮಾರ್ ವ್ಯವಸ್ಥಾಪಕ ಶ್ರೀನಿವಾಸ್ ರಾವ್, ಸಂಘಟನಾ ಕಾರ್ಯದರ್ಶಿ ಕೆ.ಎನ್.ದೇವರಾಜು ಮತ್ತಿತರರು ಪಾಲ್ಗೊಂಡಿದ್ದರು.

ಪಾಲಿಬೆಟ್ಟ ಲೂಡ್ಸ್ ಶಾಲೆಯಲ್ಲಿ ಸ್ನೇಹ ಸಮ್ಮಿಲನ

ಸಿದ್ದಾಪುರ: ಪಾಲಿಬೆಟ್ಟ ಲೂಡ್ಸ್ ಶಾಲೆಯಲ್ಲಿ 90–91ನೇ ಸಾಲಿನಲ್ಲಿ ಕಲಿತ ವಿದ್ಯಾರ್ಥಿಗಳು ಕಳೆದ 35 ವರ್ಷಗಳ ಹಿಂದೆ ಹಳೆ ವಿದ್ಯಾರ್ಥಿಗಳ ಸಂಘವನ್ನು ಕಟ್ಟಿ ಹಲವು ಸಮಾಜಮುಖಿ ಕಾರ್ಯಗಳೊಂದಿಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಪ್ರತಿ ವರ್ಷ ಸಹಪಾಠಿಗಳೊಂದಿಗೆ ಸ್ನೇಹ ಸಮ್ಮಿಲನ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಮಾದರಿ ವಿದ್ಯಾರ್ಥಿಗಳಾಗಿ ಮೆಚ್ಚುಗೆ ಗಳಿಸಿದ್ದಾರೆ.

35ನೇ ವರ್ಷದ ಅಂಗವಾಗಿ ಶಾಲೆಯಲ್ಲಿ ಅಂದಿನ ಸಮವಸ್ತ್ರದೊಂದಿಗೆ ಬೆಂಚಿನ ಮೇಲೆ ಕುಳಿತು ಪಾಠ ಕೇಳುವ ವಿದ್ಯಾರ್ಥಿಗಳ ಮಾದರಿಯ ಕೇಕನ್ನು ವಿಭಿನ್ನವಾಗಿ ತಯಾರಿಸಿ ಕಟ್ ಮಾಡುವುದರ ಮೂಲಕ ಸಂಭ್ರಮಿಸಿದರು. ಹಳೆ ವಿದ್ಯಾರ್ಥಿಗಳ ಸಂಘದ ನಿರ್ವಾಹಕ ಕಿರಣ್ ಜೋಸೆಫ್, ಅಸ್ಮಾ ಜಬೀನ್, ಶುಭಾ ಕುಶಾಲಪ್ಪ, ಪ್ರಶಾಂತ್ ಮಾತನಾಡಿ, ನಮಗೆ ಈಗ 50 ವರ್ಷಗಳಾಗಿದ್ದು 35 ವರ್ಷಗಳ ಹಿಂದೆ ವ್ಯಾಸಂಗ ಮಾಡಿದ ಶಾಲೆಯ ವಿದ್ಯಾರ್ಥಿಗಳಾಗಿ ಪ್ರತಿ ವರ್ಷ ಸ್ನೇಹ ಸಮ್ಮಿಲನದ ಮೂಲಕ ಭೇಟಿಯಾಗುತ್ತಿದ್ದೇವೆ. ನಮ್ಮ ಬದುಕಿನುದ್ದಕ್ಕೂ ದೊರೆತ ಅನುಭವ ಹಳೆಯ ನೆನಪು ಹಂಚಿಕೊಳ್ಳುವುದರ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ ಎಂದರು. ಸ್ನೇಹ ಸಮ್ಮಿಲನದ ಅಂಗವಾಗಿ ವಿವಿಧ ಸ್ಪರ್ಧಾ ಕಾರ್ಯಕ್ರಮಗಳು ನಡೆಯಿತು. ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭ ವಿದ್ಯಾರ್ಥಿಗಳಾದ ಶಾಲಿನಿ, ಉಮೇಶ್, ದಿಲನ್, ರೀನಾ, ಅಂಜು, ಪೂಣಚ್ಚ, ಆದಿಲ್, ನಿರ್ಮಲ, ಅಜೀಜ್, ಮಮತ, ವಿನ್ಸೆಂಟ್, ವಿವೇಕ್, ಸಿಂಧು ಸೇರಿದಂತೆ 30ಕ್ಕೂ ಹೆಚ್ಚು ಹಳೆ ವಿದ್ಯಾರ್ಥಿಗಳು ಹಾಜರಿದ್ದರು.



ಪಾಲಿಬೆಟ್ಟ ಲೂಡ್ಸ್ ಶಾಲೆಯಲ್ಲಿ 35 ವರ್ಷಗಳ ಹಿಂದೆ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಬುಧವಾರ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಸಿದರು

ವಿಳಂಬ ಧೋರಣೆ ತೋರಿಸಬೇಡಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಚ್ಚರಿಕೆ

ಚಾಮರಾಜನಗರ, ಆ.13– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ಸೌಲಭ್ಯ ಗಳ ವಿತರಣೆಯಲ್ಲಿ ವಿಳಂಬ ಧೋರಣೆ ಸಲ್ಲದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಎಚ್ಚರಿಕೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಿಳೆಯರಿಗೆ ಹೊಲಿಗೆಯಂತ್ರ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ವಿವಿಧ ಸಮುದಾಯ ಭವನಗಳಿಗೆ ಕುರ್ಚಿ, ಪಾತ್ರೆಗಳು ಸೇರಿದಂತೆ ಇನ್ನಿತರೆ ಪರಿಕರಗಳನ್ನು ವಿತರಿಸಲು ಕ್ರಿಯಾಯೋಜನೆ ಅನುಮೋದನೆ ಆಗಿದ್ದರೂ ಕೆಲವೆಡೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಸೌಲಭ್ಯ ವಿತರಣೆಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಅಧಿಕಾರಿಗಳ ವಿರುದ್ಧ ಕಿಡಿಕಾರಿ ಇಂತಹ ಧೋರಣೆಗಳನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಕೊಳ್ಳೇಗಾಲದಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡದಿರುವ ಬಗ್ಗೆ ದೂರುಗಳು ಬಂದಿವೆ. ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು ಕ್ರಿಯಾಯೋಜನೆ ಅಂತಿಮಗೊಳಿಸಿ, ಶೀಘ್ರವಾಗಿ ಸೌಲಭ್ಯ ವಿತರಿಸಲು ಮುಂದಾಗಬೇಕು. ಸೌಲಭ್ಯಗಳ ವಿತರಣೆಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿರಬೇಕು. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರದ ಹಾಗೆ ಸೌಲಭ್ಯಗಳನ್ನು ಸಮರ್ಪಕವಾಗಿ ವಿತರಿಸುವ ಕೆಲಸವಾಗಬೇಕು ಎಂದರು.



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸ್ಥಳೀಯ ಕಲಾವಿದರಿಗೆ ವಿವಿಧ ಕಲಾಪ್ರಕಾರಗಳ ಕೌಶಲ್ಯಯುತ ತರಬೇತಿ ನೀಡಲು ಯೋಜನೆ ರೂಪಿಸಬೇಕು. ಇಲ್ಲಿನ ಕಲಾವಿದರು ದಸರಾ, ಹಂಪಿ ಉತ್ಸವ ಸೇರಿದಂತೆ ರಾಜ್ಯದ ಇತರೆ ಪ್ರಮುಖ ಉತ್ಸವಗಳಲ್ಲಿ ಜಿಲ್ಲೆಯ ಕಲಾಸಂಸ್ಕೃತಿಯನ್ನು ಬಿಂಬಿಸುವಂತಹ ಕಾರ್ಯಕ್ರಮಗಳನ್ನು ನೀಡಲು ಅನುವು ಮಾಡಿಕೊಡಬೇಕು. ಪ್ರವಾಸೋದ್ಯಮ ಅಭಿವೃದ್ಧಿಗೆ ಜಿಲ್ಲೆಯಲ್ಲಿ ವಿಪುಲ ಅವಕಾಶಗಳಿದ್ದು, ಹೊಗೇನಕಲ್, ಭರಚುಕ್ಕಿ ಸೇರಿದಂತೆ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಸ್ಥಳದ ವಿವರ ನೀಡಲು ಕೌಶಲ್ಯಾಭಿವೃದ್ಧಿ ತರಬೇತಿ ಹೊಂದಿದ ಗೈಡ್‌ಗಳನ್ನು ನಿಯೋಜಿಸಬೇಕು. ಈ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಹೊರವಲಯದಲ್ಲಿರುವ ವೈದ್ಯಕೀಯ (ಸಿಮ್ಸ್) ಆಸ್ಪತ್ರೆಯ ರಸ್ತೆಯಲ್ಲಿ ನಗರದಿಂದ ಸಾರ್ವಜನಿಕರು ಹಾಗೂ ಬಸ್‌ಗಳು ಸೇರಿ ದಂತೆ ಇತರೆ ವಾಹನಗಳ ಓಡಾಟ ಅಧಿಕವಾಗುತ್ತಿದೆ. ಭವಿಷ್ಯದ ಹಿತದೃಷ್ಟಿಯಿಂದ ಸಿಮ್ಸ್ ಆಸ್ಪತ್ರೆವರೆಗೆ ಜೋಡಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅವಶ್ಯ ಕ್ರಮಗಳನ್ನು ವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಯವರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಬಿಂದ್ಯಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಚಿದಂಬರ, ನಗರಸಭೆ ಪೌರಾಯುಕ್ತ ರಾಮದಾಸ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಜಿಲ್ಲಾಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಆ.16, ಎಂ.ಸಿ.ಬಸಪ್ಪ ಜನ್ಮ ಶತಮಾನೋತ್ಸವ



ಮಾಜಿ ಶಾಸಕ ಎಂ.ಸಿ.ಬಸಪ್ಪನವರ ಜನ್ಮಶತಮಾನೋತ್ಸವದ ಬಗ್ಗೆ ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು

ಚಾಮರಾಜನಗರ, ಆ.13–ಮಾಜಿ ಶಾಸಕ ಎಂ.ಸಿ. ಬಸಪ್ಪನವರ ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಆ.16ರಂದು ನಗರದಲ್ಲಿ ಆಯೋಜಿಸಲಾಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ತಿಳಿಸಿದರು.

ಅಂದು ಬೆಳಗ್ಗೆ 10.30ಕ್ಕೆ ನಗರದ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಉದ್ಘಾಟನೆ ಮಾಡಲಿದ್ದಾರೆ. ಇದೇ ಸರಳ ಸಜ್ಜನ ಎಂ.ಸಿ.ಬಸಪ್ಪ ಎಂಬ ಕೃತಿಯನ್ನು ಸುತ್ತೂರು ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಲೋಕಾರ್ಪಣೆ ಮಾಡಲಿದ್ದು, ಪಡಗೂರು ಅಡವಿ ಮಠದ ಶ್ರೀಶಿವಲಿಂಗೇಂದ್ರ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ.ಸಿ.ಸೋಮಶೇಖರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಲೆಯೂರು ಗ್ರಾಮದವರಾದ ಮಾಜಿ ಶಾಸಕ ಎಂ.ಸಿ.ಬಸಪ್ಪನವರ ತಂದೆ ಚಿಕ್ಕಲಿಂಗಪ್ಪ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದವರು. ಎಂ.ಸಿ.ಬಸಪ್ಪ ಅವರ ಜೀವನದಲ್ಲಿ ಹೋರಾಟ ಹಾಗೂ ರಾಜಕಾರಣ ಎರಡೂ ಇದ್ದವು ಎಂದರು.

1952ರಲ್ಲಿ ನಡೆದ ಮೊದಲ ಮಹಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಪರಾಭವಗೊಂಡರು. 1962ರ ಮೂರನೇ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಜಯಶಾಲಿಯಾಗಿ ವಿಧಾನಸಭೆ ಪ್ರವೇಶಿಸಿದರು. 1969ರ ಬೆಂಗಳೂರು ಗಾಜಿನ ಮನೆ ಅಧಿವೇಶನ ಸಂದರ್ಭದಲ್ಲಿ ಇವರು ಎಂಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಇಂದಿರಾ ಗಾಂಧಿ ನೇತೃತ್ವದ ಆಡಳಿತ ಕಾಂಗ್ರೆಸ್‌ನಿಂದ ಮುಕ್ತ ಆಹ್ವಾನವಿದ್ದರೂ ವೀರೇಂದ್ರ ಪಾಟೀಲರ ಜೊತೆಗೆ ತಮ್ಮನ್ನು ಗುರುತಿಸಿಕೊಂಡರು 1978ರ ಚುನಾವಣೆಯಲ್ಲಿ ಜನತಾ ಪಕ್ಷದಿಂದ ಮತ್ತೊಮ್ಮೆ ವಿಧಾನ ಸಭೆಗೆ ಆಯ್ಕೆಯಾದರು ಎಂದು ತಿಳಿಸಿದರು.

ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ವಿ.ಮಲ್ಲಿಕಾರ್ಜುನಸ್ವಾಮಿ, ಸಾಹಿತಿ ಕೆ.ವೆಂಕಟರಾಜು, ಮುಖಂಡರಾದ ಆರ್.ಕುಮಾರಸ್ವಾಮಿ, ಪುಟ್ಟರಾಜು, ಬೇಡಗುಳಿ ಸುಂದರ್, ಬಸಪ್ಪನವರ ಪುತ್ರ ಎಂ.ಬಿ. ಸೋಮಶೇಖರ್, ಆರ್.ಪುಟ್ಟಮಲ್ಲಪ್ಪ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶ್ರೀ ಮಂಟೇಸ್ವಾಮಿ ದೇವಸ್ಥಾನದ ಹುಂಡಿ ಕಳವು



ಶ್ರೀಮಂಟೇಸ್ವಾಮಿ ದೇವಸ್ಥಾನದ ಹುಂಡಿ ಕಳ್ಳತನವಾಗಿರುವ ಬಗ್ಗೆ ಪೋಲೀಸರು ಪರಿಶೀಲನೆ ನಡೆಸಿದರು

ಚಾಮರಾಜನಗರ, ಆ.13– ಶ್ರೀ ಮಂಟೇಸ್ವಾಮಿ ದೇವಸ್ಥಾನದ ಹುಂಡಿಯನ್ನು ಖದೀಮರು ಹೊತ್ತೊಯ್ದಿರುವ ಘಟನೆ ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಉಪ್ಪಾರ ಬಡಾವಣೆಯಲ್ಲಿ ನಡೆದಿದೆ.

ದೇವಾಲಯದ ಬಾಗಿಲು ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ಕಾಣಿಕೆ ಹುಂಡಿಯನ್ನು ಕದ್ದು, ಚಿಲ್ಲರೆ ಹಣವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ದೇವಸ್ಥಾನದಲ್ಲಿ ಕಳ್ಳತನವಾಗಿರುವ ವಿಷಯ ತಿಳಿಯುತ್ತಿದ್ದಂತೆ ನೂರಾರು ಸಂಖ್ಯೆಯಲ್ಲಿ ಬಡಾವಣೆಯ ನಿವಾಸಿಗಳು ಸೇರಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ

ಬೃಂದಾವನ ಸನ್ನಿಧಾನದಲ್ಲಿ ನಡೆದ ವಿಶೇಷ ಪೂಜೆ

ಗುಂಡ್ಲುಪೇಟೆ, ಆ.13(ಸೋಮ್.ಜಿ)– ಪಟ್ಟಣದಲ್ಲಿರುವ ಶ್ರೀ ಗುರುರಾಘವೇಂದ್ರ ಸ್ವಾಮಿಗಳ 354 ನೇ ಆರಾಧನ ಮಹೋತ್ಸವದ ಅಂಗವಾಗಿ ಶ್ರೀ ರಾಘವೇಂದ್ರಸ್ವಾಮಿ ಮೃತ್ತಿಕಾ ಬೃಂದಾವನ ಸನ್ನಿಧಾನದಲ್ಲಿ ಮೂರು ದಿನಗಳ ಕಾಲ ವಿಶೇಷ ಪೂಜೆ ನೆರವೇರಿತು.

ರಾಯರ ಆರಾಧನೆಯ ಪ್ರಯುಕ್ತ ಮಠದಲ್ಲಿ ಶ್ರೀರಾಮತಾರಕಹೋಮ, ಶ್ರೀರಾಘವೇಂದ್ರ ಅಷ್ಟಾಕ್ಷರ ಹೋಮ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಮಧ್ಯಾಹ್ನ ಪ್ರಸಾದ ವಿತರಣೆ ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಮಾತಾ ಸತ್ಸಂಗ ಮಹಿಳಾ ತಂಡದವರ ಭಜನೆಯೊಂದಿಗೆ ರಾಘವೇಂದ್ರ ಸ್ವಾಮಿಯವರ ಭಾವಚಿತ್ರದ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ಮೂರು ದಿನಗಳ ಕಾಲ ನೆರವೇರಿದ ಈ ಪೂಜಾ ಮಹೋತ್ಸವಕ್ಕೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ತಹಶೀಲ್ದಾರ್ ತನ್ಮಯ್, ಆಡಳಿತ ಮಂಡಳಿ ಅಧ್ಯಕ್ಷೆ ರಾಜೇಶ್ವರಿ ಚಂದ್ರಶೇಖರ್ ಮತ್ತು ಪದಾಧಿಕಾರಿಗಳು ಹಾಗೂ ಸಹಸ್ರಾರು ಭಕ್ತರು ಭಾಗವಹಿಸಿ ರಾಯರ ದರ್ಶನ ಪಡೆದರು.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಖಂಡಿಸಿ

ಭಕ್ತವೃಂದದಿಂದ ಮೌನ ಪ್ರತಿಭಟನೆ

ಚಾಮರಾಜನಗರ, ಆ.13–ಶ್ರೀಕ್ಷೇತ್ರ ಧರ್ಮಸ್ಥಳವನ್ನು ಗುರಿಯಾಗಿಸಿಕೊಂಡು ಯಾವುದೇ ದಾಖಲೆಗಳಿಲ್ಲದೆ ನಿರಂತರವಾಗಿ ಅಪ ಪ್ರಚಾರ ಮಾಡುತ್ತಿರುವವರ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದಲ್ಲಿ ಧರ್ಮಸ್ಥಳ ಭಕ್ತವೃಂದ ಜನಾಗ್ರಹ ವೇದಿಕೆಯಿಂದ ಮೌನ ಪ್ರತಿಭಟನೆ ನಡೆಯಿತು.

ನಗರದ ಚಾಮರಾಜೇಶ್ವರ ದೇವಾಲಯದ ಆವರಣದಿಂದ ಘೋಷಣಾ ಫಲಕಗಳನ್ನು ಹಿಡಿದು ಮೆರವಣಿಗೆ ಹೊರಟ ಪ್ರತಿಭಟನಾಕಾರರು ಜಿಲ್ಲಾಡಳಿತ ಭವನಕ್ಕೆ ತಲುಪಿ, ಜಿಲ್ಲಾಡಳಿತದ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮೊದಲಾದೆಡೆಗಳಿಂದ ಮಂಜುನಾಥ ಸ್ವಾಮಿಯ ದರ್ಶನ ಪಡೆಯಲು ಸಾವಿರಾರು ಮಂದಿ ಭಕ್ತರು ಕ್ಷೇತ್ರಕ್ಕೆ ಆಗಮಿಸುತ್ತಾರೆ. ಆದರೆ, ಕಳೆದ ಕೆಲವು ವರ್ಷಗಳಿಂದ ಕೆಲವರು ಧರ್ಮಾಧಿಕಾರಿ ಡಿ.ವೀರೇಂದ್ರಹೆಗ್ಗಡೆ ಮತ್ತು ಅವರ ಕುಟುಂಬಸ್ಥರ ಹೆಸರಿಗೆ ಕಳಂಕ ತರುವಂತಹ ವೀಡಿಯೋಗಳ ತುಣುಕುಗಳನ್ನು ತಯಾರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬಂಡಳ್ಳಿ ಪಟ್ಟ ಮಠದ ಫಲಾಹಾರ ಪ್ರಭುದೇವ ಸ್ವಾಮೀಜಿ, ಮುಖಂಡರಾದ ರವಿಶಂಕರ್, ಕಾಗಲವಾಡಿ ಚಂದ್ರು, ಪ್ರಸಾದ್, ಮಹೇಂದ್ರ, ರಾಜೇಂದ್ರ, ಮಮತಾ, ಪ್ರಣಯ್, ಪ್ರಕಾಶ್, ಚಿಕ್ಕರಾಜು, ಶಿವು ವಿರಾಟ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.



ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಧರ್ಮಸ್ಥಳ ಭಕ್ತವೃಂದದಿಂದ ಮೌನ ಪ್ರತಿಭಟನೆ ನಡೆಯಿತು.

ಬಿಡಾಡಿ ದನಗಳ ವಶಕ್ಕೆ ಪಡೆದ ಪೊಲೀಸರು




ಪಟ್ಟಣದ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿದ್ದ ಬಿಡಾಡಿ ದನಗಳನ್ನು ಪೊಲೀಸರು ವಶಕ್ಕೆ ಪಡೆದರು

ಗುಂಡ್ಲುಪೇಟೆ, ಆ.13 (ಸೋಮ್.ಜಿ)– ಪಟ್ಟಣದ ಪೊಲಿಸರು ಮತ್ತು ಪುರಸಭೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಪಟ್ಟಣದ ಸುಗಮ ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತಿದ್ದ ಬಿಡಾಡಿ ದನಗಳನ್ನು ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮಲಗುವುದು ಅಡ್ಡಾದಿಡ್ಡಿಯಾಗಿ ಓಡಾಡುವ ಮೂಲಕ ಹೆದ್ದಾರಿಯಲ್ಲಿ ಸುಗಮಸಂಚಾರಕ್ಕೆ ಅಡ್ಡಿ ಮಾಡುತ್ತಿದ್ದ ಜಾನುವಾರುಗಳನ್ನು, ರಸ್ತೆಗೆ ಬಿಡದಂತೆ ಪುರಸಭೆ ಮುಖ್ಯಾಧಿಕಾರಿ ಶರವಣ ಹಾಗೂ ಪೊಲೀಸರು ಅವುಗಳ ಮಾಲೀಕರಿಗೆ ಹಲವಾರು ಬಾರಿ ಸೂಚನೆ ನೀಡಿದ್ದರೂ ಬೀದಿಗೆ ಬಿಡುತ್ತಿದ್ದರು.

ಈ ಹಿನ್ನೆಲೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಪಿಎಸ್‌ಐ ಸಾಹೇಬಗೌಡ ನೇತೃತ್ವದಲ್ಲಿ ಪೊಲೀಸರು ಪುರಸಭೆಯ ಸಿಬ್ಬಂದಿಗಳ ನೆರವಿನಿಂದ ಕಾರ್ಯಾಚರಣೆ ನಡೆಸಿ 11 ಹಸುಗಳನ್ನು ವಶಕ್ಕೆ ಪಡೆದು ಮೈಸೂರಿನ ಪಿಂಜರಾಪೋಲಿಗೆ ಕಳಿಸಿದರು.

ಮಾಜಿ ಗೌಡಿಕೆ ಗುರುಸಿದ್ದಪ್ಪ ನಿಧನ



ಬೇಗೂರು, ಆ.13–ಸಮೀಪದ ಚಿಕ್ಕಾಟಿ ಗ್ರಾಮದ ಮಾಜಿ ಗೌಡಿಕೆ ಗುರುಸಿದ್ದಪ್ಪ(76) ಬುಧವಾರ ಸಂಜೆ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರು ತಾಲೂಕಿನಾದ್ಯಂತ ಚಿರಪರಿಚಿತರಾಗಿದ್ದರಲ್ಲದೆ ಗುರು ಭಕ್ತರಾಗಿದ್ದರು. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 3 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಮೃಗಾಲಯ, ಕೆಆರ್‌ಎಸ್ ಪ್ರವೇಶ ದರ ಹೆಚ್ಚಳ ಕೈಬಿಡುವಂತೆ ಆಗ್ರಹ

ಬೆಂಗಳೂರು, ಆ.13–ವಿಶ್ವವಿಖ್ಯಾತ ಕೃಷ್ಣರಾಜ ಸಾಗರ ಬೃಂದಾವನ, ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಹಾಗೂ ರಂಗನತಿಟ್ಟು ಪಕ್ಷಿಧಾಮದ ಪ್ರವೇಶ ದರ ಹಾಗೂ ಬೋಟಿಂಗ್ ದರವನ್ನು ಸರ್ಕಾರವು ಇತ್ತೀಚೆಗೆ ಏಕಾಏಕಿ ಹೆಚ್ಚಿಸಿದ್ದು, ದರ ಹೆಚ್ಚಳವನ್ನು ಈ ಕೂಡಲೇ ಕೈಬಿಡುವಂತೆ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ವಿಧಾನ ಪರಿಷತ್ತಿನ ಅಧಿವೇಶನದ ಶೂನ್ಯವೇಳೆಯಲ್ಲಿ ಇಂದು ಈ ವಿಷಯ ಪ್ರಸ್ತಾಪಿಸಿದ ಅವರು, ಮೈಸೂರು ಸಾಂಸ್ಕೃತಿಕ ನಗರಿಯಾಗಿದ್ದು, ವಿಶ್ವವಿಖ್ಯಾತ ಕೃಷ್ಣರಾಜಸಾಗರ ಬೃಂದಾವನ ಹಾಗೂ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಪ್ರವೇಶ ದರವನ್ನು ಸರ್ಕಾರ ಆಗಸ್ಟ್ 1 ರಿಂದ ಏಕಾಏಕಿಯಾಗಿ ಹೆಚ್ಚಿಸಿದೆ. ದೇಸಿ ಪ್ರವಾಸಿ ಪ್ರಿಯರ ನೆಚ್ಚಿನ ಹಾಗೂ ಕೋಟ್ಯಾಂತರ ವಿದೇಶಿ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿರುವ ಮೈಸೂರಿಗೆ ವಾರಾಂತ್ಯದಲ್ಲಿ ಹಾಗೂ ಸರದಿ ಸಾಲು ರಜೆಗಳ ಸಂದರ್ಭಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿರುವುದು ಸರ್ವೇ ಸಾಮಾನ್ಯವಾಗಿದ್ದು, ಕೆಆರ್‌ಎಸ್ ಮತ್ತು ಮೃಗಾಲಯದ ಪ್ರವೇಶ ದರವನ್ನು ಏಕಾಏಕಿ ಅವೈಜ್ಞಾನಿಕವಾಗಿ ಹೆಚ್ಚಳ ಮಾಡಿ ಪ್ರವಾಸಿಗರ ಜೇಬಿಗೆ ಕತ್ತರಿ ಹಾಕಿರುವುದು ನ್ಯಾಯಸಮ್ಮತವಲ್ಲ. ಇದರಿಂದ ಪ್ರವಾಸಿಗರಿಗೆ ತೀವ್ರ ಹೊರೆಯಾಗಲಿದೆ. ಅಲ್ಲದೆ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರವೇಶ ದರ ಹಾಗೂ ಬೋಟಿಂಗ್ ದರವನ್ನು ಸಹ ಹೆಚ್ಚಳ ಮಾಡಿರುವುದು ಖಂಡನಾರ್ಹ ಕ್ರಮವಾಗಿದೆ. ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯ ನೆಪವೊಡ್ಡಿ ಪ್ರವೇಶ ದರದ ಏರಿಕೆಗೆ ಮುಂದುವರೆದಿರುವುದು ಸರಿಯಲ್ಲ. ಕೂಡಲೇ ಸರ್ಕಾರ ಕೋಟ್ಯಾಂತರ ಪ್ರವಾಸಿಗರ ಹಿತದೃಷ್ಟಿಯಿಂದ ಪ್ರವೇಶದರ ಹೆಚ್ಚಳವನ್ನು ಕೈಬಿಟ್ಟು ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ಮೂಲಕ ಮೈಸೂರಿನ ಸಾಂಸ್ಕೃತಿಕ ಹಿರಿಮೆ ಗರಿಮೆಯನ್ನು ಜಗತ್ತಿಗೆ ಪರಿಚಯಿಸುವ ಕಾರ್ಯಕ್ಕೆ ಕೈಜೋಡಿಸುವಂತೆ ಸರ್ಕಾರವನ್ನು ಆಗ್ರಹಿಸಿದರು. ಸಿ.ಎನ್.ಮಂಜೇಗೌಡರ ಪ್ರಶ್ನೆಗೆ ಉತ್ತರಿಸಿದ ವಿಧಾನ ಪರಿಷತ್ತಿನ ಸಭಾನಾಯಕರು ಆಗಿರುವ ಎನ್.ಎಸ್. ಬೋಸರಾಜು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಮಂಜೇಗೌಡರಿಗೆ ಭರವಸೆ ನೀಡಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಂಜನಗೂಡಿನಲ್ಲಿ
30x40 ಡಿ.ಸಿ. ಅಲಿನೇಷನ್ ಸೈಟುಗಳು
ರೂ. 9 ಲಕ್ಷ
ಮೊದಲು ಬಂದವರಿಗೆ ವಿಶೇಷ ರಿಯಾತಿ ದೊರೆಯುತ್ತದೆ
ಜಾಹೀರಾತು ಚೈತ
8792306996
ಬ್ಯಾಂಕ್ ಲೋನ್ ದೊರೆಯುತ್ತದೆ

ಗಾರ್ಡನರ್ ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನ್ ಕೆಲಸಕ್ಕೆ ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ:
81234 50066

Only @ 9,999/-
Beautician 3 month course including Nail Art, Mehandi , Make-up with Certificate.
Devraj Urs Road, Mysore
Mob: 9380705968
BEAUTICIAN wanted for ladies salon work

WANTED
Sales Staff: Male for Hardware Shop.
Minimum 2 years experience.
Kaveri Glass & Plywood & H/W Near Surya Bakery Circle, Hebbal, Mysore.
Mob: 7760266990

ಬೇಕಾಗಿದ್ದಾರೆ
ಅಕೌಂಟ್ ಮ್ಯಾನೇಜರ್
ಟ್ಯಾಲಿ ಕಲಿತಿರಬೇಕು
ಹೆಲ್ಪರ್ ಹುಡುಗರು ಬೇಕಾಗಿದ್ದಾರೆ
ಆಕರ್ಷಕ ಸಂಬಳ
ಜೈ ಭಾರತ್ ಮಾರ್ಕೆಟಿಂಗ್
ಅಶೋಕ ರಸ್ತೆ, ಮೈಸೂರು
88671 31704
0821- 4252464

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

RERA APPROVED — RAI ESTATES — MUDA APPROVED
E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಹೆಲ್ತ್‌ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೋಮೊ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು.
9916908454

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ
53ನೇ ಉಚಿತ ಕುಡಿತ ಬಿಡಿಸುವ ಶಿಬಿರ
ಆಗಸ್ಟ್ 17 ರಿಂದ 26ರ ವರೆಗೆ
88033 44999
97425 59999

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

ಬಾಡಿಗೆಗೆ / ಭೋಗ್ಯಕ್ಕೆ
2 BHK. ಪೂರ್ವದಿಕ್ಕು, ವಿಜಯನಗರ, ರೈಲ್ವೆ ಲೇಔಟ್ ಪಕ್ಕ, ಸೂರ್ಯ ಬೇಕರಿ ಹತ್ತಿರ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9844992488
9980026328

ಹೆಸರು ಬದಲಾವಣೆ
ಪುಟ್ಟಬುದ್ಧಿ S/o ಲೇ॥ ಬಸವರಾಜಪ್ಪ, ಲಿಂಗಾಯಿತರ ಬೀದಿ, ಸರಗೂರು ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲೂಕು, ಮೈಸೂರು, ಇಲ್ಲಿ ವಾಸವಿದ್ದು, ನನ್ನ ಹೆಸರನ್ನು 'ಎಸ್.ಬಿ. ರಾಜು' ಯಿಂದ 'ಪುಟ್ಟಬುದ್ಧಿ' ಎಂಬುದಾಗಿ ನೋಟರಿಯವರ ಸಮ್ಮುಖದಲ್ಲಿ ದಿನಾಂಕ 28/05/2025 ರಂದು ನಂಜನಗೂಡಿನಲ್ಲಿ ಬದಲಾಯಿಸಿಕೊಂಡಿರುತ್ತೇನೆ. ಮತ್ತು ನನ್ನ ಎಲ್ಲಾ ವ್ಯವಹಾರಗಳನ್ನು ಪುಟ್ಟಬುದ್ಧಿ ಎಂಬ ಹೆಸರಿನಿಂದ ವ್ಯವಹರಿಸುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಪುಟ್ಟಬುದ್ಧಿ

SITE FOR SALE
ನಮೂನೆ '3' 82x33 ಉಳ್ಳ ಸೈಟು ಮಾರಾಟಕ್ಕಿದೆ.
BEML ಸರ್ಕಲ್‌ನಿಂದ 1 ಕಿ.ಮೀ. ಕೂರ್ಗಳ್ಳಿ, ಮೈಸೂರು. ಸಂಪರ್ಕಿಸಿ
Mob: 9902634441

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

REQUIRED
WTP & STP Vendor / Services for an Apartment Complex. Contact:
9535820499, 0821-4534352

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಸೈಟು ಮಾರಾಟಕ್ಕಿದೆ
ಮೈಸೂರು ಜಿಲ್ಲಾ ಪಂಚಾಯತ್ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಮುಡಾ ಅನುಮೋದಿತ ಮತ್ತು ಇ –ಖಾತಾ, ಎಡಹಳ್ಳಿ ಗ್ರಾಮ, ಸೈಟ್ ನಂ. 83, ನಾರ್ತ್ ಫೇಸ್, 40x60
8971415815

DOCUMENT LOST
Property being vacant land bearing Plot No 22 comprised in survey No. 264/4 and 297/1, Bogadi village, Mysore Taluk, Mysore, Original MUDA Katha and Revenue Letter has been lost. No. ಮೈ.ನ.ಪ್ರಾ/ಖಾತಾ 55593/22-23.
Finders contact:
9449476236 / 9538630129

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಟೈಲರಿಂಗ್ ತರಬೇತಿ
Limited Offer - * Basic Tailoring * Advance Tailoring * Fashion Trendy Tailoring * Embroidery Works.
ತಕ್ಷಣ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620476665
9620436665, 6360737581

WANTED
Employee requirement at Nanjangud & Mysore Industry
* Welders (Arc & Argon) - 10 * Accountant 3 years & above (GST Filing & Billing) - 5 * Manpower handling Field Officers, 2 years experience and above - 2 * Delivery persons at Field (Male or female)-5. Contact:
Mob: 8296172693

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

2 Sites for Sale
(30x50) "ORANGE ENCLAVE"
Kadakola TVS Factory Road, Near Sinduvalli & Thalur
READY TO BUILD
DTCP approved. 20 Lakhs.
Mob: 95388-39926

SITES FOR SALE
Residential and semi commercial sites measuring 30x40 for sale in Hale Kesare Main Road, Adjacent to Army Layout, only 6.5 km from city
Call: 9606975149

CHANGE OF NAME
I, MUKTHAR AHMED KHAN, Resident of # 2542, 3rd Cross, 8th Main, 1st Stage, Rajiv Nagar, Mysore-570019, have changed my name from MUKTHAR AHAMED KHAN to MUKTHAR AHMED KHAN on my own free will vide Affidavit sworn in before Notary Asadulla Khan, Mysore dated 11.08.2025.
Sd/- MUKTHAR AHMED KHAN

WANTED
Employee requirement at Nanjangud & Mysore Industry
* Lorry Drivers with valid licence - 10 * Fork lift drivers with valid licence - 10 * Electricians with valid wireman licence - 5 * IBR Welder with valid licence - 2.
Contact:
Mob: 8296172693

SITES FOR SALE
MUDA & RERA Approved
E-khatha & bank loan available.
40x27, N/F @ Rs. 26,50,000
30x40, W/F @ Rs. 32,00,000
30x40, S/F @ Rs. 30,00,000
30x40, E/F @ Rs. 25,00,000
Call: 7795609173

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

HOUSES & OFFICE SPACE FOR RENT
@ Saraswathipuram, Kuvempunagar & surroundings.
S.S. Property Services (Opp. Kuvempu School) S.S. Puram, Mysore.
0821-2489111, 93421-25252

FOR SALE
1. 30x40 G+2 House @ Hebbal, Nr Sankranthi Circle
2. 30x40 Sites Near Jnana Bharathi Lyt Before Dhaddadhalli, JP Nagar
3. 27x60 & 30x45 Commercial present Old House @ Jayanagar
4.30x40 Sites Near RT Nagar BSNL Layout @ Just 22 Lakhs
5. 20x30 Houses @ Srirampura Kuvempunagar, Aravind Nagar
PRAKRUTHI PROPERTIES
95386 90359, 90359 90359

ಮನೆ ಬಾಡಿಗೆಗೆ & ಭೋಗ್ಯಕ್ಕೆ
30x40 -2 ರೂಮ್, ಗೀಸರ್ 24x7 ನೀರು ವ್ಯವಸ್ಥೆಯುಳ್ಳ ಮನೆ, ಟಿ.ನರಸೀಪುರದಲ್ಲಿ ಕಾಲೇಜ್ ರಸ್ತೆ, ಎಸ್‌ಬಿಐ ಬ್ಯಾಂಕ್ ಎದುರು ಇದೆ.
9448037518

ತಕ್ಷಣ ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ AWBM ಕಂಪನಿಗೆ 195 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC(Pass), PUC, Diploma, ITI, any Degree etc. ವಯೋಮಿತಿ 18–34 Years
ತಿಂಗಳಿಗೆ : 20,000 – 26,000
(ಉಚಿತ ಊಟ + ವಸತಿ + Promotion)
ಕೂಡಲೇ ಕರೆಮಾಡಿ : ದೀಪ್ತಿ
7406821955, 7349699460

ಬೇಕಾಗಿದ್ದಾರೆ
Max Solar Factory ಯಲ್ಲಿ ಕೆಲಸ ಮಾಡಲು ಯುವಕ–ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 20–32
ಟೆಲಿಕಾಲರ್ – 10, ರಿಸಪ್ಷನಿಸ್ಟ್ – 02
ಫೀಲ್ಡ್ ಎಕ್ಸಿಕ್ಯೂಟಿವ್ – 15
ದ್ವಿಚಕ್ರ ವಾಹನ ಕಡ್ಡಾಯ.
8431811770

ಬೇಕಾಗಿದ್ದಾರೆ
ಸಪ್ಲಯರ್ ಹಾಗೂ ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
(ನಾನ್‌ವೆಜ್ ಹೋಟೆಲ್ ಸರಸ್ವತಿಪುರಂ, ಮೈಸೂರು)
9738405038

ತಕ್ಷಣ ಬೇಕಾಗಿದ್ದಾರೆ
ಬೋಗಾದಿ ಪೆಟ್ರೋಲ್ ಬಂಕ್ ಮತ್ತು ಗದ್ದುಗೆ ರಸ್ತೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 18000 + W/o
ಸಂಪರ್ಕಿಸಬೇಕಾದ ಸಂಖ್ಯೆ
9880727819 / 9620667819

ಬೇಕಾಗಿದ್ದಾರೆ
ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಮತ್ತು ಯುವತಿಯರನ್ನು ತುರ್ತಾಗಿ ಬೇಕಾಗಿದ್ದಾರೆ.
Nutritionists / Dieticians - 500 ಹುದ್ದೆಗಳು
ನರ್ಸ್‌ಗಳು (Nurses) - 1000 ಹುದ್ದೆಗಳು
ಡಾಕ್ಟರ್‌ಗಳು (Doctors) (MBBS, BAMS) - 500 ಹುದ್ದೆಗಳು
ವಿದ್ಯಾರ್ಹತೆ: ಡಿಪ್ಲೊಮಾ ಅಥವಾ ಯಾವುದೇ ಪದವಿ
ಸಂಬಳ: 15,000 ರಿಂದ 1,00,000 ಪ್ರತಿ ತಿಂಗಳು
ಸಂಪರ್ಕಿಸಿ
9632082448, 9036961447

ಸುವರ್ಣ ಯಾತ್ರ
ನೇಪಾಳ ಪ್ರವಾಸ 9 ದಿನಗಳು 11/9/25
ಚಾರ್ಧಾಮ್ ಯಾತ್ರ 13 ದಿನಗಳು 11/9/25
ಪುರಿ ಜಗನ್ನಾಥ ಪ್ರವಾಸ 29/8/25
ಗುಜರಾತ್ ಪ್ರವಾಸ 8 ದಿನಗಳು 5/9/25
ಶಿರಡಿ ಪ್ರವಾಸ 3 ದಿನಗಳು 29/8/25
9008381022 / 9019462508

ದೊಡ್ಡ ಮಳಿಗೆ ಬಾಡಿಗೆಗೆ & ಭೋಗ್ಯಕ್ಕೆ
30x60 ಅಳತೆಯ, ವಿಶಾಲವಾದ ಪಾರ್ಕಿಂಗ್, ನೀರು ವ್ಯವಸ್ಥೆಯುಳ್ಳ ಮಳಿಗೆಯು, ಆಫೀಸ್, ಟ್ರೈನಿಂಗ್, ಲ್ಯಾಬ್ ಹಾಗೂ ಗೋಡೋನ್‌ಗೆ ಸೂಕ್ತವಾಗಿದೆ, ಕಾಲೇಜ್ ರಸ್ತೆ, ಎಸ್‌ಬಿಐ ಬ್ಯಾಂಕ್ ಎದುರು, ಟಿ.ನರಸೀಪುರ
9448037518

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob : 9686071750

ಮೈಸೂರಿನಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಸೈಟುಗಳು ಬೇಕಾದಲ್ಲಿ
ಕೂಡಲೇ ಸಂಪರ್ಕಿಸಿ
8277047300

ಸೈಟು ಮಾರಾಟಕ್ಕಿದೆ
30x50 DTCP 11 A, ಖಾತೆ ರೇರಾ ಅಪ್ರೂಡ್ ಸೈಟು ಮಾರಾಟಕ್ಕಿದೆ, 24 ಲಕ್ಷಗಳು, ಶ್ರೀಧರ ಬಡಾವಣೆ (ಸೈಟು ತಳೂರು ಮುಖ್ಯ ರಸ್ತೆಗೆ ತುಂಬಾ ಹತ್ತಿರದಲ್ಲಿದೆ) ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

OFFICE SPACE FOR RENT
OFFICE SPACE OF I FLOOR 1000 Sq. Ft EAST OF VISHWAMANAVA DOUBLE ROAD KUVEMPUNGAR, MYSORE IS AVAILABLE FOR RENT
CONTACT
9620607138
8105751169

"Mysore Queens Boutique" – Now Above ICICI Bank, J.P. Nagar
CALL
8970607835

ಕಳೆದಿದೆ
ಎಂ. ಶಿವಕುಮಾರ್ S/o ಲೇಟ್ ಮೂರ್ತಿ, ಸೋಮೇಶ್ವರಪುರ ಗ್ರಾಮ, ಮೈಸೂರು ತಾಲೂಕು ಮೈಸೂರು ಜಿಲ್ಲೆ, ಇವರ ತಂದೆಯಾದ ಶ್ರೀ ಎಂ. ಮೂರ್ತಿ ರವರ ಹೆಸರಿನಲ್ಲಿರುವ ಮೈಸೂರು ನಗರದ ನಾಚನಹಳ್ಳಿ ಗ್ರಾಮದ ಬಂಜರ್ ನಂ. 117ರಲ್ಲಿ ಸ್ವತ್ತಿನ ಸಂಖ್ಯೆ 107/2 ರಲ್ಲಿ 30x40 ಅಡಿ ನಿವೇಶನದ ಮೂಲ ಹಕ್ಕು ಪತ್ರವು ನಮ್ಮ ಮನೆಯನ್ನು ಶುಚಿಗೊಳಿಸುವಾಗ ಕಳೆದುಹೋಗಿರುತ್ತದೆ, ಸಿಕ್ಕವರು ಸಂಪರ್ಕಿಸಿ.
9845527213

ಬೇಕಾಗಿದ್ದಾರೆ
ಮೈಸೂರ್ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಮಯ: 1st shift 7:00am to 3:30pm
2nd shift 2:00pm to 10:00pm
ವಿದ್ಯಾಭ್ಯಾಸ-SSLC Pass/Fail
Factory Labour Work Only
ಸುಷ್ಮಾ 7892725603
ಪ್ರಕಾಶ್ 8971460235

ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು, ಪಿ.ಯು.ಸಿ ವಿದ್ಯಾಭ್ಯಾಸ ಜೊತೆಗೆ ಕಂಪ್ಯೂಟರ್ ತಿಳಿದಿರಬೇಕು. ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಗೊತ್ತಿರಬೇಕು. ಹುಡುಗರು, ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮತ್ತು ಡ್ರೈವಿಂಗ್ ತಿಳಿದಿರಬೇಕು.(ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು) ಅವರ ಕೆಲಸಕ್ಕೆ ತಕ್ಕಂತೆ ವೇತನ ನೀಡಲಾಗುವುದು. ಮೈಸೂರು ನಗರದವರಿಗೆ ಮೊದಲ ಆದ್ಯತೆ.
9902838601 / 8217464915

ಒಂದು ಮಳಿಗೆ ಬಾಡಿಗೆಗೆ ಇದೆ
ಇನ್ನೊಂದು ಭೋಗ್ಯಕ್ಕೆ ಇದೆ
ಇನ್ನೊಂದು ಆಫೀಸ್ ಅಥವಾ ಗೋಡೌನ್‌ಗೆ ಇದೆ. ಇರ್ವಿನ್ ರಸ್ತೆ, ಮೈಸೂರು.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
9740785524

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಅಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ
VASANTHA BUILDERS
8151035074, 9035012579

ಬೇಕಾಗಿದ್ದಾರೆ
ಸಸ್ಯಾಹಾರಿ ಮತ್ತು ಮಾಂಸಹಾರಿ. ಫಾಸ್ಟ್‌ಫುಡ್‌ನಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ.
ಸಂಪರ್ಕಿಸಿ
8431315761

NSE Nypunya School of Excellence MYSURU
ಶಾಲಾ ಬಸ್ ಚಲಾಯಿಸಲು ಹೆವಿ ಲೈಸೆನ್ಸ್ ಉಳ್ಳ ಅನುಭವಿ ಚಾಲಕರು ಬೇಕಾಗಿದ್ದಾರೆ.
Mob: 70228 49856
ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ / ಅಟೆಂಡರ್ ಬೇಕಾಗಿದ್ದಾರೆ.
Mob: 96069 59451

ಕೆಲಸಕ್ಕೆ ಬೇಕಾಗಿದ್ದಾರೆ
ವಿಜಯನಗರ 4ನೇ ಹಂತ ಮೈಸೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ ವೆಜ್ ಅಂಡ್ ನಾನ್ ವೆಜ್ ರೆಸ್ಟೋರೆಂಟ್‌ಗೆ
ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು – 1
(ಸಮಯ – ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ)
ಸರ್ವರ್ – 1, ಕ್ಯಾಪ್ಟನ್ – 1
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9353263974

INDUSTRIAL SITE FOR SALE
45x100 = 4500 sq.ft. with shed, 12 HP power, 1 borewell, industrial area 'A' Layout, Near Highway Circle, Bannimantap, Mysore.
Mob: 6364815339

ತಕ್ಷಣ ಬೇಕಾಗಿದ್ದಾರೆ
WANTED
Sri Sapthagiri Builders & Developers
Mysore, Hebbal 1st Stage.
* Driver - 2
* Marketing Head - 2
* Telecallers - 2
9591828444 / 8095856607

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಮ್ಯಾನೇಜರ್ 1
(2 ವರ್ಷಗಳ ಅನುಭವ ಹೊಂದಿರಬೇಕು)
ಲೇಡೀಸ್ ಸ್ಟಾಫ್ – 1
ಗ್ರಾಫಿಕ್ ಡಿಸೈನರ್ – 1
(2–3 ವರ್ಷಗಳ ಅನುಭವ ಹೊಂದಿರಬೇಕು)
ಆಕರ್ಷಕ ಸಂಬಳದೊಂದಿಗೆ
ಯಶ್ಮಿತಾ ಬಿಗ್‌ಪ್ರಿಂಟ್ಸ್, ಬೋಗಾದಿ
ಸಂಪರ್ಕಿಸಿ: 8884140303



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಕೇರ್ ಟೇಕರ್ ಕೆಲಸ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವವಿರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಮನೆ ಹಾಗೂ ಅಡುಗೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಗ್ಗೆ ಮತ್ತು ರಾತ್ರಿ ಅಥವಾ 24 ಗಂಟೆಗಳು. ಸಂಪರ್ಕಿಸಿ
89517 17070

WANTED
ACCOUNTANT (FEMALE) & WRITER
Salary: 12K - 20K.
Timings: 10.30 am to 7 pm.
New Royal Furnishing Irwin Road, Mysore.
Mob: 8050744784

ಸೈಟ್ ಮಾರಾಟಕ್ಕಿದೆ
30x100 = 3000 ಚದರಡಿ, 11 'A' Khatha, ಕೋಟೆಹುಂಡಿ.
9481170043, 8453491901

FOR SALE
Grand i10 (Wine Red) 2014 Sportz, Petrol, single owner, 63,000 km. Good condition. Rs. 4.25 Lakhs.
Mob: 9845176247

FOR SALE
Brand new fully furnished 4 BHK triplex house, JSS Layout, Sardar Vallabh Bhai Patel Nagara. 92 Lakhs, negotiable.
Mob: 8147706492

ತಕ್ಷಣ ಬೇಕಾಗಿದ್ದಾರೆ
J.K. Tyre, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC Pass or Fail ಹುಡುಗರು ಬೇಕಾಗಿದ್ದಾರೆ. (Age limit 18 - 40) ಸಂಬಳ: 15,000. ಅನುಕೂಲತೆ: ESI, PF and Canteen ಸೌಲಭ್ಯವಿರುತ್ತದೆ, ಸಂಪರ್ಕಿಸಿ:
6362491336 / 9353430078
9611601179

HOUSE FOR SALE
New 3 BHK independent house, East face @ Lalithadri Nagar (South), near Ring Road, Behind Indian Oil Petrol Bunk.
9110696752 / 9663452259

HOUSE FOR RENT
1st Floor, 2 BHK, #66, 3rd Cross, Anikethana Road 'I' Block, Kuvempunagar (Near KEB).
Vegetarians only.
Rent: Rs. 12,000 PM
Mob: 9916573731

26 ನಿವೇಶನಗಳು ಮಾರಾಟಕ್ಕಿದೆ.
ರಿಜಿಸ್ಟ್ರೇಷನ್‌ಗೆ ರೆಡಿ ಇರುತ್ತದೆ.
ಜಯಪುರ ಗ್ರಾಮ, ಮೈಸೂರು ತಾ॥ H.P ಪೆಟ್ರೋಲ್ ಬಂಕ್ ಹಿಂಭಾಗ H.D. ಕೋಟೆ ಮುಖ್ಯ ರಸ್ತೆಯಿಂದ ಸುಮಾರು 500 ಮೀಟರ್ ಒಳಭಾಗದಲ್ಲಿದೆ.
9448166798

ಮೈಸೂರು ತಾಲ್ಲೂಕು, ಜೈಪುರ ಹೋಬಳಿ, ಹಂಪಾಪುರ ಹೋಬಳಿ ಹಾಗೂ ಹುಲ್ಲಹಳ್ಳಿ ಹೋಬಳಿ ಹಾಗೂ ಗದ್ದಿಗೆ ಮುಖ್ಯ ರಸ್ತೆಯಲ್ಲಿ 9 ಗುಂಟೆ, 12 ಗುಂಟೆ, 18 ಗುಂಟೆ, 27 ಗುಂಟೆ, 36 ಗುಂಟೆ ಹಾಗೂ 1.4 ಗುಂಟೆ ಜಮೀನು ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಆಸಕ್ತಿ ಇರುವವರು ಸಂಪರ್ಕಿಸಿ:
Mob: 9945661696

MYSURU RETINA CARE
STAFF REQUIRED
1) O.T. Technican
2) Optometrist
Contact numbers
7338369364 / 0821-2543244
22A, Sri Guru Krupam, 1st Floor, New Kantharaj Urs Road, Niveditha Nagar, Mysore, above SRI VEG HOTEL

ಹೊಸ ಮನೆ ಮಾರಾಟಕ್ಕಿದೆ
MUDA ಖಾತೆ 20x30, 3 BHK, E/F, 86 ಲಕ್ಷಕ್ಕೆ ಲಲಿತಾದ್ರಿನಗರ (ಬಾಲಾಜಿ ಲೇಔಟ್)ನಲ್ಲಿ ಮಾರಾಟಕ್ಕಿದೆ.
(Good Location & Area)
7760065890/9480222708

ಕಮರ್ಷಿಯಲ್ ಸ್ವತ್ತುಗಳು ಮಾರಾಟಕ್ಕಿದೆ.
45x60 K.S.R.T.C ಬಸ್ ಡಿಪೋ ಹತ್ತಿರ, 80 ಅಡಿ ರಸ್ತೆ, 'N' ಬ್ಲಾಕ್, R-1- ಕಾರ್ನರ್ ಸ್ವತ್ತು ಕುವೆಂಪುನಗರ, ಮೈಸೂರು. 50x80 R.M.P. ಮುಖ್ಯ ರಸ್ತೆ, H.D.F.C. ಬ್ಯಾಂಕ್ ಪಕ್ಕ, ಖುಷಬ್ ಗ್ರಾನೈಟ್ ಸ್ವತ್ತು 80 ಅಡಿ ರಸ್ತೆ, ಕುವೆಂಪುನಗರ, ಮೈಸೂರು
9448166798

ಕಳೆದಿದೆ
D. Jayanna, S/o Late Kenchegowda, M.G. ಕೊಪ್ಪಲು, ಮೈಸೂರು, ಮಹದೇಶ್ವರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿರುವ ಸೈಟು ನಂ. 255ರ ಕ್ರಯ ಪತ್ರ ಕಳೆದುಹೋಗಿದೆ. ದಯಮಾಡಿ ಸಿಕ್ಕಿದವರು ಸಂಪರ್ಕಿಸಿ:
Mob: 9919917519

ಮಳಿಗೆ ಬಾಡಿಗೆಗೆ ಇದೆ
16X21 ತ್ಯಾಗರಾಜ ರಸ್ತೆ, 101 ಗಣಪತಿ ದೇವಸ್ಥಾನದ ಎದುರು, ಮೈಸೂರು.
Mob: 9845920613

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಧರ್ಮಸ್ಥಳದ ವಿರುದ್ಧದ ಅಪಪ್ರಚಾರಕ್ಕೆ ಕಡಿವಾಣ ಹಾಕಲು ಆಗ್ರಹಿಸಿ

ಸಾಲಿಗ್ರಾಮದಲ್ಲಿ ಶ್ರೀಧರ್ಮಸ್ಥಳ ಭಕ್ತಾಭಿಮಾನಿಗಳ ಪ್ರತಿಭಟನೆ

ಸಾಲಿಗ್ರಾಮ, ಆ.13– ಶ್ರೀಕ್ಷೇತ್ರ ಧರ್ಮಸ್ಥಳದ ಪಾವಿತ್ರ್ಯತೆಗೆ ಧಕ್ಕೆ ತರುತ್ತಿರುವವರ ವಿರುದ್ಧ ಕಠಿಣ ಕಾನೂನು ಕ್ರಮದ ಜೊತೆಗೆ ಕ್ಷೇತ್ರದ ವಿರುದ್ಧ ನಡೆಸುತ್ತಿರುವ ಅಪಪ್ರಚಾರಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿ ಪಟ್ಟಣದಲ್ಲಿ ಶ್ರೀಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆ ಹಾಗೂ ಇತರೆ ಸಂಘಟನೆಗಳ ಮುಖಂಡರು ಬುಧವಾರ ಪ್ರತಿಭಟನೆ ನಡೆಸಿ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪಟ್ಟಣದ ಗಾಂಧಿ ಪ್ರತಿಮೆ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದ ಭಕ್ತಾಭಿಮಾನಿಗಳು, ಕ್ಷೇತ್ರದ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬ ಹಾಗೂ ಧರ್ಮಸ್ಥಳವನ್ನು ಗುರಿಯಾಗಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಅವರ ತೇಜೋವಧೆ ಮಾಡಲಾಗುತ್ತಿದೆ. ಈ ಬೆಳವಣಿಗೆಗಳಿಂದ ಭಕ್ತರ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಿದೆ. ಅಲ್ಲದೇ ಧರ್ಮಸ್ಥಳ ಪವಿತ್ರ ಧರ್ಮ ಕ್ಷೇತ್ರವಾಗಿದೆ. ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು ಕ್ಷೇತ್ರದ ಮಹಿಮೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಅಲ್ಲದೇ ರಾಜ್ಯದಲ್ಲಿ ಸಾಕಷ್ಟು ಜನಪರ ಯೋಜನೆಗಳನ್ನು ರೂಪಿಸಿ ಜನತೆಗೆ ಅನುಕೂಲ ಕಲ್ಪಿಸಿಕೊಡುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಕ್ಷೇತ್ರ ಮತ್ತು ಧರ್ಮಾಧಿಕಾರಿಗಳ ವಿರುದ್ಧ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಅಪಪ್ರಚಾರ ಮಾಡುತ್ತಿರುವುದು ಖಂಡನೀಯ. ಈಗಾಗಲೇ ಸರ್ಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸುತ್ತಿದೆ. ಸೂಕ್ತ ತನಿಖೆಯಿಂದ ಸತ್ಯಾಂಶ ಹೊರಬರಲಿ. ಆದರೆ ಕೆಲ ಯೂಟ್ಯೂಬರ್‌ಗಳು ಸಾಮಾಜಿಕ ಜಾಲತಾಣದಲ್ಲಿ ಆಧಾರ ರಹಿತವಾದ ಆರೋಪಗಳನ್ನು ಮಾಡುತ್ತಿದ್ದು, ಅಂತಹವರ ವಿರುದ್ಧ ಸರ್ಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಖಂಡ ಗುಣಪಾಲ್ ಜೈನ್ ಮಾತನಾಡಿ, ಧರ್ಮಸ್ಥಳ ಹಾಗೂ ಧರ್ಮಾಧಿಕಾರಿಗಳ ತೇಜೋವಧೆ ಮಾಡಲಾಗುತ್ತಿದೆ. ನಮ್ಮ ನಡುವೆಯೇ ವಿಷ ಬೀಜ ಬಿತ್ತಿ ಜೈನ ಸಮಾಜದವರ ಭಾವನೆಗಳಿಗೆ ಕೆಲ ಕಿಡಿಗೇಡಿಗಳು ಉದ್ದೇಶ ಪೂರ್ವಕವಾಗಿ ಧಕ್ಕೆ ಉಂಟು ಮಾಡುತ್ತಿದ್ದಾರೆ. ಇದನ್ನು ನಮ್ಮ ಸಮಾಜ ತೀವ್ರವಾಗಿ ಖಂಡಿಸುತ್ತದೆ ಎಂದರು.

ಪ್ರತಿಭಟನೆಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಮೆಡಿಕಲ್ ರಾಜಣ್ಣ, ಜಿಲ್ಲಾ ಜನಜಾಗೃತಿ ವೇದಿಕೆ ಬಾಲ, ಮನೋಹರ್, ರಾಜೇಂದ್ರ ಪ್ರಸಾದ್, ಎಸ್.ಕೆ.ಮಧುಚಂದ್ರ, ಶೇಖರ್, ಪ್ರೇಮ್ ಕುಮಾರ್, ಹೇಮಂತ್, ಮಹೇಶ್, ಲೋಕನಾಥ್, ಸಂತೋಷ್, ಜಗದೀಶ್ ಸೇರಿದಂತೆ ಮತ್ತಿತರರಿದ್ದರು.


ಧರ್ಮಸ್ಥಳ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಲಾಯಿತು.

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ

ಮಾಜಿ ಶಾಸಕ ಬಿ.ಹರ್ಷವರ್ಧನ್

ಮಲ್ಕುಂಡಿ, ಆ.13– ಮುಂಬರುವ ಜಿಪಂ, ತಾಪಂ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಕಾರ್ಯಕರ್ತರು ಸಜ್ಜಾಗಬೇಕು ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಕರೆ ನೀಡಿದರು.

ಇಲ್ಲಿಗೆ ಸಮೀಪದ ಹೆಡಿಯಾಲದಲ್ಲಿ ನುಗು ಏತ ನೀರಾವರಿ ಯೋಜನೆ ಅಡಿ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ನಾನು ಶಾಸಕನಾಗಿದ್ದ ವೇಳೆ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರಿಂದ ಹೆಡಿಯಾಲ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸಲು 30 ಕೋಟಿ ಅನುದಾನ ತಂದಿದ್ದೆ. ಆದರೆ ಕಾಮಗಾರಿ ವಿಳಂಬವಾಗಿದ್ದು, ರೈತರಿಗೆ ತೊಂದರೆಯಾಗಿದೆ. ಪರಿಹಾರ ನೀಡದ ಹಿನ್ನಲೆಯಲ್ಲಿ ರೈತರು ಕಾಮಗಾರಿಗೆ ಅಡ್ಡಿಪಡಿಸಿರುವ ವಿಷಯ ನನ್ನ ಗಮನಕ್ಕೆ ಬಂದಿದೆ. ಸರ್ಕಾರ ರೈತರಿಗೆ ಪರಿಹಾರ ನೀಡಿ ಕಾಮಗಾರಿ ಪೂರ್ಣಗೊಳಿಸಬೇಕಿತ್ತು. ಆದರೆ ವಿಳಂಬವಾಗಿದೆ. ಶಾಸಕರು ರೈತರ ಮನವೊಲಿಸುವಲ್ಲಿ ವಿಫಲರಾಗಿದ್ದಾರೆ. ಇದೀಗ ನಾನು ರೈತರ ಮನವೊಲಿಸಿದ್ದು, ತಕ್ಷಣ ಸರ್ಕಾರ ಕಾಮಗಾರಿ ಮುಂದುವರೆಸಿ ಕೆರೆಗಳನ್ನು ತುಂಬಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ನೆಪದಲ್ಲಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಅಲ್ಲದೇ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಹೆಚ್ಚಳ ಮಾಡಿದೆ. ಸರ್ಕಾರದ ದುರಾಡಳಿತದಿಂದ ಬೇಸತ್ತಿರುವ ಜನತೆ ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ರೈತ ಶಿವಾನಂದ ಮಾತನಾಡಿ, ನಮಗೆ ಯಾವುದೇ ಪರಿಹಾರ ನೀಡದೇ ನಮ್ಮ ಜಮೀನುಗಳಲ್ಲಿ ಕಾಮಗಾರಿ ನಡೆಸಲಾಗುತ್ತಿತ್ತು. ಹೀಗಾಗಿ ಪರಿಹಾರ ನೀಡುವ ತನಕ ಕಾಮಗಾರಿ ನಡೆಸಲು ಅವಕಾಶ ನೀಡದೇ ತಡೆ ಹಿಡಿಯಲಾಗಿತ್ತು. ಇದೀಗ ಮಾಜಿ ಶಾಸಕ ಬಿ.ಹರ್ಷವರ್ಧನ್ ಪರಿಹಾರ ಕೊಡಿಸುವ ಭರವಸೆ ನೀಡಿದ್ದು, ಕಾಮಗಾರಿ ಮುಂದುವರೆಸಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕ ರಂಗನಾಯಕ, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ತಾಪಂ ಮಾಜಿ ಸದಸ್ಯ ಹುರಚಂದ್ರು, ಎಸ್.ಬಸವರಾಜ್, ಹುರ ಶಕ್ತಿ ಕೇಂದ್ರದ ಅಧ್ಯಕ್ಷ ಮಹೇಶ್, ದೇವರಾಯಶೆಟ್ಟಿಪುರ ಪಿಎಸಿಎಸ್ ಅಧ್ಯಕ್ಷ ಕೆಂಪಣ್ಣ, ಮಂಜುನಾಥ್, ಮಲ್ಲೇಶ್, ಪರಶಿವಮೂರ್ತಿ, ಶಿವನಾಗಪ್ಪ, ಮಲ್ಲ, ಸಿದ್ದರಾಜು, ಬಸವರಾಜ್, ಗುರುಪ್ರಸಾದ್ ಸೇರಿದಂತೆ ಇತರರಿದ್ದರು.


ಕಾಮಗಾರಿಯನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಪರಿಶೀಲಿಸಿದರು.

ತಾಯೂರು ಪಿಎಸಿಎಸ್‌ಗೆ ಜ್ಞಾನೇಶ್ ಅಧ್ಯಕ್ಷ, ಶಿವಣ್ಣ ಉಪಾಧ್ಯಕ್ಷ

ತಿ.ನರಸಿಪುರ, ಆ.13– ತಾಲೂಕಿನ ತಾಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹರಿಹರಪುರದ ಆರ್.ಜ್ಞಾನೇಶ್, ಉಪಾಧ್ಯಕ್ಷರಾಗಿ ಹಾರೋಪುರ ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜ್ಞಾನೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಹಾರೋಪುರ ಶಿವಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಹೆಚ್.ಎನ್.ಸುಮ ಘೋಷಿಸಿದರು.

ಈ ವೇಳೆ ನಿರ್ದೇಶಕರಾದ ಎಂ.ಬಸವರಾಜು, ಜಿ.ಪಿ.ಮಹದೇವ ಪ್ರಸಾದ್, ಟಿ.ಪಿ.ಮಹೇಶ್, ಜಿ.ಎಂ.ಮಹದೇವಸ್ವಾಮಿ, ಟಿ.ಆರ್.ಲೋಕೇಶ್, ಕುಮಾರ, ಪುಟ್ಟಸ್ವಾಮಿ, ಮುದ್ದಮಾದೇಗೌಡ, ಸಾಕಮ್ಮ ಚಾಮಮ್ಮ ಚುನಾವಣಾ ಸಭೆಯಲ್ಲಿ ಹಾಜರಿದ್ದು ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಆರ್.ಜ್ಞಾನೇಶ್ ಮಾತನಾಡಿ, ಎಲ್ಲಾ ನಿರ್ದೇಶಕರು ನನ್ನ ಮೇಲೆ ವಿಶ್ವಾಸವಿಟ್ಟು 2ನೇ ಅವಧಿಗೂ ನನ್ನನ್ನೇ ಅಧ್ಯಕ್ಷನಾಗಿ ಆಯ್ಕೆ ಮಾಡಿದ್ದೀರಾ. ನಿಮ್ಮ ನಂಬಿಕೆ ಹುಸಿಗೊಳಿಸದೇ ಯಾವುದೇ ಕಪ್ಪು ಚುಕ್ಕೆ ಇಲ್ಲದಂತೆ ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ನೇರವಾಗಿ ತಲುಪಿಸುವ ಮೂಲಕ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ ಜಿಲ್ಲಾ ಬ್ಯಾಂಕ್‌ನಿಂದ ಹೆಚ್ಚಿನ ಸಾಲ ಪಡೆದು ರೈತರಿಗೆ ಸಾಲ ನೀಡುವುದಾಗಿ ಭರವಸೆ ನೀಡಿದರು.

ಜಿಲ್ಲಾ ಬ್ಯಾಂಕ್ ಮೇಲ್ವಿಚಾರಕ ಶಿವಲಿಂಗೇಗೌಡ, ಸಿಇಓ ಪ್ರಮೋದ್ ಕುಮಾರ್, ಹಿರಿಯ ಸಹಾಯಕ ಆರ್.ಕಿಶೋರ್ ಕುಮಾರ್ ಮತ್ತಿತರರಿದ್ದರು.


ತಾಯೂರು ಪಿಎಸಿಎಸ್ ಅಧ್ಯಕ್ಷರಾಗಿ ಜ್ಞಾನೇಶ್, ಉಪಾಧ್ಯಕ್ಷರಾಗಿ ಶಿವಣ್ಣ ಆಯ್ಕೆಯಾದರು.

ಹಾಡಹಗಲೇ ಭಾರೀ ಚಿನ್ನಾಭರಣ, ನಗದು ಕಳ್ಳತನ

ನಂಜನಗೂಡು, ಆ.13– ಸಿನಿಮೀಯ ಮಾದರಿ ಕಳ್ಳರು ತಮ್ಮ ಕೈಚಳಕ ತೋರಿ ಮನೆ ಮಾಲೀಕರ ಕಣ್ಣೆದುರೇ, ಹಾಡಹಗಲೇ ಮನೆ ಹಿಂಬಾಗಿಲನ್ನು ಮೀಟಿ 65 ಗ್ರಾಂ ಚಿನ್ನ, 1.40 ಲಕ್ಷ ರೂ. ದೋಚಿ ಪರಾರಿಯಾಗಿರುವ ಘಟನೆ ಬುಧವಾರ ನಗರದ ಚಾಮುಂಡಿ ಟೌನ್‌ಶಿಪ್ ಬಡಾವಣೆಯಲ್ಲಿ ನಡೆದಿದೆ.

ನೆಸ್ಲೆ ಕಾರ್ಖಾನೆ ಉದ್ಯೋಗಿ ಪುನೀತ್ ಕುಮಾರ್ ಅವರ ಮನೆಯಲ್ಲೇ ಕಳ್ಳತನ ನಡೆದಿರುವುದು. ಬುಧವಾರ ಬೆಳಗ್ಗೆ 10.30ರಲ್ಲಿ ಪುನೀತ್ ಕುಮಾರ್ ದಂಪತಿ ಕೆಲಸ ನಿಮಿತ್ತ ಅಂಚೆ ಕಚೇರಿಗೆ ತೆರಳಿದ್ದರು ಎನ್ನಲಾಗಿದೆ. ಈ ವೇಳೆ ಮನೆ ಮುಂಭಾಗ ಒಬ್ಬ ಕಳ್ಳ ಕಾರು ನಿಲ್ಲಿಸಿಕೊಂಡು ನಿಂತಿದ್ದ. ಮತ್ತೊಬ್ಬ ಮನೆ ಹಿಂಬಾಗಿಲನ್ನು ಮುರಿದು ಮನೆಯೊಳಗೆ ನುಗ್ಗಿ ಚಿನ್ನಾಭರಣ ಮತ್ತು ನಗದು ದೋಚುತ್ತಿದ್ದ ವೇಳೆ ಪುನೀತ್ ಕುಮಾರ್ ದಂಪತಿ ಕೆಲಸ ಮುಗಿಸಿಕೊಂಡು ವಾಪಸ್ ಮನೆಗೆ ಬಂದಿದ್ದಾರೆ. ಮನೆ ಮುಂಭಾಗ ನಿಂತಿದ್ದ ಕಾರನ್ನು ನೋಡಿ ಯಾರೋ ನಿಂತಿದ್ದಾರೆ ಎಂದು ಗೇಟ್ ತೆರೆದು ಮನೆಯೊಳಗೆ ಪ್ರವೇಶಿಸಿದ್ದಾರೆ. ಈ ವೇಳೆ ಕಾರಿನೊಳಗೆ ಕುಳಿತಿದ್ದ ಕಳ್ಳ ನೀಡಿದ ಸೂಚನೆ ಗಮನಿಸಿ ಎಚ್ಚೆತ್ತ ಮನೆಯ ಒಳಗೆ ಕಳ್ಳತನ ಮಾಡುತ್ತಿದ್ದ ಕಳ್ಳ 1.40 ಲಕ್ಷ ರೂ. 65 ಗ್ರಾಂ ಚಿನ್ನ ದೋಚಿ ಹಿಂಬಾಗಿಲಿನಿಂದ ಪರಾರಿಯಾಗಿದ್ದಾನೆ. ನಂತರ ಪುನೀತ್ ಕುಮಾರ್ ದಂಪತಿ ಮನೆ ಹೊರಗೆ ಬಂದು ನೋಡಲಾಗಿ ಕಳ್ಳರು ಪರಾರಿಯಾಗಿದ್ದು, ಈ ದೃಶ್ಯ ಕಣ್ಣಾರೆ ಕಂಡ ಮನೆ ಮಾಲೀಕರು ಕಂಗಾಲಾಗಿದ್ದಾರೆ. ಕಳ್ಳರ ಕೈಚಳಕ ಸಿಸಿಟಿವಿ ದೃಶ್ಯದಲ್ಲಿ ದಾಖಲಾಗಿದೆ.

ವಿಷಯ ತಿಳಿದ ಬಡಾವಣೆ ನಿವಾಸಿಗಳು ಸಿನಿಮೀಯ ಶೈಲಿಯಲ್ಲಿ ನಡೆದಿರುವ ಕಳ್ಳತನವನ್ನು ಕಂಡು ಬೆಚ್ಚಿಬಿದ್ದು ನಂಜನಗೂಡಿನ ನಗರದಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳನ್ನು ನಿಯಂತ್ರಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ. ಪೊಲೀಸರು ನಿಷ್ಕ್ರಿಯವಾಗಿರುವ ಕಾರಣ ಸರಣಿ ಕಳ್ಳತನ ಮತ್ತು ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಹಿತಿ ಮೇರೆಗೆ ಡಿವೈಎಸ್ಪಿ ರಘು, ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವೀಂದ್ರ, ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿ ಪರಿಶೀಲಿಸಿ ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ. ಈ ಸಂಬಂಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.


ಪೊಲೀಸರು ಮನೆ ಪರಿಶೀಲನೆ ನಡೆಸುತ್ತಿರುವುದು.

ಸರಗೂರಲ್ಲಿ ಗ್ರಂಥಪಾಲಕರ ದಿನಾಚರಣೆ

ಸರಗೂರು, ಆ.13– ಪಟ್ಟಣದ ಗ್ರಂಥಾಲಯದಲ್ಲಿ ಗ್ರಂಥಪಾಲಕರ ದಿನಾಚರಣೆ ನಡೆಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಗ್ರಂಥಪಾಲಕ ಬಿಡಗಲು ಶಿವಣ್ಣ, ಜ್ಞಾನ ವಿಕಾಸಕ್ಕೆ ಗ್ರಂಥಾಲಯಗಳು ಉತ್ತಮ ವೇದಿಕೆಗಳಾಗಿವೆ. ಇದಕ್ಕೆ ಕಾರಣರಾದ ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಅವರು ಕಂಡ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ಗ್ರಂಥಾಲಯ ಮೇಲ್ವಿಚಾರಕರ ಮೇಲಿದೆ. ಗ್ರಂಥಾಲಯಕ್ಕೆ ಬರುವ ಓದುಗರಿಗೆ ಪುಸ್ತಕಗಳನ್ನು ಒದಗಿಸುವುದು ಮತ್ತು ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ತಲುಪಿಸುವ ಕಾರ್ಯ ಮಾಡಬೇಕು. ಆ ಮೂಲಕ ಡಾ.ಎಸ್.ಆರ್.ರಂಗನಾಥನ್ ಅವರ ತತ್ವಾದರ್ಶಗಳನ್ನು, ಮೇಲ್ವಿಚಾರಕರಾದ ನಾವು ಮೈಗೂಡಿಸಿಕೊಂಡು ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಬೇಕು ಎಂದರು.

ಗ್ಯಾರಂಟಿ ಯೋಜನಾ ಸಮಿತಿ ತಾಲೂಕು ಅಧ್ಯಕ್ಷ ಚಲುವರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಮೂರ್ತಿ, ಮೇಲ್ವಿಚಾರಕರಾದ ಮುತ್ತು, ಶಶಿಕಲಾ, ಕೃಷ್ಣೇಗೌಡ, ಸುರೇಶ್, ಕೃಷ್ಣಯ್ಯ, ಮಹಿಳಾ ಸಂಘದ ರತ್ನಮ್ಮ, ಪಲ್ಲವಿ, ನೇತ್ರಾವತಿ, ಕುಸುಮ, ಮಧು, ವರ್ಷ, ಸುರೇಶ್ ಇತರರಿದ್ದರು.


ಸರಗೂರಲ್ಲಿ ಗ್ರಂಥಪಾಲಕರ ದಿನಾಚರಣೆ ನಡೆಯಿತು.

ಸಂಪುಟದಿಂದ ಸಚಿವ ರಾಜಣ್ಣ ವಜಾಕ್ಕೆ ಖಂಡನೆ

ಕೆ.ಆರ್.ನಗರ, ಆ.13– ಸಚಿವ ರಾಜಣ್ಣ ಅವರನ್ನು ಕಾಂಗ್ರೆಸ್ ಸರ್ಕಾರ ಸಚಿವ ಸಂಪುಟದಿಂದ ವಜಾಗೊಳಿಸಿರುವುದನ್ನು ಅವಳಿ ತಾಲೂಕು ನಾಯಕರ ಸಂಘ ಉಗ್ರವಾಗಿ ಖಂಡಿಸುತ್ತದೆ ಎಂದು ನಾಯಕರ ಸಂಘದ ಅಧ್ಯಕ್ಷರಾದ ಸುಬ್ಬುಕೃಷ್ಣ ಹಾಗೂ ಸಿ.ಸಿ.ಮಹದೇವ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಪ.ಜಾತಿ, ವರ್ಗದವರ ಹಿತ ಕಾಯುವುದಾಗಿ ಹೇಳಿ ಓಟ್ ಪಡೆದು, ಅಧಿಕಾರಕ್ಕೆ ಬಂದ ನಂತರ ಪ.ಜಾತಿ, ವರ್ಗದವರನ್ನೇ ಹಂತ ಹಂತವಾಗಿ ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ದೂರಿದರು.

ಈ ಹಿಂದೆಯೂ ಪ.ವರ್ಗದವರ ಕಲ್ಯಾಣಕ್ಕಾಗಿ ಮೀಸಲಾಗಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಹಣವನ್ನು ಲೋಕಸಭಾ ಚುನಾವಣೆಗೆ ದುರ್ಬಳಕೆ ಮಾಡಿಕೊಂಡು ನಂತರ ಪ.ವರ್ಗಗಳ ಕಲ್ಯಾಣ ಸಚಿವ ನಾಗೇಂದ್ರ ಅವರನ್ನು ಮಾತ್ರ ತಪ್ಪಿತಸ್ಥರೆಂಬಂತೆ ಬಿಂಬಿಸಿ ಅವರ ರಾಜೀನಾಮೆ ಪಡೆದಿತ್ತು. ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಲೋಕಸಭಾ ಚುನಾವಣೆ ಮತಗಳ್ಳತನದ ವಿರುದ್ಧ ನಡೆಸುತ್ತಿದ್ದ ಹೋರಾಟದ ಸಂಬಂಧ ನೇರವಾಗಿ ಇದ್ದುದ್ದನ್ನು ಇದ್ದ ಹಾಗೆ ಸಚಿವ ರಾಜಣ್ಣನವರು ಮಾತನಾಡಿರುವುದನ್ನು ತಡೆಯಲಾರದೆ ಕಾಂಗ್ರೆಸ್ ಪಕ್ಷ ಏಕಾಏಕಿ ಸಚಿವ ಸಂಪುಟದಿಂದ ವಜಾಗೊಳಿಸಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು ಒಂದು ವೇಳೆ ರಾಜಣ್ಣ ತಪ್ಪು ಮಾಡಿದ್ದೆ ಆದರೆ ಅವರಿಗೆ ಶಿಸ್ತು ಸಮಿತಿಯಿಂದ ನೋಟಿಸ್ ನೀಡಿ ಈ ಸಂಬಂಧ ರಾಜಣ್ಣ ಅವರ ಅಭಿಪ್ರಾಯ ಪಡೆದು ಆಮೇಲೆ ಅವರ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಹಾಗೆ ಮಾಡದೆ ಹಿಂದುಳಿದ ವರ್ಗದ ದಲಿತ ನಾಯಕ ಸಚಿವ ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಿರುವುದು ಅಕ್ಷಮ್ಯ ಅಪರಾಧವಾಗಿದೆ ಎಂದರು.

ಪ್ರಜಾಪ್ರಭುತ್ವದಲ್ಲಿ ವಾಕ್ ಸ್ವಾತಂತ್ರಕ್ಕೆ ಬೆಲೆ ಇಲ್ಲವೆ. ಈ ಹಿಂದಿನ ಬಿಜೆಪಿ ಸರ್ಕಾರ ವಾಲ್ಮೀಕಿ ಜಯಂತಿ ಪ್ರಾರಂಭಿಸಿ, ಪರಿಶಿಷ್ಟರ ಕಲ್ಯಾಣಕ್ಕಾಗಿ ಕೋಟ್ಯಾಂತರ ರೂ. ಮೀಸಲಿರಿಸಿತ್ತು. ಆದರೂ ಸಹಾ ಪ.ಜಾತಿ, ವರ್ಗದವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದು, ಪ.ವರ್ಗದಿಂದಲೇ 14 ಶಾಸಕರು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದಾರೆ. ಆದರೆ ಇದ್ಯಾವುದನ್ನು ಪರಿಗಣಿಸದ ಕಾಂಗ್ರೆಸ್ ಪಕ್ಷವು ದಲಿತರನ್ನೇ ಟಾರ್ಗೆಟ್ ಮಾಡುತ್ತಿದೆ. ಕಾಂಗ್ರೆಸ್ ಪಕ್ಷ ಶಿಸ್ತಿನ ಪಕ್ಷವೆಂದಾದರೆ ಈ ಹಿಂದೆ ಕಾಂಗ್ರೆಸ್ ಪಕ್ಷದ ವಿರುದ್ಧ ನೇರವಾಗಿ ಮಾತನಾಡಿದ್ದ ಬಿ.ಆರ್.ಪಾಟೀಲ್, ರಾಯರೆಡ್ಡಿ, ರಾಜೂ ಕಾಗೆ ಇವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲವೇಕೆ. ದಲಿತರೆಂದರೆ ಇಷ್ಟೊಂದು ನಿಕೃಷ್ಟವೇಕೆ ಎಂದು ಪ್ರಶ್ನಿಸಿದರು.

ರಾಜಣ್ಣನವರು ಮತಗಳ್ಳತನದ ಬಗ್ಗೆ "ನಮ್ಮಿಂದಲೇ ತಪ್ಪಾಗಿದೆ" ಎಂದು ಹೇಳಿರುವ ಹೇಳಿಕೆ ಸತ್ಯದಿಂದ ಕೂಡಿದೆ. ಲೋಕಸಭಾ ಚುನಾವಣೆಯನ್ನು ಕೇಂದ್ರ ಚುನಾವಣಾ ಆಯೋಗ ನಡೆಸಿದರೂ ಮತದಾರರ ಪಟ್ಟಿ ಪರಿಷ್ಕರಣೆ ಮಾಡುವುದು, ಮತದಾರರ ಹೆಸರು ಸೇರಿಸುವುದು, ಮತದಾರರ ಹೆಸರು ಕೈಬಿಡುವುದು, ಮತದಾರರ ಪಟ್ಟಿ ಸಿದ್ಧಪಡಿಸುವುದು ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಿಬ್ಬಂದಿಗಳು. ಪರಿಶಿಷ್ಟರ ಹಿತ ಕಾಯುವುದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮಾಡುತ್ತಿರುವುದಾದರೂ ಏನು? ದಲಿತರ ಹಣ ದುರ್ಬಳಕೆ ಮಾಡುತ್ತಿರುವುದು ಹಾಗೂ ಪರಿಶಿಷ್ಟರ ಮೇಲೆ ವಿನಾಕಾರಣ ಆರೋಪ ಹೊರಿಸಿ ಸಕಾರಣ ನೀಡದೆ ವಜಾಗೊಳಿಸುತ್ತಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆಯೇ? ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜಣ್ಣ ಅವರನ್ನು ವಜಾಗೊಳಿಸಿರುವ ಸಂಬಂಧ ಯಾವುದೇ ಚಕಾರವೆತ್ತದೆ ಮೌನವಹಿಸಿರುವುದು ಅವರಿಗೆ ಶೋಭೆ ತರುವಂತದ್ದಲ್ಲ. ಕೂಡಲೇ ರಾಜಣ್ಣ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಇಲ್ಲವಾದಲ್ಲಿ ಯಾವ ಕಾರಣಕ್ಕಾಗಿ ವಜಾಗೊಳಿಸಲಾಗಿದೆ ಎಂಬುದನ್ನು ಜನತೆಯ ಮುಂದಿಡಬೇಕು. ಅಲ್ಲದೆ ಇದು ಸಾಧ್ಯವಾಗದಿದ್ದಲ್ಲಿ ಈಗಾಗಲೇ ಖಾಲಿ ಇರುವ ಪ.ವರ್ಗಗಳ ಕಲ್ಯಾಣ ಹಾಗೂ ಸಹಕಾರ ಖಾತೆಯನ್ನು ನಾಯಕ ಸಮುದಾಯದವರಿಗೆ ನೀಡಿ ಆಗಿರುವ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಸಂಘವು ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸುತ್ತದೆ. ಇಲ್ಲವಾದಲ್ಲಿ ನಾಯಕ ಜನಾಂಗ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ನಾಯಕ ಸಮುದಾಯದ ಮುಖಂಡರಾದ ಹಂಪಾಪುರ ಕುಮಾರ್, ರಾಮನಾಯಕ್, ನಾಗರಾಜು ಇದ್ದರು.



ಸುದ್ದಿಗೋಷ್ಠಿಯಲ್ಲಿ ಸುಬ್ಬು ಕೃಷ್ಣ ಹಾಗೂ ಸಿ.ಸಿ.ಮಹದೇವ್ ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ನಂಜನಗೂಡು, ಆ.13– ಸಾಮಾಜಿಕ ನ್ಯಾಯವೇದಿಕೆ ಮೈಸೂರು(ರಿ) ವತಿಯಿಂದ ನಗರದ ಪ.ಜಾತಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಆಯೋಜಿಸಲಾಗಿದೆ. ತರಗತಿಗಳು ಆ.17ರಿಂದ ಆರಂಭವಾಗಲಿದ್ದು, ಆಸಕ್ತ ವಿದ್ಯಾರ್ಥಿಗಳು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ನಗರದ ಅತ್ತಿಖಾನೆ ಇಂಗ್ಲಿಷ್ ಅಕಾಡೆಮಿ ಅಥವಾ 9845276568 ಸಂಪರ್ಕಿಸಬಹುದು.

ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

ನಂಜನಗೂಡು, ಆ.13– ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಉಪ್ಪಾರ ಸಮಾಜವನ್ನು ಪ್ರತಿನಿಧಿಸುವ ಏಕೈಕ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸ್ಥಾನ ನೀಡಬೇಕು ಎಂದು ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಕರಳಪುರ ನಾಗರಾಜು ಒತ್ತಾಯಿಸಿದ್ದಾರೆ.


ನಾಗರಾಜು

ರಾಜ್ಯ ಸಚಿವ ಸಂಪುಟದಲ್ಲಿ 2 ಸ್ಥಾನಗಳು ಖಾಲಿ ಇದ್ದು, ಆ ಪೈಕಿ ಒಂದನ್ನು ಪುಟ್ಟರಂಗಶೆಟ್ಟರಿಗೆ ನೀಡಬೇಕು. ಪುಟ್ಟರಂಗಶೆಟ್ಟಿಯವರು ರಾಜ್ಯಾದ್ಯಂತ ಪ್ರವಾಸ ಮಾಡಿ ಉಪ್ಪಾರ ಸಮುದಾಯವನ್ನು ಸಂಘಟಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಸೂಚನೆ ನೀಡಿದ್ದರಿಂದಾಗಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಅವರಿಗೆ ಮಂತ್ರಿ ಸ್ಥಾನ ನೀಡಬೇಕು. ಜೊತೆಗೆ ಹಿಂದುಳಿದ ಜಿಲ್ಲೆ ಎನಿಸಿರುವ ಚಾಮರಾಜನಗರ ಜಿಲ್ಲೆಯಿಂದ ದಿ.ಮಹದೇವ ಪ್ರಸಾದ್ ಅವರನ್ನು ಹೊರತುಪಡಿಸಿ, ಯಾವ ರಾಜಕಾರಣಿಯೂ ಮಂತ್ರಿಗಳಾಗಲಿಲ್ಲ. ಆದ್ದರಿಂದ ಚಾಮರಾಜನಗರಕ್ಕೆ ಆದ್ಯತೆ ನೀಡುವ ಸಲುವಾಗಿ ಕಾಂಗ್ರೆಸ್ ಹೈಕಮಾಂಡ್ ಚಾಮರಾಜನಗರದಿಂದ ಸತತ 4 ಬಾರಿ ಚುನಾಯಿತರಾಗಿರುವ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು ಎಂದು ಒತ್ತಾಯಿಸಿದ್ದಾರೆ.

ನಿವೃತ್ತ ನ್ಯಾ.ನಾಗಮೋಹನ್‌ದಾಸ್ ವರದಿ ಮರು ಪರಿಶೀಲನೆಗೆ ಒತ್ತಾಯಿಸಿ

ಆ.16ರಂದು ಬಲಗೈ ಸಮಾಜದಿಂದ ಬೃಹತ್ ಪ್ರತಿಭಟನೆ

ತಿ.ನರಸೀಪುರ, ಆ.13– ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಒಳ ಮೀಸಲಾತಿ ಸಂಬಂಧ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಅವೈಜ್ಞಾನಿಕವಾಗಿದ್ದು, ವರದಿ ಮರು ಪರಿಶೀಲನೆ ಮಾಡುವಂತೆ ಒತ್ತಾಯಿಸಿ ಆ.16 ರಂದು ಪಟ್ಟಣದಲ್ಲಿ ಬಲಗೈ ಸಮಾಜದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಒಳ ಮೀಸಲಾತಿ ಸಂಬಂಧ ಸರ್ಕಾರಕ್ಕೆ ಆ.4 ರಂದು ಸಲ್ಲಿಸಿರುವ ವರದಿ ಅವೈಜ್ಞಾನಿಕ ಹಾಗೂ ತಾಂತ್ರಿಕವಾಗಿ ಕಳಪೆ ಮಟ್ಟದ್ದಾಗಿದ್ದು, ವರದಿ ವಿರುದ್ಧ ಬೃಹತ್ ಪ್ರತಿಭಟನೆ ಮಾಡಿ ಶಕ್ತಿ ಪ್ರದರ್ಶನ ಮಾಡಲಿದ್ದೇವೆ ಎಂದರು.

ಎಸ್‌ಸಿ /ಎಸ್‌ಟಿ ಅಧ್ಯಕ್ಷರು ಹಾಗೂ ಅಂಕಿ ಅಂಶಗಳ ಪರಿಣಿತ ಅಧಿಕಾರಿ ಚಂದ್ರಶೇಖರಯ್ಯ ಅವರ ಹೇಳಿಕೆಗೂ ಹಾಗೂ ಈಗ ಬಿಡುಗಡೆಯಾಗಿರುವ ವರದಿಗೂ ಅಜಗಜಾಂತರ ವ್ಯತ್ಯಾಸವಿದೆ. ನಮ್ಮ ಸಮಾಜದಲ್ಲೇ ಮೂರ್ನಾಲ್ಕು ಭಾಗಗಳಿವೆ. ಆದಿ ಕರ್ನಾಟಕ, ಛಲವಾದಿ ಹಾಗೂ ಹೊಲೆಯ ಎಂಬ ಒಂದೇ ಹೆಸರಿರುವುದರಿಂದ ಕಡಿಮೆ ಪ್ರಮಾಣದಲ್ಲಿ ವರದಿಯಲ್ಲಿ ಅಂಕಿ ಅಂಶ ತೋರಿಸಲಾಗಿದೆ. ಎಲ್ಲಾ ಉಪ ಜಾತಿಗಳನ್ನು ಸೇರಿಸಿದರೆ ಹೆಚ್ಚು ಜನಸಂಖ್ಯೆ ನಾವೇ ಬರುತ್ತೇವೆ. ಅದರಲ್ಲೂ ತಿ.ನರಸೀಪುರ ಕ್ಷೇತ್ರದಲ್ಲಿ 50 ರಿಂದ 60 ಸಾವಿರ ಮತದಾರರಿದ್ದಾರೆ. ಹಾಗಾಗಿ ನಾಗಮೋಹನ್ ದಾಸ್ ವರದಿಯನ್ನು ವಿರೋಧಿಸಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಹದೇವಪ್ಪ ಅವರಿಗೆ ಎಚ್ಚರಿಕೆ ಕರೆಘಂಟೆ ನೀಡಬೇಕೆಂಬ ಉದ್ದೇಶದಿಂದ ಶಕ್ತಿ ಪ್ರದರ್ಶನ ನಡೆಯಲಿದ್ದು, ಬಲಗೈ ಸಮಾಜವರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಸೋಸಲೆ ಪಿಎಸಿಎಸ್ ಮಾಜಿ ಅಧ್ಯಕ್ಷ ಪರಶಿವಮೂರ್ತಿ ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಅವೈಜ್ಞಾನಿಕ ವರದಿ ನೀಡುವ ಮೂಲಕ ಬಲಗೈ ಸಮುದಾಯಕ್ಕೆ ಉದ್ದೇಶ ಪೂರ್ವಕವಾಗಿ ಅನ್ಯಾಯ ಮಾಡಿದ್ದಾರೆ. ಎಡಗೈ ಸಮಾಜದವರ ಮೇಲೆ ನಮಗೆ ಯಾವುದೇ ದ್ವೇಷ, ಭಿನ್ನಾಭಿಪ್ರಾಯಗಳಿಲ್ಲ. ಕಾನೂನಾತ್ಮವಾಗಿ ಬಲಗೈ ಸಮುದಾಯವದರು ಇರುವ ಸಂಖ್ಯೆಗೆ ಅನುಗುಣವಾಗಿ ವರದಿ ನೀಡದೇ ಜನಸಂಖ್ಯೆ ಮರೆಮಾಚಿ ಅವೈಜ್ಞಾನಿಕ ವರದಿ ನೀಡಲಾಗಿದ್ದು, ಸರ್ಕಾರ ಮರು ಸಮೀಕ್ಷೆ ಮಾಡುವ ಮೂಲಕ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿದರು. ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಮಹೇಶ್, ತಾಪಂ ಮಾಜಿ ಸದಸ್ಯ ಬಸವರಾಜು, ಮುಖಂಡರಾದ ಸೋಮಶೇಖರ್, ಶಿವಮೂರ್ತಿ, ಅನಿಲ್ ಕುಮಾರ್ ಸೇರಿದಂತೆ ಮತ್ತಿತರಿದ್ದರು.


ಸಭೆಯಲ್ಲಿ ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮಾತನಾಡಿದರು.

> ನಾಗಮೋಹನ್ ದಾಸ್ ವರದಿಯಿಂದ ಬಲಗೈ ಸಮುದಾಯ ಮುಜುಗರ ಎದುರಿಸುವಂತಾಗಿದೆ. ನ್ಯಾಯಮೂರ್ತಿಗಳಿಂದ ನ್ಯಾಯ ಸಮ್ಮತವಾದ ವರದಿ ನಿರೀಕ್ಷೆ ಮಾಡಿದ್ದೇವು. ಆದರೆ ನಿರೀಕ್ಷೆ ಹುಸಿಯಾಗಿದೆ. ಎಡಗೈ ಮತ್ತು ಬಲಗೈ ಸಮಾಜದವರು ಅಣ್ಣ ತಮ್ಮಂದಿರಂತೆ ಅನ್ಯೋನ್ಯವಾಗಿದ್ದೇವೆ. ಆದರೆ ಈಗ ನೀಡಿರುವ ವರದಿಯಿಂದ ನಾವು ಕಚ್ಚಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವರದಿ ಅವೈಜ್ಞಾನಿಕವಾಗಿದ್ದು, ಅದನ್ನು ತಿರಸ್ಕರಿಸುವಂತೆ ಒತ್ತಾಯಿಸಿ ತಿ.ನರಸೀಪುರ ತಾಲೂಕು ಕಚೇರಿ ಮುಂದೆ ಆ.16 ರಂದು ನಡೆಯುವ ಪ್ರತಿಭಟನೆಗೆ ಬಲಗೈ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.
> – ಕುಕ್ಕೂರು ಗಣೇಶ್, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ.

ಅಕ್ರಮ ಕಟ್ಟಡದ ಮೇಲ್ವಿಚಾರಣೆಗೆ ಏಕಸದಸ್ಯ ಸಮಿತಿ ರಚನೆಗೆ ನಿರ್ಧಾರ

ಹುಣಸೂರು, ಆ.13– ನಗರದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡದ ಬಗ್ಗೆ ನ್ಯಾಯಾಲಯದ ಆದೇಶದಂತೆ ವಿಚಾರಣೆ ನಡೆಸಲು ಇಲ್ಲಿನ ನಗರಸಭೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಏಕಸದಸ್ಯ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

ಶಾಸಕ ಜಿ.ಡಿ.ಹರೀಶ್‌ಗೌಡರ ಅಧ್ಯಕ್ಷತೆಯಲ್ಲಿ ನಗರಸಭೆಯಲ್ಲಿ ನಡೆದ ತುರ್ತು ಸಭೆಯಲ್ಲಿ ಸದಸ್ಯ ಹೆಚ್.ಪಿ.ಸತೀಶ್ ಕುಮಾರ್ ನೇತೃತ್ವದಲ್ಲಿ ಏಕ ಸದಸ್ಯ ಸಮಿತಿ ರಚಿಸಿ, ವಿಚಾರಣೆ ನಡೆಸಿ ವರದಿ ನೀಡಲು ಸೂಚಿಸಲಾಯಿತು.

ಆರೋಪ ಸಂಬಂಧ ಕಟ್ಟಡ ಮಾಲೀಕರಾದ ಹೆಚ್.ಬಿ.ರಂಜಿತಾ ಅವರು ನ್ಯಾಯಾಲಯದ ಮೊರೆ ಹೋಗಿ ನಗರಸಭೆ ವಿರುದ್ಧ ದೂರು ದಾಖಲಿಸಿದ್ದರು. ಈ ಸಂಬಂಧ ಆಯುಕ್ತರು ನ್ಯಾಯಾಲಯದಲ್ಲಿ ವಾದ–ಪ್ರತಿವಾದ ನಡೆಸಲಾಗಿ ನ್ಯಾಯಾಲಯ ನಗರಸಭೆಗೆ ಮೇಲ್ವಿಚಾರಣೆಗೆ ಅವಕಾಶ ಕಲ್ಪಿಸಿ ತೀರ್ಪು ನೀಡಿದೆ. ಈ ಸಂಬಂಧ ಸಭೆಯಲ್ಲಿ ಬಹುಮತಕ್ಕೆ ಹಾಕಿದಾಗ ಶಾಸಕರು ಸೇರಿದಂತೆ 17 ಸದಸ್ಯರು ಮೇಲ್ವಿಚಾರಣೆಗೆ ಸದಸ್ಯ ಸತೀಶ್ ಅವರನ್ನು ನಿಯೋಜಿಸಿ ಕೈ ಎತ್ತುವ ಮೂಲಕ ಸಮ್ಮತಿ ಸೂಚಿಸಿದರು. ಕಾಂಗ್ರೆಸ್‌ನ 12 ಸದಸ್ಯರು ವಿರೋಧ ವ್ಯಕ್ತಪಡಿಸಿ ಮತ ಚಲಾಯಿಸಿದರೇ, ಎಸ್‌ಡಿಪಿಐನ ಇಬ್ಬರು ಸದಸ್ಯರು ತಟಸ್ಥರಾಗಿದ್ದರು.

ನಗರಸಭೆ ಆದಾಯ ಸೋರಿಕೆ: ನಗರಸಭೆ ವಾಣಿಜ್ಯ ಮಳಿಗೆ ಟೆಂಡರ್ ಪಡೆದ ವ್ಯಕ್ತಿ ಸಾವನ್ನಪ್ಪಿದ್ದು, ಆತನ ಪತ್ನಿ 2017–18ರಲ್ಲಿ ಮಳಿಗೆ ಹಿಂಪಡೆದು ಠೇವಣಿ ಮರುಪಾವತಿಸುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ ನಗರಸಭೆ ಇದುವರೆಗೂ ಮಳಿಗೆ ಹಿಂಪಡೆದಿಲ್ಲ. ಮಳಿಗೆಯನ್ನು ಅನಧಿಕೃತವಾಗಿ ಮತ್ತೋರ್ವ ವ್ಯಕ್ತಿ ನಡೆಸುತ್ತಿದ್ದು, ಕಂದಾಯ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳದ ಪರಿಣಾಮ ನಗರಸಭೆಗೆ ಬರುವ ಆದಾಯ ಸೋರಿಕೆಯಾಗುತ್ತಿದೆ ಎಂದು ಸದಸ್ಯ ಕೃಷ್ಣರಾಜಗುಪ್ತ ದೂರಿದರು.

ಹುಣಸೂರು ನಗರಸಭೆಗೆ ವಾರ್ಷಿಕ 1.20 ಕೋಟಿ ರೂ. ತೆರಿಗೆ ಸೋರಿಕೆಯಾಗುತ್ತಿದ್ದು, ಇದರಿಂದಾಗಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ವಿಷಾದ ವ್ಯಕ್ತಪಡಿಸಿದರು.

ತೆರವು: ನಗರದ ಹೃದಯ ಭಾಗದಲ್ಲಿರುವ ಕಲ್ಪತರು ವೃತ್ತದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ನಗರಸಭೆ ಆಸ್ತಿ ತೆರವುಗೊಳಿಸಲು ನ್ಯಾಯಾಲಯ ಸೂಚಿಸಿದ್ದರೂ ನಗರಸಭೆ ಆಯುಕ್ತರು ಕ್ರಮ ವಹಿಸದ ಬಗ್ಗೆ ಶಾಸಕರು ಗರಂ ಆಗಿ ನಿಮ್ಮ ಕೈಯಲ್ಲಿ ಆಗದಿದ್ದರೇ ಪೊಲೀಸ್ ರಕ್ಷಣೆ ಪಡೆದು ಒತ್ತುವರಿ ತೆರವುಗೊಳಿಸಿ ನಗರಸಭೆ ಆಸ್ತಿ ವಶಕ್ಕೆ ಪಡೆಯಿರಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಉಪಾಧ್ಯಕ್ಷೆ ಆಶಾ, ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್, ಸದಸ್ಯರು, ಪೌರಾಯುಕ್ತ ಮಾನಸ ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ನಗರಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಸಾಮಾನ್ಯ ಸಭೆ ನಡೆಯಿತು.

ಮೈಸೂರು ಮಿತ್ರ

ತಂದೆ ಸಾವಿನಿಂದ ಮಗನ ಕೊಲೆ ಬೆಳಕಿಗೆ

- ಮನೆಯ ಹಿಂಭಾಗವೇ ಪತ್ತೆಯಾಯ್ತು 2 ವರ್ಷ ಹಿಂದಿನ ಅಸ್ಥಿಪಂಜರ
- ತಂದೆಯೇ ಮಗನ ಕೊಂದು ಇಂಗುಗುಂಡಿಯಲ್ಲಿ ಹೂತಿಟ್ಟಿದ್ದ





ಹಾಸನ, ಆ.13– ತಂದೆಯ ಅಂತ್ಯ ಸಂಸ್ಕಾರಕ್ಕೆ ಮಗ ಬಾರದ ಹಿನ್ನೆಲೆ ಹುಡುಕಾಟ ನಡೆಸಿದಾಗ ಆತನ ಕೊಲೆ ಪ್ರಕರಣ ಬೆಳಕಿಗೆ ಬಂದಿರುವ ಘಟನೆ ಜಿಲ್ಲೆಯ ಆಲೂರು ತಾಲೂಕಿನ ಸಂತಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹಣದ ವಿವಾದದಲ್ಲಿ ತಂದೆಯೇ ಮಗನನ್ನು ಕೊಂದು, ಶವವನ್ನು ಮನೆಯ ಹಿಂಭಾಗದ ಇಂಗು ಗುಂಡಿಯಲ್ಲಿ ಹೂತು ಮರೆಮಾಚಿದ ಆಘಾತಕಾರಿ ಘಟನೆ ಎರಡು ವರ್ಷಗಳ ನಂತರ ಬೆಳಕಿಗೆ ಬಂದಿದೆ. ರಘು (32) ಕೊಲೆಯಾದವನಾಗಿದ್ದು, ಈತ ತನ್ನ ತಂದೆ ಅಂದರೆ ಈಗ ಮೃತಪಟ್ಟಿರುವ ಗಂಗಾಧರ್ ಅವರಿಂದ 2 ವರ್ಷದ ಹಿಂದೆ ಹತ್ಯೆಗೀಡಾದ ವಿಚಾರ ಈಗ ಬೆಳಕಿಗೆ ಬಂದಿದೆ.

ಏನಿದು ಪ್ರಕರಣ: ಹಾಸನ ಜಿಲ್ಲೆಯ ಆಲೂರು ತಾಲೂಕಿನ ಸಂತಬಸವನಹಳ್ಳಿ ಗ್ರಾಮದಲ್ಲಿ ಆ.1ರಂದು ಗಂಗಾಧರ್ ಎಂಬ ವ್ಯಕ್ತಿ ಮೃತಪಟ್ಟಿದ್ದರು. ಈ ವೇಳೆ ಮಗ ರಘು ತಂದೆಯ ಅಂತ್ಯ ಸಂಸ್ಕಾರಕ್ಕೆ ಬಂದಿರಲಿಲ್ಲ. ಬಳಿಕ ಮೂರನೇ ದಿನದ ಹಾಲುತುಪ್ಪದ ಕಾರ್ಯಕ್ಕೂ ಬಂದಿರಲಿಲ್ಲ. ಆ.11ರಂದು ತಂದೆಯ ವೈಕುಂಠ ಸಮಾರಾಧನೆಗೂ ಬಾರದೇ ಇದ್ದುದರಿಂದ ಸಂಬಂಧಿಕರಿಗೆ ಅನುಮಾನ ಮೂಡಿತ್ತು.

ಮಗನನ್ನು ಕರೆಯಿಸಿ ಎಂದು ಆಗ್ರಹ ಮಾಡಿದಾಗ, ಅಣ್ಣ ಕಾರ್ಯಕ್ಕೆ ಬರುವುದಿಲ್ಲ ಎಂದು ಮೃತನ ಬುದ್ಧಿಮಾಂದ್ಯ ಸಹೋದರ ರೂಪೇಶ್ ಹೇಳಿದ್ದ. ಇದಾಗಿ 11ನೇ ದಿನದ ಹಾಲುತುಪ್ಪದ ಕಾರ್ಯ ಇದ್ದು ಇದಕ್ಕೂ ಮಗ ಬಾರದ ಹಿನ್ನೆಲೆ ಮೃತ ಗಂಗಾಧರನ ಇನ್ನೊಬ್ಬ ಮಗ (ಬುದ್ಧಿಮಾಂದ್ಯ) ರೂಪೇಶ್‌ಗೆ ಫೋನ್ ಮಾಡಿ ರಘುವನ್ನು ಬರಲು ಹೇಳುವಂತೆ ಒತ್ತಡ ಹೇರಿದಾಗ, ಈ ರೂಪೇಶ್ ಕೊಲೆಯ ರಹಸ್ಯವನ್ನು ಬಾಯ್ಬಿಟ್ಟಿದ್ದಾನೆ.

ಯಾಕೆ ಕೊಲೆ: ಮೃತಪಟ್ಟಿರುವ ಗಂಗಾಧರನ ಪುತ್ರ ರಘು (32) ಬಿಎಂಟಿಸಿಯಲ್ಲಿ ನೌಕರನಾಗಿದ್ದು, ಕ್ರಿಕೆಟ್ ಬೆಟ್ಟಿಂಗ್, ಇಸ್ಪೀಟ್ ಆಟದಿಂದ ಲಕ್ಷಾಂತರ ರೂ. ಹಣವನ್ನು ಕಳೆದುಕೊಂಡಿದ್ದ. ಬಳಿಕ ಕೆಲ ಕಾರಣಕ್ಕೆ ಕೆಲಸ ಕಳೆದುಕೊಂಡ ರಘು ಸ್ವಗ್ರಾಮಕ್ಕೆ ಬಂದು ವಾಸವಾಗಿದ್ದ. ಸಾಲ ತೀರಿಸಲು ರಘು ಹಣಕ್ಕಾಗಿ ತಂದೆಗೆ ಹಿಂಸೆ ಮಾಡುತ್ತಿದ್ದ ಎನ್ನಲಾಗಿದೆ.

ಹಣದ ವಿಷಯಕ್ಕೆ ನಡೆದ ಜಗಳಕ್ಕೆ ತಾರಕಕ್ಕೇರಿದಾಗ ಗಂಗಾಧರ ತನ್ನ ಮಗನನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ. ನಂತರ, ಮತ್ತೊಬ್ಬ ಮಗ ರೂಪೇಶ್ ಜೊತೆ ಸೇರಿ ರಘುವಿನ ಶವವನ್ನು ಮನೆಯ ಹಿಂಭಾಗದ ಇಂಗು ಗುಂಡಿಯಲ್ಲಿ ಹೂತುಹಾಕಿದ್ದ. ಕೊಲೆಯ ರಹಸ್ಯವನ್ನು ಎಲ್ಲಿಯಾದರೂ ಬಾಯ್ಬಿಟ್ಟರೆ ನಿನ್ನನ್ನು ಕೊಲೆ ಮಾಡುವುದಾಗಿ ಆರೋಪಿ ಗಂಗಾಧರನು ರೂಪೇಶ್‌ಗೆ ಬೆದರಿಕೆ ಹಾಕಿದ್ದ ಎಂದು ಕೊಲೆಯಾದ ರಘು ಸೋದರ ಮಾವ ಪಾಲಾಕ್ಷ ಅವರು ಆಲೂರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹೀಗಾಗಿ ರೂಪೇಶ್ ಈ ವಿಚಾರವನ್ನು ಎಲ್ಲಿಯೂ ಪ್ರಸ್ತಾಪಿಸಿರಲಿಲ್ಲ.

ದೂರಿನ ಹಿನ್ನೆಲೆಯಲ್ಲಿ ಆಲೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಇಂಗು ಗುಂಡಿಯಿಂದ ರಘುವಿನ ದೇಹದ ಮೂಳೆಗಳನ್ನು ಹೊರತೆಗೆದಿದ್ದಾರೆ. ಈ ಮೂಳೆಗಳನ್ನು ಜಿಲ್ಲಾಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಆಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ) + ಮಹಾವತಾರ ನರಸಿಂಹ (ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜಯಪುರದಲ್ಲಿ ಹರ್ ಗರ್ ತಿರಂಗಾ ಯಾತ್ರೆ



79 ನೇ ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ ಹರ್ ಗರ್ ತಿರಂಗಾ ಯಾತ್ರೆಗೆ ಮಾಜಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು.

ಮೈಸೂರು, ಆ.13– ಚಾಮುಂಡೇಶ್ವರಿ ಗ್ರಾಮಾಂತರ ಬಿಜೆಪಿ ಮಂಡಲದ ವತಿಯಿಂದ ಜಯಪುರ ಮಹಾ ಶಕ್ತಿ ಕೇಂದ್ರದಲ್ಲಿ 79 ನೇ ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ ಹರ್ ಗರ್ ತಿರಂಗಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ತಿರಂಗಾ ಯಾತ್ರೆಗೆ ಮಾಜಿ ಶಾಸಕರೂ ಆದ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಅವರು ಚಾಲನೆ ನೀಡಿದರು. ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷ ಟಿ.ರವಿ ನೇತೃತ್ವದಲ್ಲಿ ಜಯಪುರದಿಂದ ಕಡಕೊಳ ಮಾರ್ಗವಾಗಿ ಕೆಲ್ಲಹಳ್ಳಿ ಮುಖಾಂತರ ಉದ್ಬೂರು ಗ್ರಾಮದಲ್ಲಿ ಯಾತ್ರೆ ಕೊನೆಗೊಂಡಿತು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ರಾಕೇಶ್ ಗೌಡ, ಜಿಲ್ಲಾ ಕಾರ್ಯದರ್ಶಿ ಮೋನಿಕಾ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಹೇಮಂತ್ ಕುಮಾರ್, ಅಪ್ಪಾಜಿಗೌಡ, ಚಿಕ್ಕಾನ್ಯ ಶಿವಕುಮಾರ್, ಯುವ ಮೋರ್ಚಾ ಅಧ್ಯಕ್ಷ ಮೋಹನ್ ಕುಮಾರ್, ನಿಕಟ ಪೂರ್ವ ಅಧ್ಯಕ್ಷರಾದ ಗೆಜ್ಜಗಳ್ಳಿ ಮಹೇಶ್, ಗೋಪಾಲ್ ರಾವ್, ಹಿನಕಲ್ ಶ್ರೀನಿವಾಸ್, ರಾಜಕುಮಾರ್, ಈರಪ್ಪ, ಯುವ ಮೋರ್ಚಾ ಮಾಜಿ ಅಧ್ಯಕ್ಷರಾದ ದಾರಿಪುರ ಡಿ.ಚಂದ್ರಶೇಖರ್, ಚೇತನ್ ಕುಮಾರ್, ಕಿರಣ್ ನಾಯ್ಡು, ಕೂರ್ಗಳ್ಳಿ ರೇವಣ್ಣ, ಬೆಳವಾಡಿ ಶ್ರೀನಿವಾಸ್ ನಾರಾಯಣಚಾರ್, ದಾರಿಪುರ ಸುನೀಲ್‌ಕುಮಾರ್, ಮೆಡಿಕಲ್ ಶಿವಕುಮಾರ್, ಪರಶಿವಮೂರ್ತಿ, ಲೋಹಿತ್, ಸಚಿನ್, ರೂಪ್ಸ್ ರಾಜು, ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಬರಡನಪುರ ಗಿರೀಶ್, ಮಹೇಶ್ ಮುಂತಾದವರಿದ್ದರು.

ಆರ್ಟ್ ಆಫ್ ಲಿವಿಂಗ್‌ನಿಂದ ಮಾದಕ ವಸ್ತು ತ್ಯಜಿಸಿ ಅಭಿಯಾನ

ಮೈಸೂರು, ಆ.13(ಜಿಎ)–ಆರ್ಟ್ ಆಫ್ ಲಿವಿಂಗ್ ಕೇಂದ್ರದ ಮೈಸೂರು ಶಾಖೆಯಲ್ಲಿ ಮಾದಕ ದ್ರವ್ಯದ ದುರ್ಬಳಕೆ ಭೀತಿಯನ್ನು ಪರಿಹರಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿದೆ ಎಂದು ನಿರ್ದೇಶಕ ವಿಕ್ರಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಶಮುಕ್ತ ಭಾರತ್ ಅಭಿಯಾನದ ಭಾಗವಾಗಿ ಆರ್ಟ್ ಆಫ್ ಲಿವಿಂಗ್ ಕೇಂದ್ರವು ಭಾರತ ಸರ್ಕಾರದೊಂದಿಗೆ ರಾಷ್ಟ್ರವ್ಯಾಪಿ ಸಾಕಷ್ಟು ಅಭಿಯಾನಗಳನ್ನು ನಡೆಸಿ, ಸಾವಿರಾರು ವಿದ್ಯಾರ್ಥಿಗಳನ್ನು ತಲುಪಿದ್ದು, ಸಂವಾದಾತ್ಮಕ ವಿಚಾರ ಸಂಕಿರಣ ಮತ್ತು ಮಾತುಕತೆಗಳ ಮೂಲಕ ಮಾದಕ ವಸ್ತುಗಳ ಬಳಕೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ಶಿಕ್ಷಣ ನೀಡಿದೆ ಎಂದರು.

ಮಾದಕ ದ್ರವ್ಯದ ದುರ್ಬಳಕೆ ಭೀತಿಯನ್ನು ಪರಿಹರಿಸುವ ನಿಟ್ಟಿನಲ್ಲಿ ಈಗ ಮೈಸೂರಿನಲ್ಲಿಯೂ ಯುವಕರಿಗೆ ಜೀವನ ಕೌಶಲ್ಯ ತಂತ್ರ, ಒತ್ತಡ ಪರಿಹಾರ, ಭಾವನಾತ್ಮಕ ಸ್ಥಿತಿ ಸ್ಥಾಪಕತ್ವ ಸಾಮರ್ಥ್ಯ ಬೆಳೆಸಲಾಗುವುದು. ಪುನರ್ವಸತಿ ಸೇವೆಯಲ್ಲಿ ಸರ್ಕಾರಿ ಇಲಾಖೆಯೊಂದಿಗೆ ಸಹಯೋಗ ಸಾಧಿಸಿ ಮಾದಕ ವಸ್ತು ಬಳಕೆದಾರರ ಸ್ವಾಸ್ಥ್ಯಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ವೆಲ್ನೆಸ್ ಪ್ರೋಗ್ರಾಂ ಅಡಿಯಲ್ಲಿ ಮದ್ಯ, ಮಾದಕ ವಸ್ತು ಸೇವನೆ ತ್ಯಜಿಸಬಯಸುವ ಯುವಜನರಿಗೆ ಅವುಗಳನ್ನು ತ್ಯಜಿಸುವ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ ಎಂದು ತಿಳಿಸಿದರು.

ಕಿಕ್ ದಿ ಹ್ಯಾಬಿಟ್ ಕಾರ್ಯಕ್ರಮದ ಅಡಿಯಲ್ಲಿ 40 ನಿಮಿಷಗಳ ಸಂವಾದ ಕಾರ್ಯಾಗಾರ ಆಯೋಜಿಸಿ ಮದ್ಯ, ಮಾದಕ ವಸ್ತುಗಳ ಹಾನಿಕಾರಕ ಪರಿಣಾಮ ವಿವರಿಸಿ, ಆರೋಗ್ಯಕರ ಜೀವನ ನಡೆಸಲು ಮಾರ್ಗದರ್ಶನ ನೀಡಲಾಗುವುದು. ಕೆಲವು ಉಚಿತ, ಕೆಲವಕ್ಕೆ ಶುಲ್ಕವಿದೆ. ಹೆಚ್ಚಿನ ಮಾಹಿತಿ ಹಾಗೂ ಮಾರ್ಗದರ್ಶನಕ್ಕೆ ದೂ. 96200 15151 ನ್ನು ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಕರ್ನಲ್ ಬಿ.ಎಸ್.ಲೋಕನಾಥ್, ಚಂದ್ರಕಲಾ, ವೀಣಾ, ಗೌತಮ್, ರವಿಕುಮಾರ್, ರೆನೆ ಉಪಸ್ಥಿತರಿದ್ದರು.

ಇಂಟರ್‌ನ್ಯಾಷನಲ್ ಫೋಟೋ ಜರ್ನಲಿಸ್ಟ್ ಪ್ರಶಸ್ತಿ





ಆಂಧ್ರಪ್ರದೇಶ ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸಲಾಗಿದ್ದ ಇಂಟರ್‌ನ್ಯಾಷನಲ್ ಫೋಟೋ ಜರ್ನಲಿಸಂ ಛಾಯಾಚಿತ್ರ ಸ್ಪರ್ಧೆಯಲ್ಲಿ ಮೈಸೂರಿನ 'ಕನ್ನಡಪ್ರಭ' ಛಾಯಾಗ್ರಾಹಕ ಅನುರಾಗ ಬಸವರಾಜ್ ಅವರಿಗೆ ಎರಡನೇ ಬಹುಮಾನ ಹಾಗೂ ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮಧುಸೂಧನ ಎಸ್.ಆರ್. ಅವರಿಗೆ ಸರ್ಟಿಫಿಕೇಟ್ ಆಫ್ ಮೆರಿಟ್ ಬಹುಮಾನ ಲಭಿಸಿದೆ.

ಇಂದು ನೀರು ಸರಬರಾಜು ವ್ಯತ್ಯಯ

ಮೈಸೂರು, ಆ.13–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮೂಲಸ್ಥಾವರದ ಜಾಕ್‌ವೆಲ್‌ನಲ್ಲಿ ಕ್ಲೀನಿಂಗ್ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ನಾಳೆ(ಆ.14) ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕೆಲವೆಡೆ ನೀರು ಸರಬರಾಜು ವ್ಯತ್ಯಯವಾಗಲಿದೆ.

ವಾರ್ಡ್ ನಂ.09 ರಿಂದ 16, 28 ರಿಂದ 39 ಮತ್ತು 52, 53, ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಕಲ್ಯಾಣಗಿರಿ, ಡಾ. ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಆಡಳಿತಾತ್ಮಕ ಅನುಮೋದನೆ, ಅನುದಾನ ಒದಗಿಸಿದರೆ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡ ಪುನರ್ ನಿರ್ಮಾಣ; ಸತೀಶ್ ಜಾರಕಿಹೊಳಿ



ಬೆಂಗಳೂರು, ಆ.13– ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯನ್ನು ಕೆಡವಿ ಹೊಸದಾಗಿ ನಿರ್ಮಾಣ ಮತ್ತು ಆವರಣದಲ್ಲಿ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಾಣ ಹಾಗೂ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಾಣದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ 30 ಕೋಟಿ ರೂಗಳ ಅಂದಾಜು ಪಟ್ಟಿ ಸಲ್ಲಿಕೆಯಾಗಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಒದಗಿಸಿದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿಧಾನಸಭೆಯಲ್ಲಿ ತಿಳಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, ಕೇಳಿದ ಇದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಮೈಸೂರು ನಗರದ ಸರಸ್ವತಿಪುರಂನಲ್ಲಿರುವ ಈ ಕಟ್ಟಡ ಲೋಕೋಪಯೋಗಿ ಇಲಾಖೆಗೆ ಒಳಪಡುವುದಿಲ್ಲ. ಅಗ್ನಿಶಾಮಕ ಠಾಣೆ ಮತ್ತು ಆವರಣದಲ್ಲಿರುವ ವಸತಿ ಕಟ್ಟಡಗಳನ್ನು ಪರಿಶೀಲಿಸಲಾಗಿದ್ದು, ಅಗ್ನಿಶಾಮಕ ಠಾಣೆಯ ಕಚೇರಿ ಕಟ್ಟಡವು ಭಾಗಶಃ ಕುಸಿದಿದ್ದು, ಇನ್ನುಳಿದ ಭಾಗವು ಶಿಥಿಲಾವಸ್ಥೆಯಲ್ಲಿದೆ. ಅಧಿಕಾರಿಗಳ ವಸತಿಗೃಹಗಳು ದುಸ್ಥಿತಿಯಲ್ಲಿರುವುದ ರಿಂದ ವಾಸಕ್ಕೆ ಯೋಗ್ಯವಿರುವುದಿಲ್ಲ.

ಅಗ್ನಿಶಾಮಕ ಠಾಣೆ ಕಟ್ಟಡವನ್ನು ಕೆಡವಿ ಹೊಸದಾಗಿ ಅಗ್ನಿಶಾಮಕ ಠಾಣೆ ನಿರ್ಮಾಣ ಮತ್ತು ಆವರಣದಲ್ಲಿ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಾಣ, ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಾಣದ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಚಾಲ್ತಿಯಲ್ಲಿರುವ 2023–24 ನೇ ಸಾಲಿನ ಹಾಗೂ ಪ್ರಸಕ್ತ ಸಾಲಿಗೂ ಮುಂದುವರೆದ ಲೋಕೋಪಯೋಗಿ ಇಲಾಖೆಯ ಏಕರೂಪ ದರಪಟ್ಟಿ ದರಗಳನ್ವಯ ಅಂದಾಜನ್ನು 3000.00 ಲಕ್ಷಗಳ ಅನುದಾನದೊಂದಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ 18.03.2025ರಂದು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಮೈಸೂರು ವಲಯ ಇವರಿಗೆ ಕಾರ್ಯಪಾಲಕ ಇಂಜಿನಿಯರ್, ಮೈಸೂರು ವಿಶೇಷ ವಿಭಾಗ, ಮೈಸೂರು ಅವರಿಂದ ಸಲ್ಲಿಕೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಹಾಗು ಅನುದಾನ ಒದಗಿಸಿದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಚಿವರು ತಿಳಿಸಿದರು.

ವಿದ್ಯಾರ್ಥಿಗಳಿಗೆ 'ವೀರ ಸಾವರ್ಕರ್' ಪುಸ್ತಕ ವಿತರಣೆ



ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ವೀರ ಸಾವರ್ಕರ್ ಅವರ ಪುಸ್ತಕಗಳನ್ನು ವಿತರಿಸಲಾಯಿತು.

ಮೈಸೂರು, ಆ.13– ಮೈಸೂರಿನ ಕೆಸರೆಯಲ್ಲಿರುವ ಶ್ರೀ ಛಾಯಾದೇವಿ ವಿದ್ಯಾ ಸಂಸ್ಥೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ, ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ದೇಶಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ವೀರ ಸಾವರ್ಕರ್ ಅವರ ಪುಸ್ತಕಗಳನ್ನು ನೀಡುವುದರ ಜೊತೆಗೆ ಸಿಹಿ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ದೇಶಭಕ್ತರಾದ ವೀರ ಸಾವರ್ಕರ್ ಅವರ ಪುಸ್ತಕವನ್ನು ಓದುವುದರೊಂದಿಗೆ ದೇಶಾಭಿಮಾನ ಬೆಳೆಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಛಾಯಾದೇವಿ ವಿದ್ಯಾಸಂಸ್ಥೆಯ ಸಂಸ್ಥಾಪಕರು ಹಾಗೂ ಬಿಜೆಪಿ ಮೈಸೂರು ನಗರ ಕಾರ್ಯದರ್ಶಿಗಳಾದ ಡಾ.ಭಾನುಪ್ರಕಾಶ್, ಬಿಜೆಪಿ ಮೈಸೂರು ನಗರ ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಆಂಥೋನಿ ಪೌಲ್, ಯಶಸ್ ಅರಸ್, ಹಾಗೂ ಶಿಕ್ಷಕ ಸಿಬ್ಬಂದಿ ವರ್ಗದವರು ಉಪಸಿತರಿದ್ದರು.

ನಿವೃತ್ತ ಡಿಜಿಪಿ ಓಂ ಪ್ರಕಾಶ್ ಹತ್ಯೆ: ಪತ್ನಿಯೇ ಪ್ರಮುಖ ಆರೋಪಿ



ಬೆಂಗಳೂರು, ಆ.13– ಮಾಜಿ ಡಿಜಿಪಿ ಓಂ ಪ್ರಕಾಶ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) 1,150 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದು, ಪತ್ನಿ ಪಲ್ಲವಿ ಅವರನ್ನು ಪ್ರಮುಖ ಆರೋಪಿ ಎಂದು ಹೆಸರಿಸಿದೆ.

1981ನೇ ಬ್ಯಾಚ್ ಐಪಿಎಸ್ ಅಧಿಕಾರಿ ಪ್ರಕಾಶ್ ಅವರನ್ನು ಏ.20 ರಂದು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್ ನಿವಾಸದಲ್ಲಿ ಪಲ್ಲವಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಅಪರಾಧದ ತೀವ್ರತೆಯನ್ನು ಪರಿಗಣಿಸಿ, ಕರ್ನಾಟಕ ಸರ್ಕಾರ ತನಿಖೆಯನ್ನು ಸಿಸಿಬಿಗೆ ವರ್ಗಾಯಿಸಿತ್ತು. ಸಿಸಿಬಿ ಮೂಲಗಳ ಪ್ರಕಾರ,ಕೊಲೆಗೆ ಸಂಬಂಧಿಸಿದಂತೆ ಮೊದಲ ಎಸಿಎಂಎಂ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದ್ದು, ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ಪ್ರಮುಖ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಮಗಳು ಕೃತಿ ಅವರನ್ನು ಆರೋಪಗಳಿಂದ ಮುಕ್ತಗೊಳಿಸಲಾಗಿದೆ. ತನಿಖಾಧಿಕಾರಿಗಳ ಪ್ರಕಾರ ಕೊಲೆ ಪಿತೂರಿಯಲ್ಲಿ ಕೃತಿ ಅವರ ಪಾತ್ರವಿದೆ ಎಂದು ಹೇಳಲು ಸಾಕಷ್ಟು ಪುರಾವೆಗಳಿಲ್ಲ.

ಘಟನೆ ನಡೆದ ಸಮಯದಲ್ಲಿ ಅವರು ಎಚ್‌ಎಸ್‌ಆರ್ ಲೇಔಟ್ ನಿವಾಸದ ಮೇಲಿನ ಮಹಡಿಯಲ್ಲಿದ್ದರು ಎಂದು ವರದಿಯಾಗಿದೆ. ಅಪರಾಧದಲ್ಲಿ ಅವರ ಪಾತ್ರವಿದೆ ಎಂದು ಹೇಳುವ ವಿಶ್ವಾಸಾರ್ಹ ಪುರಾವೆಗಳು ಲಭ್ಯವಿಲ್ಲದ ಕಾರಣ ಅವರ ಹೆಸರನ್ನು ಆರೋಪ ಪಟ್ಟಿಯಿಂದ ಕೈಬಿಡಲಾಗಿದೆ.

ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್‌ಸಿಂಗ್ ಪುರಿ, ಭಾರೀ ಕೈಗಾರಿಕಾ ಸಚಿವರ ಭೇಟಿ

ಐಓಸಿ ಡಿಪೋ ಸ್ಥಳಾಂತರ ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಮೈಸೂರು ಇಂಡಿಯನ್ ಆಯಿಲ್ ಡೀಲರ್ಸ್ ಮನವಿ



ಸಂಸದ ಯದುವೀರ್ ಹಾಗೂ ಮೈಸೂರಿನ ಪೆಟ್ರೋಲ್ ಬಂಕ್ ಮಾಲೀಕರ ನಿಯೋಗ, ನವದೆಹಲಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿತು.

ಮೈಸೂರು, ಆ.13– ಮೈಸೂರಿನಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಡಿಪೋ ಅನ್ನು ಸ್ಥಳಾಂತರಿಸುವ ಚಿಂತನೆ ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ಹರ್‌ದೀಪ್ ಸಿಂಗ್ ಪುರಿ ಹಾಗೂ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಇಂಡಿಯನ್ ಆಯಿಲ್ ಡೀಲರ್ಸ್ ಅಸೋಸಿಯೇಷನ್ ಪ್ರತಿನಿಧಿಗಳು ನವದೆಹಲಿಯಲ್ಲಿ ಮನವಿ ಸಲ್ಲಿಸಿದ್ದಾರೆ.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಕೋಲಾರದ ಸಂಸದ ಎಂ.ಮಲ್ಲೇಶ್ ಬಾಬು ಸಹಕಾರದೊಂದಿಗೆ ಮೈಸೂರು ಭಾಗದ ಪೆಟ್ರೋಲ್ ಬಂಕ್ ಮಾಲೀಕರುಗಳಾದ ಹೆಚ್.ಕೆ.ರಮೇಶ್, ರಂಜಿತ್ ಹೆಗ್ಡೆ, ಕೆ.ಎಸ್.ರವಿಶಂಕರ್, ಭಾಸ್ಕರ್ ಜಯರಾಮ್, ಆಕಾಶ್ ಶಿವ, ಬಿ.ಜಿ.ಶಿವಕುಮಾರ್ ಮತ್ತಿತರರು ಸಲ್ಲಿಸಿದ ಮನವಿಗೆ ಕೇಂದ್ರ ಸಚಿವರುಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಈ ಬಗ್ಗೆ ಸಂಸದ ಯದುವೀರ್ ಅವರೂ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು, ಮೈಸೂರಿನಲ್ಲಿ ಆರೇಳು ದಶಕಗಳಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಐಓಸಿಎಲ್ ಡಿಪೋವನ್ನು ಬೆಂಗಳೂರಿನ ದೇವಣಗೊಂಥಿಗೆ ಸ್ಥಳಾಂತರಿಸುವ ಚಿಂತನೆ ಕೈಬಿಡಬೇಕು. ಈ ಪ್ರದೇಶದ ಆರೇಳು ಜಿಲ್ಲೆಗಳಿಗೆ ಪರಿಣಾಮಕಾರಿಯಾಗಿ ಇಂಧನ ಪೂರೈಸುತ್ತಿರುವ ಈ ಡಿಪೋ ದಕ್ಷಿಣ ಕರ್ನಾಟಕದ ಪೆಟ್ರೋಲಿಯಂ ಪೂರೈಕೆ ಮೂಲಸೌಕರ್ಯದ ಅನಿವಾರ್ಯ ಭಾಗವಾಗಿದೆ. ಇದರ ಪ್ರಾದೇಶಿಕ ಪ್ರಾಮುಖ್ಯತೆ ಮತ್ತು ಸ್ಥಳಾಂತರದಿಂದ ಉಂಟಾಗಬಹುದಾದ ಅನಾನುಕೂಲತೆಗಳನ್ನು ಪರಿಗಣಿಸಿ, ಮೈಸೂರಿನಲ್ಲೇ ಡಿಪೋ ಮುಂದುವರೆಸಲು ಅಗತ್ಯ ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪಿಎಚ್.ಡಿ



ಮೈಸೂರು, ಆ.13– ಮೈಸೂರಿನ ಹಿನಕಲ್ ಗ್ರಾಮದ ನಿವಾಸಿ ಹರೀಶ್ ರಂಗೇಗೌಡ ಅವರು ಡಾ.ಖೈಸರ್ ಜಹಾನ್ ಬೇಗಂ ರವರು ಮಾರ್ಗದರ್ಶನದಲ್ಲಿ ಸಂಶೋದನೆ ನಡೆಸಿ ಮಂಡಿಸಿದ 'ಮಾರ್ಕೆಟಿಂಗ್ ಆಫ್ ಪಬ್ಲಿಕ್ ಲೈಬ್ರರಿ ಸರ್ವೀಸಸ್ ಇನ್ ದಿ ಸಿಟಿ ಆಫ್ ಮೈಸೂರ್' ಎ ಸ್ಟಡಿ ಮಹಾ ಪ್ರಬಂಧವನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.